ಉತ್ತರ ಹೇಳುತ್ತಿದ್ದೆ ಎಂದು ಹೇಳಿದರೆ ಇದರಿಂದ ಸರ್ಕಾರಕ್ಕೆ ಗೌರವ ಬರುತ್ತದೆಯೇ ? ಇದನ್ನು ದೊಂಬಿ ಪ್ರಕರಣ ಎಂದು ಹೊಸ ತಿರುವು ಕೊಡುವುದಕ್ಕೆ ಪ್ರಯತ್ನ ಪಟ್ಟಿದ್ದಾರೆ. ಈ ಗಲಾಟೆಯಲ್ಲಿ ಆಸ್ತಿ ನಷ್ಟವಾಗಿದೆ, ಇದು ಎಲ್ಲರಿಗೂ ಗೊತ್ತಿದೆ. ಜನತಾ ಪಕ್ಷದವರು ಹೋಗಿ ಎಲ್ಲ ಒಡೆದು ಹಾಕಿದ್ದಾರೆ. ಇದರಲ್ಲಿ ಯಾವ ಕಾಂಗ್ರೆಸ್ ವ್ಯಕ್ತಿಗಳ ಮನೆ ನಷ್ಟವಾಗಿದೆ, ಆಸ್ತಿ ನಷ್ಟವಾಗಿದೆ, ಹೊಸ ಮನೆ ಕಟ್ಟಿದ್ದನ್ನು ಒಡೆದುಹಾಕಿದ್ದಾರೆ, ಯಾರು ತೊಂದರೆಗೆ ಗುರಿಯಾಗಿದ್ದಾರೆ ಎಂಬ ಬಗ್ಗೆ ದಯಮಾಡಿ ಈ ಸಭೆಗೆ ವಿವರಗಳನ್ನು ಕೊಡಬೇಕು. ಇದನ್ನು ನೀವು ದೊಂಬಿ ಪ್ರಕರಣ ಎಂದು ಹೇಳುತ್ತಿದ್ದೀರಿ, ನೀವು ದೇವರ ಮುಂದೆ ಉತ್ತರ ಹೇಳಬೇಕಾಗುತ್ತದೆ. ಪಾಪದ ಹೊರೆಯನ್ನು ಹೊತ್ತುಕೊಂಡು ಹೋಗುತ್ತೀರಿ. ಶಾಸಕತನ ಶಾಶ್ವತವಲ್ಲ- ಬಹಳ ಜನ ಈಗಾಗಲೇ ಹೋಗಿದ್ದಾರೆ. ತಮ್ಮ ಆತ್ಮಕ್ಕೆ ಹೇಳಿಕೊಳ್ಳಿ, ಕುರ್ಚಿಗೋಸ್ಕರ ಈ ಪಾಪದ ಕೆಲಸವನ್ನು ಮಾಡಿ ಹೊರೆಯನ್ನು ಹೊತ್ತುಕೊಳ್ಳಬೇಡಿ.

ಶ್ರೀ ಹೆಚ್. ಎಂ. ಚನ್ನಬಸಪ್ಪ,—ದೇವೇಗೌಡರಿಗೆ ಹೇಳಬಲ್ಲೆ ನಿಮಗೆ ಇರತಕ್ಕ ಆತ್ಮಕ್ಕಿಂತ ಕಠೋರವಾದ ಆತ್ಮ ನನಗೆ ಇದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಕಲ್ಲಿನಂತಹ ಆತ್ಮ ಅದು. ಬಹಳ ಪಜನಾಗಿದೆ.

ಶ್ರೀ ಹೆಚ್. ಎಂ ಚನ್ನಬಸಪ್ಪ.—ಪಜನ್ ಅಂದರೆ ಪೂರ್ ಎಂದು.

SRI B. PUTTASWAMAIAH —It is really poor.

ಶ್ರೀ ಹೆಚ್. ಡಿ ದೇವೆಗೌಡ.—ಅಂದು ಚೌಡರೆಡ್ಡಿ ರೂಮಿನಲ್ಲಿ ಎಸ್.ಪಿ. ಬಂದು ಮಲಗಿದ್ದರು. At least let the Government examine this aspect. The S. P. stays with Chowda Reddy in his room I must compliment that Sub-Inspector for having registered the case knowing the relationship between the S. P. and Sri Chowda Reddy.

ಶ್ರೀ ಕಾಗೋಡು ತಿಮ್ಮಪ್ಪ.—ಎಸ್.ಪಿ. ಮ್ಯಾನು ಯಾವಾಗಲೂ ಶಾಸಕರ ಭವನದ ಹತ್ತಿರ ನಿಂತಿರುತ್ತ ಏಕೆ ?

ಶ್ರೀ ಹೆಚ್. ಡಿ. ದೇವೆಗೌಡ — ವಿಚಾರ ಮಾಡುತ್ತಾರೆ. It is going to bring disegrace to the I.P.S. cadre.

SRI H M. CHANNABASAPPA.—I am appealing to the Hon'ble Members with all the vehemence at my command. ಇಷ್ಟು ಮಾತ್ರ ನಾನು ಭರವಸೆ ಕೊಡಬಲ್ಲೆ. ನ್ಯಾಯವನ್ನು ಪರಿಪಾಲನೆ ಮಾಡುವ ಭರವಸೆ ಇದೆ. ಇದರ ಬಗ್ಗೆ ಕೂಲಂಕಷವಾಗಿ ವಿಚಾರಮಾಡಿ ಎಷ್ಟು ಅಂಶಗಳು ಬೇಕು ಎಲ್ಲವನ್ನು ಕೂಡ ಸಭೆಯ ಮುಂದೆ ಇಡುವುದಕ್ಕೆ ನನ್ನ ಅಭ್ಯಂತರ ಏನೂ ಇಲ್ಲ ಆದರೆ ಇದು ಅಡ್ಜರ್ನಮೆಂಟ್ ಮೋಷನ್‌ಗೆ ಲಗತ್ತಾಗಿ ಇಲ್ಲ.

MADAM SPEAKER —I cannot give concent to this adjournment motion.

Budget Estimates for 1977-78
Demands for Grants

Demand No. 44 – Food and Civil Supplies and
Demand No. 47 – Forests.

SRI K H. PATIL (Minister for Food and Forests).—Madam, on the recommendation of the Governor, I beg to move the following Demands for Grants.

"That a sum not exceeding Rs 52,46,32,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 44 'Food and Civil Supplies'.

"That a sum not exceeding Rs. 17 92,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect Demand No. 47 of 'Forest'.

MADAM SPEAKER.— Motions moved.

"That a sum not exceeding Rs. 52 46,32,000 inclusive of the sum granted on account' be granted to the Government to defray the charges which will come in course of payment during the financial year ending 31st day of March 1978 in respect of Demand No. 44 'Food and Civil Supplies'.

"That a sum not exceeding Rs. 17,92,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 47 'Forest',

ಶ್ರೀ ಕೆ. ಎಂ. ರುದ್ರಪ್ಪನವರು —(ಅಧ್ಯಕ್ಷರ ಪೀಠದಲ್ಲಿ ಅಲಂಕರಿಸಿದರು.)

ಶ್ರೀ ಕಾಗೋಡುತಿಮ್ಮಪ್ಪ (ಸಾಗರ).— ಮಾನ್ಯ ಅಧ್ಯಕ್ಷರೇ, ಅರಣ್ಯ ಮತ್ತು ಆಹಾರ ಖಾತೆಯ ಸಚಿವರು ತಂದಿರತಕ್ಕ ಈ ಬೇಡಿಕೆಯನ್ನು ವಿರೋಧಿಸಿ ಮಾತನಾಡುವುದಕ್ಕೆ ನಾನು ಇಷ್ಟಪಡುತ್ತೇನೆ. ನಾನು ಮಲೆನಾಡಿನವನು ಅವರು ಬಯಲು ಸೀಮೆಯವರು. ಮಲೆನಾಡಿನ ದೃಷ್ಟಿಯಿಂದ ಹಾಗೂ ಮಲೆನಾಡಿನ ಜನರ ದೃಷ್ಟಿಯಿಂದ ನಮ್ಮ ಅರಣ್ಯ ಖಾತೆಯ ಸಚಿವರು ವರವಾಗುವುದಕ್ಕೆ ಬದಲಾಗಿ ಶಾಪವಾಗಿ ಪರಿಣಮಿಸಿದ್ದಾರೆ ಎಂದು ನಾನು ಅವರ ಮೇಲೆ ಆಪಾದನೆ ಮಾಡಬೇಕಾಗಿದೆ. ಅವರು ಅರಣ್ಯವನ್ನು ಉಳಿಸಿಕೊಳ್ಳುವ ಕಾತುರತೆಯನ್ನು ಹೊಂದಿದ್ದಾರೆ ಅದಕ್ಕಾಗಿ ನಾನು ಆಕ್ಷೇಪಣೆಯನ್ನು ಎತ್ತುವುದಿಲ್ಲ. ಆದರೆ, ಅರಣ್ಯದ ಬಗ್ಗೆ, ಮಲೆನಾಡಿನ ಜನರ ಬೇಡಿಕೆ ಏನು ಇದೆ ಅದನ್ನು ಈಡೇರಿಸತಕ್ಕ ಸನ್ನಿವೇಶದಲ್ಲಿ ಮಾನ್ಯ ಸಚಿವರು ವಿಫುಲರಾಗಿದ್ದಾರೆ. ಅವರು ಅರಣ್ಯವನ್ನು ಉಳಿಸಿಕೊಳ್ಳಬೇಕು ಎನ್ನುವ ಒಂದೇ ಕಾರಣದಿಂದ ಮಲೆನಾಡಿನ ಸಾಮಾನ್ಯ ಜನರನ್ನು ಕಡೆಗಣಿಸಿದ್ದಾರೆ ಎಂದು ಹೇಳಬೇಕಾಗಿದೆ ಇದು ಇಂದಿನದಲ್ಲ ಹಲವಾರು ವರ್ಷಗಳಿಂದ ಈ ವಿಚಾರದಲ್ಲಿ ಸದನದ ಒಳಗೆ ಮತ್ತು ಹೊರಗೆ ನಾವುಗಳು ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಆದರೆ ಇವತ್ತಿನವರೆವಿಗೂ ಇದನ್ನು ಒಂದು ವಿಶಿಷ್ಟವಾದ ಸಮಸ್ಯೆ ಎಂದು ತಿಳಿದುಕೊಂಡು ಇದಕ್ಕೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನವನ್ನು ಮಾಡಲಿಲ್ಲ ಎನ್ನುವ ವಿಷಾದ ನಮಗೆ ಇದೆ. ಇವತ್ತು ನಾನು ಯಾರೋ ಬಂಡವಾಳಷಾಹಿಗಳ ಪರವಾಗಿ, ಸಾಕಷ್ಟು ಜಮೀನು ಹೊಂದಿರತಕ್ಕವರ ಪರವಾಗಿ ಇನ್ನೂ ಹೆಚ್ಚಿನ ಆಸೆಯಿಂದ ಹೆಚ್ಚಿನ ಜಮೀನನ್ನು ಆಕ್ರಮಣ ಮಾಡಿರತಕ್ಕವರ ಬಗ್ಗೆ ಹೇಳುವುದಿಲ್ಲ. ಮಾನ್ಯ ಮಂತ್ರಿಗಳೂ ಕೂಡ ನಿನ್ನೆ ಒಂದು ಸಂದರ್ಭದಲ್ಲಿ ಹೇಳುತ್ತಾ 30 ಸಾವಿರ ಎಕರೆ ಬರುತ್ತೆ ಎಂದು ಹೇಳಿದ್ದಾರೆ. ಅವರ ಪ್ರಕಾರ ಸಾಮಾನ್ಯ ಜನರು ಮಲೆನಾಡು ಪ್ರದೇಶದಲ್ಲಿ ಅರಣ್ಯಕ್ಕೆ ಸೇರಿದಂತ ಭೂಮಿಯನ್ನು ಸಾಗುವಳಿ ಮಾಡುವುದರ ಜೊತೆಗೆ ಅಲ್ಲಿಯೇ ಮನೆಗಳನ್ನು ಕೂಡ ಕಟ್ಟಿಕೊಂಡಿದ್ದಾರೆ. ಸಾಗುವಳಿ ಮಾಡಿದ ಭೂಮಿಯಲ್ಲಿ ಭಾಗಾಯಿತು ಬೆಳೆ. ತೆಂಗಿನ ಮರಗಳನ್ನು ಕೂಡ ಹಾಕಿರತಕ್ಕಂಥ ಜನ ಕೂಡ ಇದ್ದಾರೆ. ಇವತ್ತು ಆ ಜನ ಅದನ್ನೇ ನಂಬಿಕೊಂಡು ಇದ್ದಾರೆ.

ಅವರುಗಳು ಅಲ್ಲಿ ಬಹಳ ದಿವಸದಿಂದ ಇದ್ದಾರೆ, ಈವೊತ್ತಿಂದ ಅಲ್ಲ ಅಥವಾ ನಮ್ಮ ಅರಣ್ಯ ಸಚಿವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಅಲ್ಲಾ ಬಹಳ ದಿವಸದಿಂದಲೂ ಇದ್ದಾರೆ. ಅವರು ಆ ಅರಣ್ಯದ ಮಧ್ಯ ಭಾಗದಲ್ಲೇ ಇದ್ದು ಜೀವನ ಮಾಡುತ್ತಾ ಇರುವುದರಿಂದ ಅವರು ಆ ಅರಣ್ಯವನ್ನು ಬಿಟ್ಟು ಬದುಕುವುದಕ್ಕೆ ಬೇರೆ ಮಾರ್ಗವೇ ಇಲ್ಲ. ಒಂದು ವೇಳೆ ಅವರು ಆ ಅರಣ್ಯವನ್ನು ಬಿಟ್ಟು ಬದುಕುವುದಕ್ಕೆ ಬೇರೆ ಮಾರ್ಗ ಇದ್ದರೆ ಮಾನ್ಯ ಸಚಿವರು ತೋರಿಸಿ ಕೊಡಬೇಕು. ಅವರು ಆ ಅರಣ್ಯದಲ್ಲಿರುವ ಭೂಮಿಯಲ್ಲಿ ಸಾಗುವಳಿ ಮಾಡಿಕೊಂಡು ತಮ್ಮ ಜೀವನವನ್ನು ಸಾಗಿಸುತ್ತಿದ್ದಾರೆ. ಈ ಮಾತು ನಾನು ಹೇಳುತ್ತಾ ಇರುವುದು ಪ್ರಾಮಾಣಿಕವಾದ ವಿಚಾರ. ಸತ್ಯವಾದ ವಿಚಾರ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಿಂದೆ ಒಂದು ಸಾರಿ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಾಗ ಇದರ ಬಗ್ಗೆ ಅವರು ಭರವಸೆ ಕೊಟ್ಟರು. ಅವರು ಭರವಸೆ ಕೊಟ್ಟು 6 ತಿಂಗಳಾದರೂ ಕೂಡ ಆ ಭರವಸೆ, ಭರವಸೆಯಾಗಿಯೇ ಉಳಿತೇ ವಿನಾ ಅದನ್ನು ಪೂರ್ಣಗೊಳಿಸುವುದಕ್ಕೆ ಆಗಲಿಲ್ಲ. ನಿನ್ನೆ ದಿವಸ ಅರಣ್ಯ ಸಚಿವರು ಏನು ಹೇಳಿದರು ಎಂದರೆ ಇದರ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡುತ್ತಿದ್ದೇವೆ ಎಂದು. ಯಾರು ಯಾರು ಎರಡು ಎಕರೆ ಒಳಪಟ್ಟು ಸಾಗುವಳಿ ಮಾಡುತ್ತಿದ್ದಾರೆ. ಯಾರು ಯಾರು ಎರಡು ಎಕರೆ ಮೇಲ್ಪಟ್ಟು ಸಾಗುವಳಿ ಮಾಡುತ್ತಿದ್ದಾರೆ ಈ ಬಗ್ಗೆ ಅಂಕಿಅಂಶಗಳನ್ನು ಸಂಗ್ರಹಣೆ ಮಾಡುವ ಕೆಲಸದಲ್ಲಿ ಪ್ರಯತ್ನ ಮಾಡುತ್ತಾ ಇದ್ದೇವೆ ಅಂತ ಹೇಳಿದರು. ಆದರೆ ಈ ಕೆಲಸ ಬೇಗನೆ ತೀರ್ಮಾನವಾಗದೇ ಹೋದರೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ನಿಮ್ಮ ಸರ್ಕಾರದ ಆಡಳಿತದ ಯಂತ್ರ ಇದೆಯಲ್ಲಾ ಅದು ಬಸವನ ಹುಳದ ಹಾಗೆ ಹೋಗುತ್ತಾ ಇದೆ. ಯಾರಿಗೂ ಪ್ರಯೋಜನವಾಗುವುದಿಲ್ಲ. ಆ ಅಧಿಕಾರಿಗಳ ಮನಸ್ಸಿನಲ್ಲಿ ಏನು ಇದೆಯೋ ನನಗೆ ಗೊತ್ತಿಲ್ಲ. ತಮಗೆ ಈ ವಿಚಾರದಲ್ಲಿ ಒಂದು ಸಣ್ಣ ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಒಬ್ಬ ಬಡವ ಒಂದು ಎಕರೆ ಭೂಮಿಯನ್ನು ಸರ್ಕಾರದಿಂದ ತೆಗೆದುಕೊಳ್ಳಬೇಕಾದರೆ ಅವನು ಎಷ್ಟರಮಟ್ಟಿಗೆ ಪ್ರಯತ್ನ ಪಡಬೇಕು ಅನ್ನುವುದರ ಬಗ್ಗೆ ಒಂದು ಉದಾಹರಣೆ ಕೊಟ್ಟು ಹೇಳುತ್ತೇನೆ ನಮ್ಮ ಊರಿನ ಒಂದು ಹಳ್ಳಿಯಲ್ಲಿ ಮಂಜ ಅಂತ ಒಬ್ಬ ಬಡವ ಇದ್ದಾನೆ. ಅವನಿಗೆ ಸರ್ಕಾರದಿಂದ ಪ್ರಯತ್ನ ಪಟ್ಟು ಎರಡು ಎಕರೆ ಭೂಮಿಯನ್ನು ದರಖಾಸ್ತಿನಿಂದ ಕೊಡಿಸಬೇಕು ಅಂತ ಲ್ಯಾಂಡ್ ಗ್ರ್ಯಾಂಟ್ ಕಮಿಟಿಯಲ್ಲಿ ತೀರ್ಮಾನವಾಯಿತು. ಅವನು ಬಹಳ ನಿರ್ಗತಿಕ, ಏನೇನೂ ಇಲ್ಲ. ಅವನಿಗೆ ಆ ಭೂಮಿ ಬೇಕಾದರೆ 2500 ರೂಪಾಯಿ ಕಟ್ಟಬೇಕು ಅಪ್‌ಸೆಟ್ ಪ್ರೈಸ್‌ನಲ್ಲಿ ಕೊಟ್ಟಿದ್ದೇವೆ ಅಂತ ಹೇಳಿದರು. ಇಲ್ಲದೇ ಹೋದರೆ ಅದನ್ನು ವಜಾ ಮಾಡಿ ಎಂದರು. ಆತನಿಗೆ ಹಣ ಕಟ್ಟುವುದಕ್ಕೆ ಏನೇನೂ ಇಲ್ಲ. ಬಹಳ ನಿರ್ಗತಿಕ. ನಂತರ ಅವನು ಡಿವಿಷನಲ್ ಕಮೀಷನರ್ ಹತ್ತಿರ ಹೋದನು. ಅವರು ನೀನು ಕಂತು ಮೂಲಕ ಕೊಡು ಎಂದು ಹೇಳಿದರು. ಅವನು ಇದಕ್ಕೆ 4 ವರ್ಷದಿಂದಲೂ ಸುತ್ತಾಡಿದರೂ ಕೂಡ ಅವನಿಗೆ ಭೂಮಿ ಸಿಗಲಿಲ್ಲ. ಆದುದರಿಂದ ನಾನು ಹೇಳುತ್ತೇನೆ, ನಿಮ್ಮ ಸರ್ಕಾರದ ಯಂತ್ರ ಇದೆಯಲ್ಲಾ ಅದು ಸಾಮಾನ್ಯ ಜನರಿಗೆ ಭೂಮಿ ಕೊಡುತ್ತೇವೆ ಎಂದು ಹೇಳಿದರೆ ಅದರ ಬಗ್ಗೆ ನನಗೇನೋ ಅನುಮಾನವಾಗುತ್ತದೆ. ಏತಕ್ಕೆಂದರೆ ಈ ಆಡಳಿತ ಯಂತ್ರವನ್ನು ಸ್ವಲ್ಪ ಚುರುಕುಗೊಳಿಸಬೇಕು, ಶೀಘ್ರ ಗತಿಯಲ್ಲಿ ಕೆಲಸ ಮಾಡುವಂತೆ ಪ್ರಯತ್ನ ಮಾಡಬೇಕು ಇಲ್ಲದೇ ಹೋದರೆ ಅವರು ಮಾಡುವುದಿಲ್ಲ. ನೀವು ಯಾವ ಕಛೇರಿಗೆ ಹೋಗಿ ನೋಡಿ. ನೀವು ಆ ಬಗ್ಗೆ ಇನ್‌ಷಿಯೇಟ್ ತೆಗೆದುಕೊಂಡು ಪ್ರಯತ್ನ ಮಾಡದೇ ಹೋದರೆ ಶ್ರೀಘ್ರಗತಿಯಲ್ಲಿ ಕೆಲಸ ಆಗುವುದಿಲ್ಲ. ಈ ರೀತಿಯಾಗಿ ನಿಮ್ಮ ಆಡಳಿತ ಕುಸಿದಿದೆ. ಆದುದರಿಂದ ನೀವು ಹಾಕಿಕೊಂಡಿರತಕ್ಕಂಥಾ ವೇಗದಲ್ಲಿ ಈ ಕೆಲಸವನ್ನು ಮಾಡುತ್ತೇವೆ ಅಂತ ಆಲೋಚನೆ ಮಾಡುವುದಾದರೆ ಖಂಡಿತವಾಗಿಯೂ ಅವರಿಗೆ ಭೂಮಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ಈಗ ಸಂಗ್ರಹಿಸತಕ್ಕಂಥಾ ಅಂಕಿ ಅಂಶಗಳು ಲೆಕ್ಕಚಾರ ಬರೀ ಕಾಗದದ ಮೇಲೆ ಇರುತ್ತದೇ ವಿನಾ ಸಮಸ್ಯೆಯನ್ನು ಬಗೆಹರಿಸುವುದಕ್ಕಲ್ಲ. ಏತಕ್ಕೆಂದರೆ ಅವರು ಮೊದಲಿನಿಂದಟೂ ಅಲ್ಲೇ ಹುಟ್ಟಿ ಅಲ್ಲೇ ಬೆಳೆದು, ಅದರಲ್ಲೇ ತಮ್ಮ ಜೀವನವನ್ನು ಮಾಡಿಕೊಂಡು ಹೋಗುತ್ತಾ ಇರಬೇಕಾದರೆ ಅವರನ್ನು ಅಲ್ಲಿಂದ ಬಿಡಿಸುತ್ತೇವೆ ಅಂತ ಹೇಳಿದರೆ ಅದು ಬರೇ ಕಾಗದದಲ್ಲಿ ಮಾತ್ರ ಆಗುತ್ತದೇ ವಿನಾ ಕಾರ್ಯತಃ ಆಗುವುದಿಲ್ಲ. ಅವರನ್ನು ಬಿಡಿಸಬೇಕು ಅಂತ ಹೊರಟರೆ ನಂತರ ಅದರ ಲೆಕ್ಕಾಚಾರವೇ ಬೇರೆಯಾಗುತ್ತದೆ. ಆದುದರಿಂದ ನೀವು ಈ ಸಮಸ್ಯೆಯನ್ನು ಸಂಶಯಾಸ್ಪದನಿಂದ ಅಳೆಯುವುದಕ್ಕೆ ಹೋಗಬೇಡಿ. ಈಗ ನಿಮ್ಮ ವೇಗ ಚೆನ್ನಾಗಿದೆ ಅಂತ ನಾನು ತಿಳಿದುಕೊಂಡಿದ್ದೆ. ಆದರೆ ಈಗ

ನಿಮ್ಮ ಕುದುರೆಯೂ ಕೂಡ ಬರಬರುತ್ತಾ ಕತ್ತೆರೀತಿಯಂತೆ ಆಗಿದೆ, ಈಗ ನಿಮ್ಮ ವೇಗ ನಿಂತು ಹೋಗಿದೆ. ಇವೊತ್ತು ಒಬ್ಬ ಸಣ್ಣ ಹಿಡುವಳಿದಾರ ಅರಣ್ಯದಲ್ಲಿ ಒಂದು ಸಣ್ಣ ಮನೆ ಕಟ್ಟಿಕೊಂಡು 10 ಗುಂಟೆಯಲ್ಲೋ, 5 ಗುಂಟೆಯಲ್ಲೋ ಬೇಸಾಯ ಮಾಡಿಕೊಂಡು ಸಾಗುವಳಿ ಮಾಡಿಕೊಂಡು ಸಾಗುವಳಿ ಮಾಡಿಕೊಂಡಿದ್ದರೆ ಅದರಿಂದೇನೂ ನಿಮ್ಮ ಅರಣ್ಯಕ್ಕೆ ಭಾಧಕವಾಗುವುದಿಲ್ಲ, ಎಂದು ಹೇಳುತ್ತೇನೆ. ಈ ಬಗ್ಗೆ 3 ತಿಂಗಳಿನಲ್ಲಿ ತೀರ್ಮಾನ ಮಾಡಬೇಕು ಅಂತ ನಿಮಗೇನಾದರೂ ಮನಸ್ಸು ಇದ್ದರೆ, ಅದರಲ್ಲಿ ಶ್ರದ್ಧೆ ಇದ್ದರೆ ಆ ಕೆಲಸ ಮಾಡಬೇಕು. ನನಗೆ ಗೊತ್ತಾಗುತ್ತದೆ, ನಿಮಗೆ ಈ ಕೆಲಸದಲ್ಲಿ ಆಸಕ್ತಿ ಇಲ್ಲ, ಶ್ರದ್ಧೆ ಇಲ್ಲ ಅಂತ ನಾನು ಹೇಳಬೇಕಾಗುತ್ತದೆ. ಏತಕ್ಕೆಂದರೆ ಗಾಡಿ ಮುಖ್ಯ ಮಂತ್ರಿಗಳ ಹತೋಟಿಯಲ್ಲಿ ಇರುವುದರಿಂದ ಅವರು ಗಾಡಿ ಹೊಡೆಯುತ್ತಿದ್ದಾರೆ. ಇನ್ನು ಇದಕ್ಕೆ ತಬಲ ಬಾರಿಸುವವರು ಒಬ್ಬರು ಬೇಕಲ್ಲಾ ಅದಕ್ಕೋಸ್ಕರ ನೀವೆಲ್ಲಾ ಇದ್ದೀರಿ, ಒಂದು ಕಡೆ ಅವರು ಗಾಡಿ ಹೊಡೆಯುತ್ತಾರೆ, ಇನ್ನೊಂದು ಕಡೆ ನೀವು ತಬಲ ಬಾರಿಸುತ್ತೀರಿ, ಇದರಿಂದ ಈ ಮಧ್ಯೆ ಇರುವ ಬಡ ಜನರು ಈವೊತ್ತಿನ ದಿವಸ ನಿರಪರಾಧಿಗಳಾಗುತ್ತಿದ್ದಾರೆ. ದಯವಿಟ್ಟು ಆರೀತಿ ಮಾಡಬೇಡಿ ಎಂದು ನಾನು ಕಳಕಳಿಯಿಂತ ಕೈಮುಗಿದು ಕೇಳಿಕೊಳ್ಳುತ್ತೇನೆ ಮಲೆನಾಡಿನ ಜನತೆ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಈ ಬಗ್ಗೆ ನಾವು ಸಾಕಷ್ಟು ಸಂಶಯ ಪಡಬೇಕಾಗಿದೆ ಅವರಿಗೆ ಏನು ಉಪಕಾರವನ್ನೂ ಸಹ ಮಾಡುತ್ತಾ ಇಲ್ಲ. ಅರಣ್ಯಖಾತೆ ಶ್ರೀಮಾನ್ ಕೆ. ಹೆಚ್. ಪಾಟೀಲ್ ಕೈಯ್ಯಲ್ಲಿ ಇರುವವರೆಗೂ ಅದರಲ್ಲೂ ಶ್ರೀ ಮಾನ್ ದೇವರಾಜ ಅರಸ್ ಸರ್ಕಾರ ಇರುವವರೆಗೂ ಕೂಡ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ, ಇದರ ಆಸೆಯನ್ನು ಕೈಬಿಟ್ಟುಬಿಡಿ, ಮುಂದೆ ಇನ್ನೊಂದು ಸರ್ಕಾರ ಬಂದಾಗ ಈ ಸಮಸ್ಯೆ ಪರಿಹಾರವಾಗಬಹುದು ಅನ್ನುವ ಮಾತನ್ನು ಆ ಜನರಿಗೆ ನಾವು ಹೇಳಿದೆವು.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ಮಾನ್ಯ ಸದಸ್ಯರು ಮುಂದೆ ಇನ್ನೊಂದು ಸರ್ಕಾರ ಅನ್ನುವ ಪದ ಹೇಳಿದರು, ಅದು ಯಾವ ಸರ್ಕಾರ ಅಂತ ಹೇಳಲಿಲ್ಲಾ, ಕಾಂಗ್ರೆಸ್ ಸರ್ಕಾರವೇ ಅಥವಾ ನಿಮ್ಮ ಸರ್ಕಾರವೇ ?

ಶ್ರೀ ಕಾಗೋಡು ತಿಮ್ಮಪ್ಪ —ಮುಂದಿನ ಸರ್ಕಾರ ಎಂದರೆ ಚುನಾವಣೆಯಲ್ಲಿ ಯಾರು ಜನರಿಂದ ಆರಿಸಿ ಬಂದು ಸರ್ಕಾರ ನಡೆಸುತ್ತಾರೋ ಅವರು ಅನ್ನುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು ಚುನಾವಣೆ ಕಾಲದಲ್ಲಿ ಮುಖ್ಯ ಮಂತ್ರಿಗಳು ಒಂದು ಭರವಸೆ ರೂಪದಲ್ಲಿ ಏನು ಹೇಳಿದರು ಎಂದರೆ ಅದನ್ನು ಮಾಡಿಯೇ ಮಾಡುತ್ತೇವೆ ಅಂತ ಏನು ಹೇಳಿದರು ಅದನ್ನು ಮಾಡಿದ್ದಾರೆಯೇ ? ಆ ರೀತಿಯಾಗಿ ಭರವಸೆ ಮಾಡಬಾರದು. ಒಂದು ವೇಳೆ ಭರವಸೆ ಕೊಟ್ಟರೆ ಅದನ್ನು ಇಂತಿಷ್ಟು ಅವಧಿಯಲ್ಲಿ ಪೂರೈಸಬೇಕು. ಇದರಿಂದ ಮಲೆನಾಡಿನ ಜನರು ಭ್ರಮೆಗೊಂಡಿದ್ದಾರೆ. ಅವರು ಅನೈತಿಕವಾದಂಥಾ ಕೆಲಸವನ್ನು ಮಾಡುವುದಿಲ್ಲ. ಒಂದು ವೇಳೆ ಇದರಿಂದ ಲಾಭ ಮಾಡಿಕೊಳ್ಳಬೇಕು ಅನ್ನುವುದಾದರೆ ಇಂಥಾ ಕೆಲಸವನ್ನು ವ್ಯಾಪಾರಿ ಜನರು ಮಾಡುತ್ತಾರೇ ವಿನಾ ಬೇರೆ ಸಾಮಾನ್ಯ ಜನರು ಈ ಕೆಲಸವನ್ನು ಮಾಡುತ್ತಾ ಇಲ್ಲ. ನಿಜವಾಗಿ ಸಾಗುವಳಿ ಮಾಡುವ ಜನರು ಈ ಕೆಲಸವನ್ನು ಮಾಡುವುದಿಲ್ಲ. ಈಗಲೂ ತಮಗೆ ಒತ್ತಾಯ ಪಡಿಸುತ್ತೇನೆ. ಈ ರೀತಿ ಮಾಡಿ ಮೂರು ತಿಂಗಳ ಅವಧಿಯಲ್ಲಿ ವಿಶೇಷವಾಗಿ ಪ್ರತಿಯೊಂದು ತಾಲ್ಲೂಕಿನಲ್ಲೂ ಇರತಕ್ಕಂಥಾ ಭೂಮಿಯನ್ನು ಯಾರು ಸಾಗುವಳಿ ಮಾಡುತ್ತಿದ್ದಾರೋ ಅವರು ಅರ್ಜಿಗಳನ್ನು ಹಾಕಿಕೊಳ್ಳಿ ಅಂತ ಮಾಡಿ. ನಂತರ ಒಂದು ತಿಂಗಳ ಅವಧಿಯಲ್ಲಿ ಪ್ರತಿಯೊಂದು ವಿಲೇಜ್ ಅಕೌಂಟೆಂಟ್‌ರ ಮತ್ತು ಪಂಚಾಯಿತರ ಮುಖಾಂತರ ಯಾರು ಯಾರು ಸಾಗುವಳಿ ಮಾಡುತ್ತಿದ್ದಾರೆ ಅನ್ನುವುದರ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಣೆ ಮಾಡಿ ನಂತರ ರೇಂಜರು ಮತ್ತು ತಾಸೀಲ್ದಾರರು ಸ್ಕ್ರೂಟಿನಿ ಮಾಡಿ ಈ ಪ್ರಪೋಸಲ್ಸ್ ಅನ್ನು ಮೂರು ತಿಂಗಳಿನಲ್ಲೇ ಬಗೆಹರಿಸಬೇಕು ಅಂತ ನಾನು ಒತ್ತಾಯಪಡಿಸುತ್ತೇನೆ ಒಂದು ವೇಳೆ ನೀವು ಈ ಕೆಲಸವನ್ನು ಮಾಡದೇ ಹೋದರೆ ನಿಮಗೆ ಖಂಡಿತವಾಗಿಯೂ ಮಲೆನಾಡಿನ ಜನರ ಶಾಪಕ್ಕೆ ತುತ್ತಾಗುತ್ತೀರಿ ಎಂದು ತಮಗೆ ನಾನು ಎಚ್ಚರಿಕೆಯನ್ನು ಕೊಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಒಂದು ವೇಳೆ ಸುದೈವದಿಂದ ಇನ್ನೂ ಹೆಚ್ಚಿನ ಕೆಲಸ ಮಾಡಿದರೆ ನೀವು ಹೇಳುವುದು ತಪ್ಪಾಗುತ್ತದೆ. ಶಾಪ ಮತ್ತು ಕೋಪ ಆ ಮಾತು ಬೇರೆ ವಿಷಯ. ಮಲೆನಾಡಿನ ಹಿತ ಕಾಯುವುದಕ್ಕೆ ನಿಮಗೂ ಗೊತ್ತಿದೆ ನಮಗೂ ಗೊತ್ತಿದೆ. ರಾಜ್ಯಕ್ಕೆ ಹೇಗೆ ಉಪಯೋಗ ಮಾಡಬೇಕೋ ಅದರ ಬಗ್ಗೆ ಹೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ನೀವು ಚುನಾವಣೆಯಲ್ಲಿ ಏನು ಭರವಸೆ ಕೊಟ್ಟಿರಿ. ಮತ್ತು ನಿಮ್ಮ ಶ್ರೀ ನಾಗರಾಜ್ ಅವರು ಮತ್ತು ನಿಮ್ಮ ಪಕ್ಷದ ಮುಖ್ಯ ಮಂತ್ರಿಗಳು ಶಿರಸಿಯಲ್ಲಿ ಏನು ಭಾಷಣ ಮಾಡಿದರು ಅದನ್ನು ನಾನು ಹೇಳುತ್ತೇನೆ ನೀವು ಕೊಟ್ಟಿರುವ ಮಾತನ್ನು ಪರಿಶೀಲನೆ ಮಾಡಲಿ ಎಂದು ತಮಗೆ ನಾನು ನೆನಪು ಮಾಡಿಕೊಡುತ್ತೇನೆ.

ಶ್ರೀ ಕೆ. ಹೆಚ್ ಪಾಟೀಲ್.—ನಾವು ಮಾಡುವುದಿಲ್ಲ ಅಂತ ಏನೂ ಹೇಳಲಿಲ್ಲವಲ್ಲಾ.

4-00 ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಏನೆಂದರೆ ಇವತ್ತು ಅರಣ್ಯ ಪ್ರದೇಶ ಕಡಿಮೆಯಾಗುತ್ತಾ ಬರುತ್ತಿದೆ. ನಮ್ಮ ಮಲೆನಾಡಿನಲ್ಲಿ ಇವತ್ತು ಅನೇಕ ದಟ್ಟವಾದ ಗೋಮಾಳಗಳಿವೆ, ಇವು ಸಾಗುವಳಿ ಮಾಡುವುದಕ್ಕೆ ಬರುವುದಿಲ್ಲ, ಇದರಲ್ಲಿ ಗಿಡಮರಗಳನ್ನು ಬೆಳಸಿ. ತಾವು ಇವತ್ತು ತುಂಗಭದ್ರಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಸಾಗುವಳಿ ಬರುವ ಒಳ್ಳೆಯ ಜಮೀನನ್ನು ಫಾರೆಸ್ಟ್‌ಗೆ ಸೇರಿಸಿಕೊಳ್ಳಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಿದ್ದೀರಿ ಎಂದು ಕೇಳಿದ್ದೇನೆ. ನಾನು ಒಂದು ಸಾರಿ ಮಾನ್ಯ ಬಂಗಾರಪ್ಪನವರ ಕ್ಷೇತ್ರಕ್ಕೆ ಹೋಗಿದ್ದಾಗ ಈ ವಿಚಾರವನ್ನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ ತಾವು ಅನುಸರಿಸುತ್ತಿರುವ ಈ ನೀತಿ ಯಾವ ಧಾಟಿಯದು ಎಂಬುದು ನಮಗೆ ಗೊತ್ತಾಗುತ್ತಿಲ್ಲ. ಆದುದರಿಂದ, ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ತಾವು ಇದನ್ನು ಮಾಡುವುದಕ್ಕೆ ಹೋಗಬೇಡಿ. ಇದು ಒಳ್ಳೆಯದಲ್ಲ. ನಮ್ಮ ಕಡೆ ಕಾನ್‌ಗಳು ಇವೆ. ಅದರಲ್ಲಿ ಹೆಚ್ಚುವರಿ ಇರುವುದನ್ನು ತಾವು ಫಾರೆಸ್ಟ್‌ಗೆ ತೆಗೆದು ಕೊಳ್ಳಿ. ಈ ಖಾನ್‌ಗಳು ಹೊಸನಗರ, ತೀರ್ಥಹಳ್ಳಿ ಸಾಗರ ಮುಂತಾದ ಕಡೆಗಳಲ್ಲಿವೆ. ಇವತ್ತು ಏನಾಗಿದೆ ಎಂದರೆ ಕೆಲವು ಕಡೆ ಮರಗಳನ್ನು ಕಡಿದು ಬಹಳ ಜನ ಗುತ್ತೆದಾರರು ಲಾಭ ಮಾಡಿಕೊಂಡಿದ್ದಾರೆ. ನಮ್ಮಲ್ಲಿ ರೆವಿನ್ಯೂ ಕಾನ್ ಅಷ್ಟೇ ಅಲ್ಲದೆ 4 ಆಣೆ ಕಾನ್ ಎಂದು ಕೂಡ ಇವೆ. ಇದರಿಂದ ಸೊಪ್ಪು ಮುಂತಾದು ಬರುತ್ತದೆ. ಇಂಥ 4 ಆಣೆ ಕಾನ್ ಎಲ್ಲೆಲ್ಲಿ ಇವೆ ಅವನ್ನೆಲ್ಲಾ ತಾವು ಫಾರೆಸ್ಟ್‌ಗೆ ತೆಗೆದುಕೊಳ್ಳಿ. ತಾವು ನಮ್ಮನ್ನೇ ಕೇಳಬೇಕಾದ್ದು ಇಲ್ಲ, ಗ್ರಾಮ ಪಂಚಾಯ್ತಿಗಳಲ್ಲ ಕೇಳಿದರೆ ಅವರೇ ಹೇಳುತ್ತಾರೆ. ಅವರು ಯಾವುದು ಅನಾವಶ್ಯಕ ಜಮೀನು ಎಂದು ಹೇಳುತ್ತಾರೋ ಅದನ್ನು ತೆಗೆದುಕೊಳ್ಳಿ. ಈಗ ಎಲ್ಲೆಲ್ಲಿ ಕಾಡು ಇದೆ ಅದನ್ನು ಉಳಿಸುವುದರ ಜೊತೆಗೆ ಎಲ್ಲೆಲ್ಲಿ ಮರಗಳು ಇಲ್ಲ ಅಂಥ ಕಡೆ ಮರಗಿಡಗಳನ್ನು ಬೆಳಸಿ ಕಾಡನ್ನು ಅಭಿವೃದ್ಧಿ ಮಾಡಬೇಕು, ಆದರೆ ಅರಣ್ಯದಲ್ಲಿರುವ ಮರಗಳನ್ನೆಲ್ಲಾ ಕಡಿಸುವುದು ಸರಿಯಲ್ಲ. ವೈಜ್ಞಾನಿಕವಾಗಿ ಕಾಡನ್ನು ವಿಸ್ತರಿಸುವುದಕ್ಕೆ ಪುನರ್ ಪರಿಶೀಲನೆ ಮಾಡಿ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಿ ತಾವು ಇವತ್ತು ಅನುಸರಿಸುವ ರೀತಿ ಏನಿದೆ ಇದು ಕಾಡನ್ನು ಬೆಳೆಸುವುದಕ್ಕೆ ಸಹಕಾರಿಯಾಗಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹಿಂದೆ ನಮ್ಮ ಮಲೆನಾಡಿನಲ್ಲಿ ನೀಲಗಿರಿ ಮರಗಳನ್ನು ಬೆಳೆಸುವ ಒಂದು ಕಾರ್ಯಕ್ರಮ ಇತ್ತು. ಅದು ಇತ್ತೀಚೆಗೆ ಕಡಿಮೆಯಾಗುತ್ತಿದೆ. ಏಕೆಂದರೆ ಈ ಒಂದು ಮರ ನಮ್ಮ ಮಲೆನಾಡಿನ ವಾತಾವರಣಕ್ಕೆ ಒಗ್ಗುವುದಿಲ್ಲ. ಆದುದರಿಂದ ಅಲ್ಲಿ ಬೇರೆ ಮರಗಳನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ತಾವು ಯಾವ ಕಾಡುಗಳನ್ನೂ ಕಡಿಯಬಾರದೆಂದು ಕಾನೂನು ಮಾಡಿದ್ದೀರಿ. ಇದು ಬಹಳ ಒಳ್ಳೆಯದು. ಅಲ್ಲಿ ನೀವು ನೇಮಕ ಮಾಡಿರುವ ಗಾರ್ಡ್‌ಗಳು ಅನೇಕ ಸಂದರ್ಭಗಳಲ್ಲಿ ಕಿರುಕುಳ ಕೊಡುವ ಸಂಭವ ಇದೆ. 1500 ರೂಪಾಯಿಗಳಿಗಿಂತ ಕಡಿಮೆ ಆದಾಯ ಬರುವವರು ನಾಟಾಕ್ಕೆ ಅರ್ಜಿ ಹಾಕಿದರೆ....

ಶ್ರೀ ಕೆ ಹೆಚ್. ಪಾಟೀಲ್.—ನಾವು ಬಂದ ಮೇಲೆ ಎಂ ಪಿ.ಆರ್. ರೂಲ್ಸ್‌ನ್ನು ರೆಗ್ಯುಲೇಟ್ ಮಾಡಿದ್ದೇವೆ ಇದರ ಬಗ್ಗೆ ಹಿಂದೆ ನಾನು ಒಂದು ಸಾರಿ ಒಂದು ಸ್ಟೇಟ್‌ಮೆಂಟ್ ಕೂಡ ಮಾಡಿದ್ದೇನೆ. ಅದನ್ನು ದಿ ಗೌರ್ನಮೆಂಟ್ ವಿಲ್ ಸ್ಟ್ರಿಕ್ಟ್ ಇಟ್.

ಶ್ರೀ ಕಾಗೋಡು ತಿಮ್ಮಪ್ಪ.—ವ್ಯವಸಾಯಗಾರರು ಮನೆಗಳನ್ನು ಕಟ್ಟುವಾಗ ನಾಟಾಗಳನ್ನು ಕೊಡಬೇಕೆಂದು ಸರ್ಕಾರ ಆಜ್ಞೆ ಹೊರಡಿಸಿದೆ, ಅಂಥ ಅನುಕೂಲಗಳನ್ನು ಜನರು ಪಡೆದುಕೊಳ್ಳಬಹುದೆಂದು ತಾವು ಹೇಳುತ್ತೀರಿ, ಆದರೆ ಇದು ಸಾಮಾನ್ಯವಾಗಿ ಯಾರಿಗೂ ಸಿಕ್ಕುತ್ತಿಲ್ಲ. ಇದರ ಬಗ್ಗೆ ಸರ್ಕಾರದ ಆಜ್ಞೆ ಇದ್ದರೂ ಕೂಡ ಜನರು ಅಲ್ಲಿ ಹೋಗಿ ನಾಟಾಗಳನ್ನು

ಕೇಳಿದರೆ ಅಲ್ಲಿನ ಆಫೀಸರ್‌ರವರು ಕೊಡುವುದಿಲ್ಲ. ಎಂದು ಹೇಳುತ್ತಾರೆ. ಆಯಾಯ ಸ್ಥಳದಲ್ಲಿರತಕ್ಕ ಅಧಿಕಾರಿಗಳು ಜನಗಳ ಜೊತೆಯಲ್ಲಿ ಸರಿಯಾಗಿ ವರ್ತಿಸುತ್ತಿಲ್ಲದಿರುವುದರಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ನಾನು ತವಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ, ಸಂಬಂಧಪಟ್ಟ ಅಧಿಕಾರಿಗಳಿಗೆ ಇದರ ಬಗ್ಗೆ ಸೂಕ್ತ ನಿರ್ದೇಶನವನ್ನು ಕೊಡಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರ ಏನೆಂದರೆ. ನಮ್ಮ ರಾಜ್ಯದಲ್ಲಿ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಒಂದು ಕಾರ್ಪೊರೇಷನ್‌ನ್ನು ಮಾಡಿದ್ದೀರಿ. ಇದು ನಮ್ಮ ದೇಶದ ಅರಣ್ಯ ಪ್ರದೇಶದಲ್ಲಿ ದೊರೆಯುವ ಸಂಪತ್ತನ್ನು ಉಪಯೋಗಿಸಿಕೊಂಡು ಕೆಲಸ ಮಾಡಬೇಕು. ಆದರೆ ಈ ಕಾರ್ಪೊರೇಷನ್ ಅಂಥ ಯಾವ ಕೆಲಸವನ್ನೂ ಮಾಡುತ್ತಿಲ್ಲ. ಸಣ್ಣಪುಟ್ಟ ಜನರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಮರಮುಟ್ಟುಗಳನ್ನು ಕೇಳಿದರೆ ಅಧಿಕಾರಿಗಳು ಕೊಡುತ್ತಿಲ್ಲ. ಈ ಸಂದರ್ಭದಲ್ಲಿ ತಮಗೆ ಒಂದು ಮಾತನ್ನು ಹೇಳಬೇಕೆಂದರೆ ಕಾರವಾರದಲ್ಲಿ ಈ ಇಲಾಖೆಯ ಜನರು ಲಕ್ಷಾಂತರ ರೂಪಾಯಿಗಳನ್ನು ದುರುಪಯೋಗ ಮಾಡುತ್ತಿದ್ದಾರೆ. ಈ ಬಗ್ಗೆ ಮೊದಲು ಈ ಕಡೆ ಇದ್ದ ಮಾನ್ಯ ಬಂಗಾರಪ್ಪನವರು ಅನೇಕ ಆಪಾದನೆಗಳನ್ನು ನೇರವಾಗಿ ಮಾಡಿದ್ದರು, ಆದರೆ ಸರ್ಕಾರ ಅದನ್ನು ವಿಚಾರಣೆ ಮಾಡಲಿಲ್ಲ. ಯಾರು ಆ ಹಣವನ್ನು ದರುಪಯೋಗ ಮಾಡಿದ್ದಾರೆ, ಹೇಗೆ ಮಾಡಿದ್ದಾರೆ ಎಂಬುದನ್ನು ಇದುವರೆಗೂ ಪತ್ತೆ ಹಚ್ಚಿಲ್ಲ ಎಂದರೆ ಇದಕ್ಕೆ ಏನು ಹೇಳಬೇಕೋ ನನಗಂತೂ ಗೊತ್ತಾಗುವುದಿಲ್ಲ. ಈಗಲಾದರೂ ಸರ್ಕಾರ ತಕ್ಷಣ ಇದರ ಬಗ್ಗೆ ಗಮನಹರಿಸಬೇಕೆಂದು ಹೇಳಬಯಸುತ್ತೇನೆ.

ಮಾನ್ಯ ಸಭಾಧ್ಯಕ್ಷರೆ, ಇದೊಂದು ಮುಖ್ಯ ವಿಚಾರ ಏನೆಂದರೆ, ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇನ್‌ನವರು ಮತ್ತು ಇಂಡಿಯನ್ ಪ್ಲೈವುಡ್ ಕಂಪೆನಿಯವರು ಇಬ್ಬರೂ ಸೇರಿ ಸಾಗರ ಮತ್ತು ಸಿದ್ದಾಪುರ ತಾಲ್ಲೂಕುಗಳ ಮಧ್ಯೆ ''ಕರ್ನಾಟಕ ವಿನೀಯರ್ ಕಾರ್ಖಾನೆ ಕಟ್ಟುತ್ತಿದ್ದಾರೆ. ಇದಕ್ಕೆ ಸಾರ್ವಜನಿಕರ ಹಣ ಮತ್ತು ಸರ್ಕಾರದ ಹಣ ಇಬ್ಬರದ್ದೂ ಸೇರಿದೆ. ಇದನ್ನು ಕಟ್ಟಬೇಕಾದರೆ ಸರಿಯಾದ ಟೆಂಡರ್‌ನ್ನು ಕರೆದು ಕಂಟ್ರಾಕ್ಟ್ ಕೊಡಬೇಕು ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಯಾರೇ ಆಗಲಿ ತಮ್ಮ ಹಣವನ್ನು ಖರ್ಚುಮಾಡಬೇಕಾದರೆ ಅದನ್ನು ಸರಿಯಾದ ರೀತಿಯಲ್ಲಿ ಖರ್ಚುಮಾಡುತ್ತಾರೆ. ಆದರೆ ಬೇರೆಯವರ ಹಣವನ್ನು ಖರ್ಚುಮಾಡುವಾಗ ಅನೇಕ ರೀತಿಯಲ್ಲಿ ಲೋಪ ಮಾಡುತ್ತಾರೆ. ಆದುದರಿಂದ ನಾನು ಹೇಳುವುದೇನೆಂದರೆ. ಅವರೇ ನೇರವಾಗಿ ಕೆಲಸ ಮಾಡಿಸಲಿ, ಅಥವಾ ಪೀಸ್‌ವರ್ಕ್ ಅದರೂ ಕೊಟ್ಟು ಮಾಡಿಸಲಿ. ಅದರಿಂದ ಬಹಳ ಹಣ ಉಳಿತಾಯವಾಗುತ್ತದೆ. ಇಲ್ಲದೇ ಹೋದರೆ ಇವರು ಖರ್ಚು ಮಾಡುವುದೇ ಒಂದು, ಅಲ್ಲಿ ಲೆಕ್ಕ ತೋರಿಸುವುದೇ ಒಂದು ಆಗುತ್ತದೆ. ಈ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರಿಗೆ ತಾವು ಏನು ಹಣವನ್ನು ಕೊಟ್ಟಿದ್ದೀರಿ ಅದನ್ನು ಖರ್ಚುಮಾಡುತ್ತಿದ್ದಾರೆಯೋ ಹೊರತು ಹೊಸದಾಗಿ ಅವರು ಯಾವ ಇಂಡಸ್ಟ್ರಿಯನ್ನೂ ಕೂಡ ಪ್ರಾರಂಭ ಮಾಡಿಲ್ಲ.

ಆದ್ದರಿಂದ ಕನಿಷ್ಟ ಪಕ್ಷ ಒಂದು ತಾಲ್ಲೂಕಿಗೆ ಒಂದು ಯೂನಿಟ್ಟನ್ನು ಪ್ರಾರಂಭ ಮಾಡುವಂಥಾ ವ್ಯವಸ್ಥೆಯನ್ನು ಮಾಡಬೇಕು. ಮತ್ತು ಈಗ ಪ್ರಾರಂಭ ಮಾಡಿರತಕ್ಕಂಥ ಯೂನಿಟ್ಟುಗಳಲ್ಲಿ ದುಡ್ಡು ತಿನ್ನುವುದು, ಕೊಟ್ಟಂಥ ದುಡ್ಡನ್ನು ವೃಥ ಖರ್ಚು ಮಾಡುವುದು ಈ ಕೆಲಸ ನಡೆಯುತ್ತದೆ. ಆದ್ದರಿಂದ ಶೀಘ್ರಗತಿಯಲ್ಲಿ ಕಾರ್ಯಾರಂಭಮಾಡಲು ಒತ್ತಾಯ ಮಾಡುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರೆ ಅರಣ್ಯ ಖಾತೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ ನಮ್ಮ ಮೈಸೂರು (ರು) ಪ್ರಾಣಿ ಸಂಗ್ರಹಾಲಯದಲ್ಲಿ ಪ್ರಾಣಿಗಳು ಸತ್ತಿರುವ ವಿಷಯು ಪತ್ರಿಕೆಗಳಲ್ಲಿ ಬಂದಿರುತ್ತವೆ. ಇದರ ಹಿನ್ನೆಲೆಯನ್ನು ನೋಡಿದರೆ ಅಲ್ಲಿರತಕ್ಕ ಕ್ಯೂರೇಟರ್‌ರವರಿಗೆ ಕೊಡಬೇಕಾದಂಥ ಹಣಕಾಸನ್ನು ಸಕಾಲದಲ್ಲಿ ಕೊಡದಿದ್ದ ಕಾರಣ ಪ್ರಾಣಿಗಳಿಗೆ ಒದಗಿಸಬೇಕಾದಂಥ ಆಹಾರವನ್ನು ಒದಗಿಸಲು ಸಾಧ್ಯವಾಗಿದೆ ಪ್ರಾಣಿಗಳು ಸಾಯುವ ಪರಿಸ್ಥಿತಿ ಬಂದಿದೆ ಎಂದು ನಮಗೆ ಬಂದಿರುವ ದೂರಾಗಿರುತ್ತದೆ.

ಶ್ರೀ ಕೆ. ಎಚ್. ಪಾಟೀಲ್.—ಈ ಸದನಕ್ಕೆ ಸಹಾಯ ಮಾಡುವ ದೃಷ್ಟಿಯಿಂದ ಹೇಳುವುದೇನೆಂದರೆ ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಯನ್ನು ನೋಡಿ ನನಗೂ ಕೂಡ ಗಾಬರಿಯಾಯಿತು. ಅಲ್ಲಿರತಕ್ಕ ಕ್ಯೂರೇಟರ್ ಮತ್ತು ಆಫೀಸರನ್ನು ಕರೆಸಿ ವಿಚಾರ ಮಾಡಲಾಗಿ ಕೆಲವೊಂದು ತಾಂತ್ರಿಕ

ಲೋಪದೋಷಗಳಿಂದ ತೊಂದರೆಯಾಗಿರುತ್ತದೆಂದು ತಿಳಿದು ಬಂದಿತ್ತು. ಈ ತೊಂದರೆಯನ್ನು ನಿವಾರಣೆ ಮಾಡಲು ನಿನ್ನೆ ದಿವಸವೇ ಸೂಕ್ತಕ್ರಮವನ್ನು ತೆಗೆದುಕೊಂಡಿರುತ್ತೇನೆ. ಎಲ್ಲವೂ ಸರಿಹೋಗುತ್ತದೆಂದು ತಿಳಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲವೂ ಸರಿಯಿದ್ದರೆ ಸರಿ, ನಮ್ಮದೇನು ಅಭ್ಯಂತರವಿಲ್ಲ, ಆದರೆ ಮಂತ್ರಿಗಳಲ್ಲಿ ಹೇಳುವುದಾದರೂ ಇಷ್ಟೇ, ಈ ರೀತಿ ತೊಂದರೆ ಸಂಭವಿಸಿದಾಗ ಅಲ್ಲಿದ್ದಂಥ ಅಧಿಕಾರಿಗಳು ತಕ್ಷಣ ಸೂಕ್ತ ಕ್ರಮವನ್ನು ತೆಗೆದುಕೊಳ್ಳದೆ ಏನು ಮಾಡುತ್ತಿದ್ದರೆಂದು ಕೇಳಬೇಕಾಗಿದೆ ಜವಾಬ್ದಾರಿ ಹೊತ್ತಂಥ ಅಧಿಕಾರಿಗಳು ಸಕಾಲದಲ್ಲಿ ಏನು ಕ್ರಮ ತೆಗೆದುಕೊಳ್ಳದ್ದರಿಂದ ಅವರು ಎಷ್ಟರ ಮಟ್ಟಿನ ತಪ್ಪಿತಸ್ಥರು ಎನ್ನುವುದನ್ನು ಕಂಡುಹಿಡಿಯಬೇಕು. ತಪ್ಪಿತಸ್ಥರು ಎಂದು ಕಂಡುಬಂದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಆಹಾರ ಇಲಾಖೆಗೆ ಸಂಬಂಧಪಟ್ಟ ಹಾಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ, ಮಾನ್ಯ ಅಧ್ಯಕ್ಷರೆ ಈಗಾಗಲೇ ಸೀಸನ್ ಮುಗಿದಿದೆ. ಇದನ್ನು ಹೇಳುವುದಕ್ಕೆ ಮೊದಲು ಇನ್ನೊಂದು ವಿಚಾರವನ್ನು ಹೇಳಬೇಕಾಗಿದೆ. ಈವತ್ತು ನಮಗೆ ಅರಣ್ಯದಲ್ಲಿ ಸಿಕ್ಕತಕ್ಕಂಥ ಸೌದೆ ವಿಷಯವನ್ನು ತೆಗೆದುಕೊಂಡರೆ, ಇದರ ಕೊರತೆ ಬಹಳಷ್ಟು ಇದೆ. ಈವತ್ತು ನಮ್ಮ ಸರ್ಕಾರದವರು ಕೊಟ್ಟಿರತಕ್ಕಂಥ ಪಟ್ಟಿಯ ಪ್ರಕಾರ ನಾವು ಸೌದೆಯನ್ನು ಯಾರು ಯಾರಿಗೆ ಒದಗಿಸಬೇಕು ಎನ್ನುವುದನ್ನು ಹೇಳುತ್ತೇನೆ. ಸ್ಟೀಲ್ ಫ್ಯಾಕ್ಟರಿಗಳಿಗೆ, ಇನ್ನಿತರ ಸಂಸ್ಥೆಗಳಿಗೆ ಸೌದೆಯನ್ನು ಒದಗಿಸುತ್ತಿರುವುದರಿಂದ ಈ ಸೌದೆಯ ಅಭಾವ ನಮಗೆ ಉಂಟಾಗಲು ಕಾರಣವಾಗಿರುತ್ತದೆ. ಹಿಂದೆ ಮಾಡಿಕೊಂಡಿರತಕ್ಕಂಥ ಒಪ್ಪಂದಗಳ ಕಾರಣಕ್ಕಾಗಿ ಸೌದೆಯನ್ನು ಒದಗಿಸಬೇಕಾಗಿದೆ ಎಂದು ಹೇಳುತ್ತಾರೆ. ಅರಣ್ಯ ಸಚಿವರು ಶ್ರೀ ಫೋರ್ಪಡೆಯವರ ಕಾರ್ಖಾನೆಗೆ ಸೌದೆಯನ್ನು ಕೊಡಲು ಆಜ್ಞೆಯನ್ನು ಹೊರಡಿಸಿದ್ದಾರೆ. ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಭದ್ರಾವತಿ ಕಾರ್ಖಾನೆಗೆ ಯಾವ ದರದಲ್ಲಿ ಸೌದೆಯನ್ನು ಒದಗಿಸುತ್ತಿದ್ದಾರೋ ಅದಕ್ಕಿಂತಲೂ ಕಡಿಮೆ ದರದಲ್ಲಿ ಈವತ್ತಿನ ದಿವಸ ಈ ಕಾರ್ಖಾನೆಗೆ ಸೌದೆಯನ್ನು ಒದಗಿಸುತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡುವವರಿಗೆ, ಸಣ್ಣ ಸಣ್ಣ ಉದ್ಯಮಗಳನ್ನು ಮಾಡುವಂಥ ಜನರಿಂದ ಸೌದೆಗಾಗಿ ಅರ್ಜಿಗಳನ್ನು ಸ್ವೀಕಾರ ಮಾಡಿದ್ದರೂ ಅದನ್ನೆಲ್ಲ ತಿರಸ್ಕರಿಸಿ, ನಮ್ಮ ಸಚಿವರಾದ ಶ್ರೀಮಾನ್ ಫೋರ್ಪಡೆಯವರಿಗೆ, ಮಾಜಿ ಮಹಾರಾಜರಾದಂಥ ಇವರ ಕಲ್ಯಾಣಕ್ಕಾಗಿ ಸೌದೆಯನ್ನು ಒದಗಿಸುತ್ತಿದ್ದಾರೆ ಇವರಿಗೆ ಒದಗಿಸುತ್ತಿರುವ ಸೌದೆಯನ್ನು ಬಹಿರಂಗ ಮಾರ್ಕೆಟ್‌ನಲ್ಲಿ ಏನು ಬೆಲೆ ಇದೆ ಅದರಂತೆ ಕೊಟ್ಟರೆ ಪ್ರತಿವರ್ಷ ೨೦ ಲಕ್ಷ ರೂಪಾಯಿಗಳು ನಮ್ಮ ಸರ್ಕಾರಕ್ಕೆ ಲುಕ್ಸಾನಾಗುತ್ತಿದೆ. ಅರಣ್ಯ ಮಂತ್ರಿಗಳು ಈ ವಿಷಯವನ್ನು ತಿಳಿದು ಏತಕ್ಕೆ ಸುಮ್ಮನಿದ್ದಾರೋ ನನಗೆ ತಿಳಿಯುತ್ತಿಲ್ಲ. ನಮ್ಮ ಜಿಲ್ಲೆಯವರು ಒಬ್ಬರಿದ್ದಾರೆ ಇವರು ಮುಖ್ಯಮಂತ್ರಿಯವರ ಸಮೀಪವರ್ತಿಗಳಾಗಿದ್ದಾರೆ. ಇನ್ನೂ ೩೦ ದಿವಸಗಳು ಈ ಸದನ ನಡೆಯುತ್ತದೆ ಅವರ ಕಾಲದಲ್ಲಿ ಆದ ವಸೂಲಿಬಾಜಿ ಕೆಲಸ, ಅಕ್ರಮಗಳನ್ನು ಉತ್ತರ ಕೊಡುವಾಗ ಹೇಳಬೇಕು. ಮಾನ್ಯ ಮಂತ್ರಿಗಳಲ್ಲಿ ಹೇಳುತ್ತೇನೆ, ಅದನ್ನು ರದ್ದು ಮಾಡಲು ಪ್ರಾಮಾಣಿಕವಾದ ನಿರ್ಣಯವನ್ನು ತೆಗೆದುಕೊಳ್ಳಬೇಕು, ದೇಶದ ಹಿತದೃಷ್ಟಿಯಿಂದ ಅದನ್ನು ರದ್ದುಮಾಡುವ ಧೈರ್ಯವನ್ನು ತೆಗೆದುಕೊಳ್ಳಬೇಕು. ಇದರಿಂದ ಸರ್ಕಾರಕ್ಕೆ ೮೦ ಲಕ್ಷ ರೂಪಾಯಿ ಲುಕ್ಸಾನು ಆಗುತ್ತಿರುವುದನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀ ಎಚ್ ಡಿ. ದೇವೇಗೌಡರು ಹೇಳಿದಂತೆ ಸೌದೆಯನ್ನು ಶ್ರೀ ಫೋರ್ಪಡೆಯವರಿಗೆ ಸಂಬಂಧಪಟ್ಟಂಥ ಇಂಡಸ್ಟ್ರಿಗೆ ಕೊಡತಕ್ಕ ಆಜ್ಞೆಯನ್ನು ಹೊರಡಿಸತಕ್ಕಂಥ ಕಾಲದಲ್ಲಿ ಸರ್ಕಾರ ಸ್ವಜನಪಕ್ಷಪಾತವನ್ನು ಮಾಡಿರುವುದಲ್ಲದೆ ಅಧಿಕಾರವನ್ನು ದುರುಪಯೋಗ ಮಾಡಿದೆ ಎಂದು ಹೇಳಬೇಕಾಗಿದೆ. ಏತಕ್ಕೆಂದರೆ ಈವತ್ತು ಮಲೆನಾಡು ಪ್ರದೇಶದಲ್ಲಿ ಸಣ್ಣಪುಟ್ಟ ಕೈಗಾರಿಕೆಗಳು ಇವೆ. ಇದರಲ್ಲಿ ಡಿಸ್ಟಿಲರಿ ಎಂದು ಹೊಸದಾಗಿ ಪ್ರಾರಂಭಮಾಡಿ ಇದ್ದಿಲನ್ನು ತಯಾರು ಮಾಡಲು ಸರ್ಕಾರಕ್ಕೆ ಮನವಿ ಮಾಡಿಕೊಂಡು ಅರಣ್ಯ ಸಚಿವರಿಗೆ ಅರ್ಜಿಯನ್ನು ಕೊಟ್ಟಿರುತ್ತಾರೆ. ಸಣ್ಣ ಸಣ್ಣ ಕೈಗಾರಿಕೆಗಳನ್ನು ೧೫ ಸಾವಿರದಿಂದ ಹಿಡಿದು ೫೦ ಸಾವಿರ ಒಂದು ಲಕ್ಷದವರೆಗೆ ಬಂಡವಾಳವನ್ನು ಹಾಕಿ ಬ್ಯಾಂಕುಗಳಿಂದ ೧೦–೨೦ ಸಾವಿರ ರೂಪಾಯಿಗಳನ್ನು ಸಾಲವನ್ನಾಗಿ ಪಡೆದು ಡಿಸ್ಟಿಲರಿ ಯೂನಿಟ್‌ಗಳನ್ನು ಸ್ಥಾಪನೆ ಮಾಡಿರುತ್ತಾರೆ. ಅವರು ಈವತ್ತು ಸೌದೆಗಳನ್ನು ಕೊಡಬೇಕೆಂದು ಕೇಳಿದರೆ ಅವರಿಗೆ ಕೊಡುವುದಿಲ್ಲ. ಅಂಥ ಯೂನಿಟ್‌ಗಳನ್ನು ಮಾಡಿಕೊಳ್ಳಲು ಅವಕಾಶಕೊಟ್ಟರೆ ಅರಣ್ಯದಲ್ಲಿರುವ ಎಲ್ಲ ಮರಗಳನ್ನು ಕಡಿದು

ಲೂಟಿ ಮಾಡಿಬಿಡುತ್ತಾರೆಂದು ಹೇಳುತ್ತೀರಿ. ಮತ್ತು ಅವರು ಮಾಡಿದಂಥ ಇದ್ದಿಲನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗುತ್ತದೆಂದು ಅವರಿಗೆ ಅವಕಾಶವನ್ನು ಕೊಡುತ್ತಿಲ್ಲ, ಕಬ್ಬಿಣಕಾರ್ಖಾನೆಯು ಇದ್ದಿಲನ್ನು ಕಂಟ್ರಾಕ್ಟರುಗಳ ಮುಖಾಂತರವಾಗಿ ಕೊಳ್ಳುವುದು ಇರುತ್ತದೆ. ಕಂಟ್ರಾಕ್ಟರುಗಳು ತರ ತಕ್ಕಂಥ ಇದ್ದಿಲು ಸಾವಿರ ಚೀಲವೆಂದು ಲೆಕ್ಕ ಹೇಳುತ್ತಾರೆ, ಸಾವಿರ ಕಾಲಿ ಚೀಲಗಳೂ ಇರುತ್ತವೆ, ಆದರೆ ಅಲ್ಲಿ ನಿಜವಾಗಿಯೂ ಇರುವುದು ೮೦೦ ಚೀಲಗಳು, ಇನ್ನು ೨೦೦ ಚೀಲಗಳು ಕೋತ ಆಗಿರುತ್ತದೆ. ಕಬ್ಬಿಣಕಾರ್ಖಾನೆಯವರು ಈ ರೀತಿ ಕೊಳ್ಳೆ ಹೊಡೆಯುತ್ತಿದ್ದಾರೆ. ಸಣ್ಣ ಪುಟ್ಟ ಡಿಸ್ಟಿಲರಾಗಳಿಗೆ ಸೌದೆಯನ್ನು ಕೊಟ್ಟರೆ ಅವರು ತಯಾರಿಸಿದ ಸೌದೆಯನ್ನು ಯಾರಿಗೆ ಒದಗಿಸಬೇಕೆಂದು ಹೇಳುತ್ತೇವೆಯೋ ಅವರಿಗೆ ಒದಗಿಸುತ್ತಾರೆ ಶ್ರೀಮಾನ್ ಘೋರ್ಪಡೆಯವರ ಬಗ್ಗೆ ವೈಯಕ್ತಿಕ ಆಸಕ್ತಿಯನ್ನು ತೋರಿಸಿ ಅವರ ಕಂಪನಿಗೆ ಸೌದೆಯನ್ನು ಕೊಡಲು ಮಂಜೂರು ಮಾಡಿರುವುದರಿಂದ ಸರ್ಕಾರಕ್ಕೆ ಪ್ರತಿವರ್ಷ ೮೦ ಲಕ್ಷ ರೂಪಾಯಿಗಳಷ್ಟು ಲುಕ್ಸಾನಾಗುತ್ತಿದೆ. ಅದರ ಬಗ್ಗೆ ಅರಣ್ಯ ಸಚಿವರು ತೀವ್ರವಾಗಿ ಆಲೋಚನೆ ಮಾಡಬೇಕೆಂದು ಹೇಳತ್ತೇನೆ.

ಇನ್ನು ಆಹಾರ ಖಾತೆಗೆ ಸಂಬಂಧಪಟ್ಟಹಾಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಸೀಸನ್ ಮುಗಿದಿದೆ. ಈ ವರ್ಷದ ಅವಧಿಯಲ್ಲಿ ಎಷ್ಟು ಪ್ರೊಕ್ಯೂರ್ ಮಾಡಿದ್ದಾರೋ ಅದನ್ನು ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ಈ ವರ್ಷ ಪ್ರೊಕ್ಯೂರ್ ಮಾಡಿರತಕ್ಕಂಥಾದ್ದು ಬಹಳ ಕಡಿಮೆ ಇದೆ ಲೆವಿ ವಸೂಲಿ ತೀವ್ರಗತಿಯಿಂದ ಮಾಡಬೇಕೆಂದು ಎಲ್ಲ ತಹಸೀಲ್‌ದಾರರಿಗೂ ಸರ್ಕ್ಯುಲರನ್ನು ಕಳುಹಿಸಿಕೊಟ್ಟಿದ್ದಾರೆ ಶಿವಮೊಗ್ಗೆಯ ಜಿಲ್ಲಾಧಿಕಾರಿಗಳ ಮೂಲಕ ಎಲ್ಲಾ ತಾಲ್ಲೂಕಿನ ತಹಸೀಲ್ದಾರರುಗಳಿಗೆ ಒಂದು ಸುತ್ತೋಲೆಯನ್ನು ಲೆವಿ ವಸೂಲು ಮಾಡುವುದಕ್ಕೆ ಹೊರಡಿಸಿದ್ದಾರೆ. ಅದರಲ್ಲಿ ಈವರಗೆ ವಸೂಲು ಮಾಡಿರತಕ್ಕಂಥ ಲೆವಿ ಕಡಿಮೆಯಾಗಿದೆ, ಆದ್ದರಿಂದ ಕಡ್ಡಾಯವಾಗಿ ಲೆವಿಯನ್ನು ವಸೂಲು ಮಾಡಿ, ಇದಕ್ಕೆ ಮನ್ನಣೆ ನೀಡಿ ಲೆವಿ ವಸೂಲು ಮಾಡತಕ್ಕಂಥ ಕೆಲಸವನ್ನು ಮಾಡದೇ ಹೋದರೆ ನಿಮ್ಮ ಮೇಲೆ ಶಿಸ್ತಿನ ಕ್ರಮವನ್ನು ಕೈಕೊಳ್ಳಲಾಗುತ್ತದೆ ಎಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳು ಈ ಸುತ್ತೋಲೆಯನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಿಗೂ ಕೊಟ್ಟಿದ್ದಾರೆ. ಈ ಹಂತದಲ್ಲಿ ಲೆವಿಯನ್ನು ಕಡ್ಡಾಯವಾಗಿ ವಸೂಲು ಮಾಡತಕ್ಕಂಥ ಕ್ರಮದಲ್ಲಿ ಜಿಲ್ಲಾಧಿಕಾರಿಗಳು ಏನು ಹೇಳುತ್ತಾರೆ ಎಂದರೆ ನಮಗೆ ರಾಜ್ಯ ಸರ್ಕಾರದವರು ಕೊಟ್ಟಂತಹ ಸೂಚನೆಯ ಮೇರೆಗೆ ಲೆವಿಯನ್ನು ಕಡ್ಡಾಯವಾಗಿ ವಸೂಲು ಮಾಡಲೇಬೇಕು ಎಂದು ಹೇಳುತ್ತಿದ್ದಾರೆ. ದಯವಿಟ್ಟು ನಾನು ಹೇಳುತ್ತೇನೆ ಈ ಹಂತದಲ್ಲಿ ಲೆವಿಯನ್ನು ಕಡ್ಡಾಯವಾಗಿ ವಸೂಲು ಮಾಡತಕ್ಕಂಥ ಕ್ರಮವನ್ನು ಕೈಬಿಡಬೇಕು. ಕಳೆದ ೧೯೭೪_೭೫. ೧೯೭೫-೭೬, ಮತ್ತು ೧೯೭೬-೭೭ರಲ್ಲಿ ವಸೂಲು ಮಾಡಿರತಕ್ಕಂಥ ರಾಗಿ, ಭತ್ತ, ಜೋಳ ನಿಮ್ಮಲ್ಲಿ ಸ್ಟಾಕ್ ಇದೆ ಇದು ಉಳಿತು ಹೋಗಿದೆಯೋ ಕೊಳೆತು ಹೋಗಿದೆಯೋ ಅದು ಬೇರೆ ಲೆಕ್ಕವಾಗುತ್ತದೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ ಒಟ್ಟಿನಲ್ಲಿ ಸರ್ಕಾರದ ಲೆಕ್ಕದಲ್ಲಿ ಸ್ಟಾಕ್ ಇದೆ. ಆದ್ದರಿಂದ ಮತ್ತೆ ವಸೂಲಿ ಮಾಡುವುದಕ್ಕೆ ಹೋಗಬೇಡಿ. ಈ ೩ ವರ್ಷದಲ್ಲಿ ಸಂಗ್ರಹಣೆ ಮಾಡಿರತಕ್ಕಂಥ ರಾಗಿ, ಭತ್ತ, ಜೋಳ ಏನಿದೆ ಅದನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡತಕ್ಕಂಥ ಕೆಲಸವನ್ನು ಮಾಡಿ ಎಂದು ಹೇಳುತ್ತೇನೆ. ಇರತಕ್ಕಂಥ ದವಸಧಾನ್ಯಗಳನ್ನು ವಿತರಣೆ ಮಾಡುವುದಕ್ಕೆ ಸಾಧ್ಯವಾಗದೇ ಇರುವಾಗ ಮತ್ತೆ ಸಂಗ್ರಹಣೆ ಮಾಡುವುದಕ್ಕೆ ಹೋಗಬೇಡಿ ಎಂದು ಹೇಳುವುದಕ್ಕೆ ಬಯಸುತ್ತೇನೆ. ಏಕೆಂದರೆ ಈಗ ಯಾರ ಹತ್ತಿರವೂ ಹೆಚ್ಚು ಭತ್ತ ಇಲ್ಲ. ಸುಗ್ಗಿ ಬರುವವರೆಗೆ ಅವರ ಜೀವನಕ್ಕೆ ಅಗತ್ಯವಾಗಿರುವಷ್ಟು ಭತ್ತವನ್ನು ಇಟ್ಟುಕೊಂಡಿದ್ದಾರೆ. ಮಳೆಗಾಲದಲ್ಲಿ ಸ್ವಲ್ಪ ಧರವೇನಾದರೂ ಬಂದರೆ ಮಾರಾಟ ಮಾಡುವುದಕ್ಕೆ ಸ್ವಲ್ಪ ಇಟ್ಟುಕೊಂಡಿರುತ್ತಾರೆ ವ್ಯವಸಾಯಗಾರರಾದವರು ಈ ಕೆಲಸವನ್ನು ಮಾಡಬೇಕಾದ್ದು ಇದೆ. ಆದ್ದರಿಂದ ಈ ಲೆವಿಯನ್ನು ವಸೂಲು ಮಾಡುವುದನ್ನು ಕೈಬಿಡಬೇಕು ಎಂದು ಹೇಳುತ್ತೇನೆ ಇದರ ಜೊತೆಗೆ ಕಳೆದಸಾರಿ ಮತ್ತು ಅದರ ಹಿಂದಿನ ವರ್ಷದ ಸುಗ್ಗಿಯಲ್ಲಿ ಸರ್ಕಾರದವರು ಶಿವಮೊಗ್ಗ ಜಿಲ್ಲೆಯಲ್ಲಿ ಬಹಿರಂಗ ಮಾರುಕಟ್ಟೆಯಲ್ಲಿ ಅವರು ವಸೂಲಿ ಮಾಡಿ ಇಟ್ಟಿದಂತ ಭತ್ತವನ್ನು ಹರಾಜು ಮುಖಾಂತರ ವಿಲೇ ಮಾಡುವುದಕ್ಕೆ ಒಂದು ಕ್ರಮ ಕೈಕೊಂಡರು. ಇದರಲ್ಲಿ ಯಾರು ಯಾರು ಭತ್ತವನ್ನು ಸಕಾಲದಲ್ಲಿ ಖರೀದಿ ಮಾಡಿಲ್ಲವೋ ಅವರು ಈ ಹಣವನ್ನು ವಾಪಸ್ ಪಡೆಯಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಅವರು ಟೆಂಡರ್ ಸಹ ಕೊಟ್ಟಿದ್ದಾರೆ. ಅದರ ಪ್ರಕಾರ ಅವರ ಹಣ ನಿಮ್ಮ ಹತ್ತಿರ ಇದೆ. ಕಾನೂನು ಪ್ರಕಾರ ಆ ಹಣವನ್ನು ಪರ್‌ಫಿಟ್ ಮಾಡಿಕೊಳ್ಳಿರಿ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಹೇಳುತ್ತೇನೆ ಯಾವಾಗಲೂ ಮಾನ್ಯ ಕಾಗೋಡುತಿಮ್ಮಪ್ಪನವರು ಭಾಷಣ ಮಾಡುವಾಗ ಪರಿಸ್ಥಿತಿಯನ್ನು ನೋಡಿ ಮಾತನಾಡಬೇಕು. ನಾವು ಟೆಂಡರ್ ಅಗ್ರಿಮೆಂಟ್ ಪ್ರಕಾರ ಪರ್‌ಫಿಟ್ ಮಾಡಿದ್ದೇವೆ. ನಾವು ಏನು ಮಾಡಿದ್ದೇವೆಯೋ ಅದನ್ನೇ ಅವರು ಹೇಳಿದ್ದಾರೆ. ಮತ್ತೆ ಮಾನ್ಯ ಮುಖ್ಯಮಂತ್ರಿಯವರು ಲೀಡರ್ ಆಫ್ ಅಪೋಜಿಷನ್ ಅವರನ್ನು ಕರೆದು ಮಾತನಾಡಿ ಅವರೇನಾದರೂ ಸಹಾಯ ಮಾಡುವುದು ಇದ್ದರೆ ಮಾಡಲಿ ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಕಾನೂನು ಬಿಟ್ಟು ಮಾಡಿ ಎಂದು ನಿಮಗೆ ಹೇಳುವುದಕ್ಕೆ ಹೋಗುವುದಿಲ್ಲ. ಸುಮಾರು ೧೮ ಲಕ್ಷ ರೂಪಾಯಿಗಳವರೆಗೆ ನಿಮ್ಮ ಹತ್ತಿರ ಇದೆಯೆಂದು ತಿಳಿದು ಬಂದಿದೆ. ಈ ಹಣವನ್ನು ವಾಪಸ್ಸು ಪಡೆಯಬೇಕು ಎಂದು ಅವರು ಪ್ರಯತ್ನ ಮಾಡುತ್ತಿದ್ದಾರೆ. ತಾವು ಏನು ಹೇಳಿದ್ದೀರಿ ಎಂದರೆ ಭತ್ತವನ್ನು ತೆಗೆದುಕೊಳ್ಳುವುದಾದರೆ ತೆಗೆದುಕೊಳ್ಳಿ ಎಂದು ಹೇಳಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ —ಮಾನ್ಯ ಆಹಾರ ಸಚಿವರು, ಮಾನ್ಯ ಮುಖ್ಯಮಂತ್ರಿಯವರು ವಿರೋಧಪಕ್ಷದ ನಾಯಕರನ್ನು ಕರೆದು ಸಮಾಲೋಚನೆ ಮಾಡಿ ಎಂದು ಹೇಳಿದ್ದಾರೆ ಎಂಬುದಾಗಿ ಹೇಳಿದರು. ನಾನು ಹೇಳುತ್ತೇನೆ ಅವರು ಈ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ಏನು ನಿರ್ಣಯವನ್ನು ತೆಗೆದುಕೊಳ್ಳುತ್ತಾರೋ ಅದರಲ್ಲಿ ನಾನು ಸಹ ಸಮಭಾಗಿಯಾಗುತ್ತೇನೆ. ಇದು ನನ್ನ ಅಭಿಪ್ರಾಯ

ಶ್ರೀ ಕಾಗೋಡು ತಿಮ್ಮಪ್ಪ. —ಆದುದರಿಂದ ನಾನು ಈಗಲೂ ಒತ್ತಾಯ ಮಾಡುತ್ತೇನೆ ಅವರು ಕೊಟ್ಟಂತಹ ಹಣವನ್ನು ಕಾನೂನು ಪ್ರಕಾರ ಏನು ತೆಗೆದುಕೊಂಡಿದ್ದೀರಿ ಆ ೧೮ ಲಕ್ಷ ರೂಪಾಯಿಗಳನ್ನು ಪರ್‌ಫಿಟ್ ಮಾಡಿಕೊಳ್ಳಿರಿ. ಮಾನ್ಯ ಮುಖ್ಯಮಂತ್ರಿಯವರಿಗೆ ಕೆಲವರು ಸೇವಾಕಾಂಕ್ಷಿಗಳು ಇದ್ದಾರೆ. ಅನೇಕ ಜನ ಅವರ ಕಿವಿಯಲ್ಲಿ ಮಾತನಾಡುವಂತಹವರು ಇದ್ದಾರೆ. ಅನೇಕ ದಳ್ಳಾಳಿಗಳು ತಮ್ಮ ಕೆಲಸಗಳನ್ನು ನಡೆಸಿ ಚುನಾವಣೆಯ ಕಾಲದಲ್ಲಿ ಅವರ ಬೊಕ್ಕಸಕ್ಕೆ ಹಣವನ್ನು ಸಂಗ್ರಹಣೆ ಮಾಡಿದ್ದಾರೆ.

ಶ್ರೀ ಕೆ ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಇಂತಹ ಗಂಭೀರವಾದ ಆರೋಪಗಳನ್ನು ಮಾಡುವಾಗ ಮಾನ್ಯ ಸದಸ್ಯರು ಯಾರ್ಯಾರು ಯಾವ ರೀತಿಯಾಗಿ ಮಾಡಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಹೇಳುವುದು ಒಳ್ಳೆಯದು. ಹಾಗಿಲ್ಲದೇ ಮುಗಮ್ ಆಗಿ ಕರಪ್ಷನ್ ಚಾರ್ಜನ್ನು ಮಾಡುವುದು ನಿಯಮದ ಪ್ರಕಾರ ಮತ್ತು ಸಂಪ್ರದಾಯದ ಪ್ರಕಾರ ವಿಹಿತವಲ್ಲ. ಒಬ್ಬ ವ್ಯಕ್ತಿಯ ಬಗ್ಗೆ ಹೇಳುವುದಾದರೆ ಅದನ್ನು ವಿಚಾರಣೆ ಮಾಡೋಣ. ನಾನು ಹೇಳುತ್ತೇನೆ ಹೋದಸಲ ಫೈಲು ತೆಗೆದುಕೊಂಡು ನೋಡಿ ಟೆಂಡರ್ ರೂಲ್ಸ್ ಪ್ರಕಾರ ಹಣವನ್ನು ಪರ ಫಿಟ್ ಮಾಡಿದ್ದೇವೆ. ಅನೇಕರು ಇದೇ ಸಭೆಯಲ್ಲಿ ಈ ರೀತಿ ಅಭಿಪ್ರಾಯಪಟ್ಟಾಗ ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರೂ ಸಹ ವಿರೋಧಪಕ್ಷದವರ ನಾಯಕರನ್ನು ಕರೆಸಿ ಅವರೊಡನೆ ವಿಚಾರ ಮಾಡಿ ರಾಜ್ಯದ ಹಿತದೃಷ್ಟಿಯಿಂದ ಅವರೇನಾದರೂ ಮಾಡುವುದಿದ್ದರೆ ಮಾಡಲಿ ಎಂದು ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಹೇಳುವುದೇನೆಂದರೆ ಇವತ್ತು ಆ ಹಣವನ್ನು ಅವರಿಗೆ ವಾಪಸು ಕೊಡಿಸಬೇಕು ಎಂದು ಹೇಳಿ ಕೆಲವು ಜನ ದಳ್ಳಾಳಿಗಳು ಹೊರಟಿದ್ದಾರೆ ಈ ದಳ್ಳಾಳಿಗಳು ಈ ಕೆಲಸವನು ಮಾನ್ಯ ಮುಖ್ಯ ಮಂತ್ರಿಗಳ ಮುಖಾಂತರ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ಈ ಹಂತದಲ್ಲಿ ಅವರು ಯಶಸ್ವಿಯಾಗುವುದಾದರೆ ಈ ದಳ್ಳಾಳಿಗಳು ಏನೂ ಲಾಭವಿಲ್ಲದೇ ಈ ಕೆಲಸವನ್ನು ಮಾಡುವುದಕ್ಕೆ ಸಾಧ್ಯವಿಲ್ಲ ಆದ್ದರಿಂದ ಅಂತರಂಗದಲ್ಲಿ ಏನು ವಸೂಲಿಬಾಜಿ ನಡೆಯುತ್ತದೆ ಆದಕ್ಕೆ ಮಣೆ ಹಾಕದೇ ಆ ಹಣವನ್ನು ಪರ್‌ಫಿಟ್ ಮಾಡತಕ್ಕಂಥ ಕ್ರಮ ಏನಿದೆ ಅದನ್ನು ಮುಂದುವರಿಸಿಕೊಂಡು ಹೋಗಿ ಎಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ. —ನಾನು ಈ ಸಭೆಗೆ ಬಂದಾಗ ಮಾನ್ಯ ಸದಸ್ಯರು ನನ್ನ ಬಗ್ಗೆ ಒಂದು ಅಪಾದನೆಯನ್ನು ಮಾಡುತ್ತಿದ್ದರು. ನನ್ನ ಹೆಸರನ್ನು ತೆಗೆದುಕೊಂಡು ಹೇಳುತ್ತಿದ್ದರು. ನನ್ನ ಆಸಕ್ತಿ ಇರತಕ್ಕಂಥ ಕಂಪನಿಗೆ ಸರ್ಕಾರಕ್ಕೆ ಲಂಚಾಸನು ಮಾಡಿಕೊಂಡು ಸೌದೆಯನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆ ಫೈಲನ್ನು ನಾನು ಸ್ವತ: ನೋಡಿಲ್ಲ ಮಾನ್ಯ ಮಂತ್ರಿಯವರೇ ಅದಕ್ಕೆ ಉತ್ತರವನ್ನು ಹೇಳುತ್ತಾರೆ. ಈ ಬಗ್ಗೆ ನಾನು ಅಧಿಕಾರಸ್ಥರನ್ನು ಕೇಳಿದಾಗ ಅವರು ಯಾವ ಕಂಪನಿಗೂ ಸಬ್ಸಿಡೈಸ್ಡ್ ರೇಟ್‌ನಲ್ಲಿ ಸೌದೆಯನ್ನು ಕೊಡುತ್ತಾ ಇಲ್ಲ ಎಂದು ಹೇಳಿದರು. ಇತ್ತೀಚೆಗೆ ವಿಶ್ವೇಶ್ವರಯ್ಯ ಸ್ಟೀಲ್

ವರ್ಕ್ಸ್‌ಗೆ ರೇಟನ್ನು ಜಾಸ್ತಿ ಮಾಡಿ ಸೌದೆ ಕೊಟ್ಟಿದ್ದಾರೆ. ಅದೇ ರೇಟ್‌ಗೆ ಬೇರೆ ಕಂಪನಿಗಳಿಗೂ ಕೊಡುತ್ತಿದ್ದಾರೆ. ಆದ್ದರಿಂದ ಈ ರೀತಿ ಲಘುವಾಗಿ ಆಪಾದನೆಗಳನ್ನು ಮಾಡುವುದು ಮಾನ್ಯ ಸದಸ್ಯರ ಘನತೆಗೆ ಸರಿಯಾದ ವಿಷಯವಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅರ್ಥಸಚಿವರು ಆ ಬಗ್ಗೆ ವಿವರಣೆಯನ್ನು ಕೊಡುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ನನ್ನ ಆಸಕ್ತಿ ಇರತಕ್ಕಂಥ ಕಂಪನಿಗೆ, ಸರ್ಕಾರಕ್ಕೆ ೮೦ ಲಕ್ಷ ರೂಪಾಯಿ ನಷ್ಟ ಮಾಡಿ ಸೌದೆಯನ್ನು ಕೊಟ್ಟಿದ್ದಾರೆ ಎಂಬ ಅರ್ಥ ಬರುವ ರೀತಿಯಲ್ಲಿ ಮಾನ್ಯ ಸದಸ್ಯರು ಮಾತನಾಡಿದರೆ ನನ್ನ ಪ್ರತಿಕ್ರಿಯೆಯನ್ನು ತೋರಿಸಬೇಕಾಗುತ್ತದೆ. ನನಗೆ ತಿಳಿದಮಟ್ಟಿಗೆ ಯಾವ ಕಂಪನಿಗೂ ಸಬ್ಸಿಡೈಸ್ಡ್ ರೇಟ್‌ನಲ್ಲಿ ಸೌದೆಯನ್ನು ಕೊಟ್ಟಿಲ್ಲ. ಎಲ್ಲಾ ಕಂಪನಿಗಳಿಗೂ ಯಾವ ರೇಟಿನಲ್ಲಿ ಸೌದೆಯನ್ನು ಕೊಡುತ್ತೀರೋ ಅದೇ ರೇಟ್‌ನಲ್ಲಿ ಈ ಕಂಪನಿಗೂ ಕೊಡುತ್ತಿದ್ದಾರೆ. ನನ್ನ ಆಸಕ್ತಿ ಇರತಕ್ಕಂಥ ಕಂಪನಿಗೆ ಸೌದೆ ಕೊಡುವುದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ ಈ ದೇಶದಲ್ಲಿ ಕಾರ್ಖಾನೆಗಳು ಬೆಳೆಯಬೇಕು ನಿಯಮದ ಪ್ರಕಾರ ಎಲ್ಲಾ ಕಂಪನಿಗಳಿಗೂ ಯಾವ ರೇಟ್‌ನಲ್ಲಿ ಕೊಡುತ್ತಾರೋ ಆ ರೇಟ್‌ನಲ್ಲಿ ಇದಕ್ಕೂ ಕೊಟ್ಟಿರಬಹುದು. ಇದರ ಬಗ್ಗೆ ಇಷ್ಟೊಂದು ಆಪಾದನೆಯನ್ನು ಮಾಡಿಬಿಟ್ಟರೆ ಇದು ಎಷ್ಟರಮಟ್ಟಿಗೆ ಸಮಂಜಸ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಆ ಬಗ್ಗೆ ವಿವರಣೆಯನ್ನು ಕೊಟ್ಟಿದ್ದಾರೆ. ಸರ್ಕಾರಕ್ಕೂ ಆ ಕಂಪನಿಗೂ ಅದಂತಹ ಅಗ್ರಿಮೆಂಟ್ ಏನಿದೆ ಅದನ್ನು ಈ ಸಭೆಯ ಮುಂದೆ ಇಟ್ಟರೆ ಎಲ್ಲಾ ವಿಷಯ ಆಗ ಗೊತ್ತಾಗುತ್ತದೆ. ನಾನು ಹೇಳುತ್ತೇನೆ ಮಾರ್ಕೆಟ್‌ರೇಟ್ ಒಂದು ಟನ್‌ಗೆ ೧೫೦ ರೂಪಾಯಿ ಇದ್ದರೆ ಆ ಕಂಪನಿಗೆ ಟನ್‌ಗೆ ೭೦ ರೂಪಾಯಿನಂತೆ ಕೊಟ್ಟಿದ್ದಾರೆ. ಇದರಿಂದ ವರ್ಷಕ್ಕೆ 80 ಲಕ್ಷ ರೂಪಾಯಿ ನಮ್ಮ ರಾಜ್ಯದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ ಅಗ್ರಿಮೆಂಟ್ ಕಾಪಿ ಏನಿದೆ ಅದನ್ನು ಸಭೆಯ ಮುಂದಿಡಿ ಅದರಲ್ಲಿ ಏನಿದೆ ಎಂಬುದನ್ನು ನೋಡೋಣ. ಹಿಂದೆ ತಾವು (ಮಾನ್ಯ ಅರ್ಥ ಸಚಿವರು) ಮಂತ್ರಿಗಳಾಗುವುದಕ್ಕೆ ಮುಂಚೆ ಅದರಲ್ಲಿ ಪಾಲುದಾರರಾಗಿದ್ದಿರಿ. ಈಗ ತಮ್ಮ ಹತ್ತಿರದವರೇ ಯಾರೋ ಪಾಲುದಾರರಾಗಿದ್ದಾರೆ. ತಾವು ಮಂತ್ರಿಗಳಾದ ಮೇಲೆ ತಮ್ಮ ಆಫೀಸನ್ನು ಉಪಯೋಗಿಸಿಕೊಂಡು, ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಈ ರೀತಿ ರಿಯಾಯಿತಿ ಬೆಲೆಗೆ ಸೌದೆಯನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿರಬಹುದು ಎಂಬುದು ನಮ್ಮ ಆರೋಪ.

4-30 ಪಿ.ಎಂ.

ಶ್ರೀ ಎಂ ವೈ. ಘೋರ್ಪಡೆ.—ಮಾನ್ಯ ಸದಸ್ಯರು ಈ ರೀತಿ ಮಾತನಾಡುವುದು ಸರಿಯಲ್ಲ. ಎಲ್ಲರಿಗೂ ಗೊತ್ತಿರುವ ಹಾಗೆ ನಾನು ಮೊದಲು ಆ ಕಂಪನಿಯಲ್ಲಿ ಡೈರೆಕ್ಟರಾಗಿದ್ದು ಮಂತ್ರಿಯಾದ ಮೇಲೆ ಅದಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದೇನೆ. ಇವತ್ತು ನಾನು ಆ ಕಂಪನಿಯಲ್ಲಿಲ್ಲ. ಆ ಕಂಪನಿಗೆ ಸಂಬಂಧಪಟ್ಟಂತೆ ಯಾವರೀತಿಯಿಂದಲೂ ನನ್ನ ಅಧಿಕಾರವನ್ನು ಉಪಯೋಗಿಸಿ ಸರ್ಕಾರ ಫೇವರ್ ತೋರಿಸಿಲ್ಲ. ಆ ಕಂಪನಿಗೆ ಸಂಬಂಧಪಟ್ಟಂಥ ಒಂದು ಫೈಲನ್ನೂ ನಾನು ನೋಡುವುದಿಲ್ಲ. ಕಾನೂನು ಪ್ರಕಾರ ನಮ್ಮ ಇಲಾಖೆಗೆ ಬಂದರೂ ಕೂಡ ಮೊದಲು ನಾನು ಡೈರೆಕ್ಟರಾಗಿದ್ದೆ ಎಂಬಕಾರಣದಿಂದ ಫೈಲ್‌ಗಳನ್ನು ನೋಡುವುದಕ್ಕೆ ಹೋಗುವುದಿಲ್ಲ ಆ ಫೈಲ್ ಬಂದಾಗ ನಾನು ನೋಡುವುದಿಲ್ಲ ಎಂದು ಹೇಳಿ ವಾಪಸ್ ಕಳುಹಿಸಿದ್ದೇನೆ. ಇದಕ್ಕಿಂತ ಸ್ಟ್ರಿಕ್ಟಾಗಿ ನಾನು ಇರಬೇಕೆಂದರೆ ಅದು ಬಹಳ ಕಷ್ಟ. ಮಾನ್ಯ ಸದಸ್ಯರುಗಳು ನನ್ನ ಮೇಲೆ ಈ ರೀತಿ ಆಪಾದನೆ ಮಾಡುವುದು ಸರಿಯಲ್ಲ. ಸೌದೆಯನ್ನು ಯಾವ ರೇಟಿಗೆ ನಮ್ಮ ರಾಜ್ಯದಲ್ಲಿ ಕೊಡುತ್ತಿದ್ದಾರೋ ಅದೇ ರೇಟಿಗೂ ಆ ಕಂಪನಿಗೂ ಕೊಟ್ಟಿದ್ದಾರೆ. ಅದೂ ಕರ್ನಾಟಕದಲ್ಲಿದೆ. ಅದೇನೂ ಬೇರೆ ಅಲ್ಲ. ಅದಕ್ಕೆ ಕೊಟ್ಟರೆ ನಮ್ಮ ರಾಜ್ಯಕ್ಕೆ ದ್ರೋಹ ಮಾಡಿದಂತೇನೂ ಆಗುವುದಿಲ್ಲ. ಈ ರಾಜ್ಯದಲ್ಲಿ ಕಾನೂನು ಮತ್ತು ನಿಯಮ ಏನಿದೆ ಅದರ ಪ್ರಕಾರ ಆ ಕಂಪನಿಗೂ ಸೌದೆ ಕೊಟ್ಟಿದ್ದಾರೆ ತಪ್ಪೇನಿಲ್ಲ. ಅದಕ್ಕೆ ಸರ್ಕಾರ ಯಾವ ರೀತಿಯಿಂದಲೂ ಫೇವರ್ ತೋರಿಸಿಲ್ಲ. ನಾನೂ ಪ್ರಭಾವ ಬೀರುವುದಕ್ಕೆ ಪ್ರಯತ್ನ ಮಾಡಲಿಲ್ಲ ಎಂಬ ಮಾತನ್ನೂ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಒಂದು ವೇಳೆ ಆ ರೀತಿ ರಿಯಾಯಿತಿ ಬೆಲೆಗೆ ಸೌದ ಕೊಟ್ಟಿದ್ದರೆ ಅದನ್ನು ರದ್ದುಪಡಿಸುವುದಕ್ಕೆ ನಿಮ್ಮ ಒಪ್ಪಿಗೆ ಇದೆಯೇ ?

ಶ್ರೀ ಕೆ.ಎಚ್. ಪಾಟೀಲ್.—ಮಾನ್ಯ ಮಂತ್ರಿವರ್ಯರು ನಾನು ಆ ಕಂಪನಿಗೆ ಸಂಬಂಧಪಟ್ಟ ಫೈಲನ್ನು ನೋಡಿಲ್ಲ ಎಂದು ಹೇಳಿದ್ದಾರೆ. ನಾನು ಫೈಲ್‌ಗಳನ್ನು ನೋಡಿ ಯೋಗ್ಯವಾದ ಉತ್ತರ ಕೊಟ್ಟನಂತರ ಸಮಾಧಾನವಾಗದಿದ್ದರೆ ನೀವು ಕೇಳಿ.

ಶ್ರೀ ಕಾಗೋಡು ತಿಮ್ಮಪ್ಪ.—ಅವರು ಎಷ್ಟರಮಟ್ಟಿಗೆ ತಪ್ಪುಗಳನ್ನು ಮಾಡಿದ್ದಾರೆ ಎಂಬುದನ್ನು ಹೇಳುವುದಕ್ಕೆ ಹೋಗುವುದಿಲ್ಲ. I am very cautious so far as that aspect is concerned. He has interfered ಎಂದು ಹೇಳುವುದಕ್ಕೆ ಹೋಗಲಿಲ್ಲ. We can drew a positive inference in a situation of this nature. ಏನೆಂದರೆ ಇವತ್ತು ಅವರು ಆ ಕಂಪನಿಗೆ ಸೌದೆಯನ್ನೇನು ಕೊಟ್ಟಿದ್ದಾರೆ ಅವರಿಗೆ ಅದನ್ನು ಕೊಡತಕ್ಕ ಕಾಲದಲ್ಲಿ ರಾಜ್ಯದಲ್ಲಿರುವ ಬೇರೆ ಕೈಗಾರಿಕಾ ಸಂಸ್ಥೆಗಳು ತಮಗೆ ಸೌದೆ ಕೊಡಬೇಕು ಎಂದು ಬೇಡಿಕೆ ಇಟ್ಟಿದ್ದರೆ ಇಲ್ಲವೇ ? ಸೌದೆಯನ್ನು ಕೊಡತಕ್ಕ ಕಾಲದಲ್ಲಿ ಅವರವರ ಅರ್ಜಿನ್ನಿ ಮತ್ತು ಮೆರಿಟ್ ಮೇಲೆ ಕೊಡುವುದಕ್ಕೆ ತೀರ್ಮಾನ ಮಾಡಿದ್ದರೆ ಕೈಗಾರಿಕೆಗಳ ಬಗ್ಗೆ ಯಾವುದೋ ಒಂದು ರೀತಿಯಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಹೇಳಬಹುದಾಗಿತ್ತು. ಆದರೆ ಇಲ್ಲಿ ಏನಾಗಿದೆಯೆಂದರೆ ಬೇರೆ ಸಂಸ್ಥೆಗಳು ಸೌದೆಗಾಗಿ ಬೇಡಿಕೆ ಇಟ್ಟಾಗ ಅವುಗಳ ಬಗ್ಗೆ ಏನೂ ತೀರ್ಮಾನ ಮಾಡದೆ ಈ ಒಂದು ಸಂಸ್ಥೆಗೆ ಸೌದೆ ಕೊಡುವ ಬಗ್ಗೆ ತೀರ್ಮಾನ ಮಾಡಿದ್ದರಿಂದ inference can be drawn that there is a favouritism.

SRI M. Y. GHORPADE.—I am thankful to the Hon'ble Member for having clarified, that he does not wish to insinuate that I have taken any personal interest in this matter. To that extent, I am thankful to him.

MR. CHAIRMAN.—I don't think that there is any insinuation.

SRI M. Y. GHORPADE.—There are several industries, in the State. If the Hon'ble Member wants to question the entire policy of the State Government in the matter of supply of firewood to these untis, that is a different matter but the insinuation that some favour is shown to one at my instant is not correct. Since this was made in my presence as I entered the House, it is my duty to refute and I am thankful to the Hon'ble Member for having said that it is not his intention.

ಶ್ರೀ ಕಾಗೋಡು ತಿಮ್ಮಪ್ಪ.—ನಮ್ಮ ತಾಲ್ಲೂಕಿನಲ್ಲಿ, ನಮ್ಮ ಜಿಲ್ಲೆಯಲ್ಲಿ ಇದ್ದಿಲು ಮಾಡತಕ್ಕ ಯೂನಿಟ್‌ಗಳು ಇವೆ. ಅವರು ಎಷ್ಟೋ ದಿವಸದಿಂದ ಸ್ವಲ್ಪ ಸೌದೆ ಕೊಡಿ ಎಂದು ಹೊಡೆದುಕೊಳ್ಳುತ್ತಿದ್ದರೂ ಅಂಥ ಜನರಿಗೆ ಸೌದೆಯನ್ನೂ ಕೊಡದೆ ಅವರ ಅರ್ಜಿಯನ್ನೂ ಪರಿಶೀಲನೆ ಮಾಡದೇ ಇರುವುದರಿಂದ ಈ ಒಂದು ಕನ್‌ಕ್ಲೂಷನ್‌ಗೆ ನಾವು ಬರಬೇಕಾಗಿದೆ. ಆದ್ದರಿಂದ ಇದನ್ನು ಆಲೋಚನೆ ಮಾಡಬೇಕು.

ಆಹಾರ ಇಲಾಖೆಯಲ್ಲಿ ಜನಸಾಮಾನ್ಯರಿಗೆ ಬೇಕಾದ ಸಾಮಾನ್ಯ ವಸ್ತುಗಳನ್ನು ವಿತರಣೆ ಮಾಡತಕ್ಕ ಕಾಲದಲ್ಲಿ ಸರಿಯಾಗಿ ಕಾರ್ಯಕ್ರಮ ಕೈಗೊಂಡಿಲ್ಲ, ವಿತರಣೆ ಮಾಡತಕ್ಕ ವ್ಯವಸ್ಥೆ ವ್ಯವಸ್ಥಿತವಾಗಿಲ್ಲ. ಉದಾಹರಣೆಗೆ ಹಳ್ಳಿಗಳಲ್ಲಿ ಸೊಸೈಟಿಗಳ ಮುಖಾಂತರ ಆಹಾರ ಪದಾರ್ಥಗಳ ವಿತರಣೆಯಾಗುತ್ತಿದೆ. ಗ್ರಾಮಪಂಚಾಯತಿಗಳ ಮಟ್ಟದಲ್ಲೂ ಕೂಡ ಕಾರ್ಡ್‌ಗಳನ್ನು ಕೊಡತಕ್ಕ ವ್ಯವಸ್ಥೆ ಇವತ್ತಿನವರೆಗೂ ಆಗಿಲ್ಲ. ಸಕ್ಕರೆ ಪೂರೈಕೆ ಕಡಿಮೆಯಾಗಿದೆ, ಆದ್ದರಿಂದ ಕಡಿಮೆ ಪ್ರಮಾಣದಲ್ಲಿ ವಿತರಣೆ ಮಾಡಬೇಕಾಗಿದೆ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಈಗ ಕೇಂದ್ರ ಸರ್ಕಾರದವರೂ ಕೂಡ ತನ್ನ ನೀತಿಯಲ್ಲಿ ಬದಲಾವಣೆ ಮಾಡಿಕೊಂಡು ಹೊರಗಡೆಗೆ ಸಕ್ಕರೆ ರಫ್ತು

ಮಾಡುವುದನ್ನು ಕಡಿಮೆ ಮಾಡಬೇಕು ಎಂದು ತೀರ್ಮಾನ ಕೈಗೊಂಡಿದ್ದಾರೆ. ಈಗ ನಮಗೆ ಹೆಚ್ಚು ಸಕ್ಕರೆ ಸಿಗತಕ್ಕ ಸನ್ನಿವೇಶ ಇದೆ. ಆದ್ದರಿಂದ ಸಕ್ಕರೆಯನ್ನು ಹೆಚ್ಚು ಪ್ರಮಾಣದಲ್ಲಿ ಒದಗಿಸುವುದಲ್ಲದೆ ಸಕ್ಕರೆಯನ್ನು ಮತ್ತು ಇನ್ನಿತರ ಆಹಾರ ವಸ್ತುಗಳನ್ನು ಹಂಚತಕ್ಕ ಕಾಲದಲ್ಲಿ ಕಾರ್ಡ್‌ಗಳ ಮೂಲಕ ಗ್ರಾಮಾಂತರ ಪ್ರದೇಶಗಳಲ್ಲಿ ಹಂಚತಕ್ಕ ವ್ಯವಸ್ಥೆ ಮಾಡಬೇಕು. ಈಗ ಎಣ್ಣೆಬೆಲೆ ಕೂಡ ದುಬಾರಿಯಾಗಿವೆ. ಕನ್‌ಸ್ಯೂಮರ್ಸ್ ಕೋ-ಆಪರೇಟೀವ್ ಸೊಸೈಟಿಗಳೇನಿವೆ ಆ ಸಂಸ್ಥೆಗಳ ಮುಖಾಂತರ ಸರ್ಕಾರದವರು ಎಣ್ಣೆ ಸಂಗ್ರಹಣೆ ಮಾಡಿ ಫೇರ್‌ಪ್ರೈಸ್ ಷಾಪ್ ಮುಖಾಂತರ ಎಣ್ಣೆಯನ್ನು ಹಂಚತಕ್ಕ ವ್ಯವಸ್ಥೆ ಮಾಡಬೇಕು. ಅನೇಕ ಕಡೆಗಳಲ್ಲಿ ಫೇರ್ ಪ್ರೈಸ್ ಷಾಪ್‌ಗಳನ್ನು ಖಾಸಗಿ ಜನರಿಗೆ ಕೊಟ್ಟಿದ್ದಾರೆ. ಆ ರೀತಿ ಖಾಸಗಿ ಜನರಿಗೆ ವಹಿಸುವುದನ್ನು ನಿಲ್ಲಿಸುವುದು ಒಳ್ಳೆಯದು. ಅಂಥ ಜನರೇ ಈಗ ಅನೇಕ ಭ್ರಷ್ಟಾಚಾರಗಳನ್ನು ಮಾಡುತ್ತಿದ್ದಾರೆ. ಇನ್‌ಪ್ಲುಯೆನ್ಸ್ ಉಪಯೋಗಿಸಿ ಫೇರ್‌ಪ್ರೈಸ್ ಷಾಪ್‌ಗಳನ್ನು ತೆರೆದು ಆಹಾರವಸ್ತುಗಳನ್ನು ವಿತರಣೆ ಮಾಡತಕ್ಕ ಸಂದರ್ಭದಲ್ಲಿ ಯಾವುದೇ ಯೋಗ್ಯ ಕ್ರಮವನ್ನೂ ಅನುಸರಿಸದೆ ಅನೇಕ ಲೋಪದೋಷಗಳನ್ನು ಮಾಡುತ್ತಿದ್ದಾರೆ. ಆದ್ದರಿಂದ ಖಾಸಗಿಯವರಿಗೆ ಫೇರ್‌ಪ್ರೈಸ್ ಷಾಪ್‌ಗಳನ್ನು ಕೊಡುವುದನ್ನು ನಿಲ್ಲಿಸಿ ಬಳಕೆದಾರರ ಸಹಕಾರ ಸಂಘಗಳ ಮೂಲಕವೋ ಅಥವಾ ಇನ್ನಿತರ ಸಹಕಾರ ಸಂಘಗಳ ಮುಖಾಂತರ ಆಹಾರಧಾನ್ಯಗಳನ್ನು ಹಂಚತಕ್ಕ ಕೆಲಸವನ್ನು ಮಾಡಬೇಕು. ಬಟ್ಟೆಗಳನ್ನು, ಕಂಟ್ರೋಲ್ಡ್ ಕ್ಲಾತ್‌ಗಳನ್ನು ಒದಗಿಸತಕ್ಕ ಕೆಲಸ ಇದೆ. ನಾನು ಹಿಂದೆ ಕೂಡ ಬಟ್ಟೆಗಳ ಕ್ವಾಲಿಟಿ ಬಗ್ಗೆ ವಿಶೇಷವಾಗಿ ಪ್ರಸ್ತಾಪ ಮಾಡಿದ್ದೆ. ಆದರೆ ಒಳ್ಳೆ ಕ್ವಾಲಿಟಿ ಬಟ್ಟೆಗಳನ್ನು ತರಿಸಿ ಹಂಚುತ್ತಿಲ್ಲ ಯಥಾವತ್ತಾಗಿ ಅದೇ ಕ್ವಾಲಿಟಿ ಬಟ್ಟೆಗಳನ್ನೇ ಹಂಚುತ್ತಿದ್ದಾರೆ. ದಯವಿಟ್ಟು ಇನ್ನು ಮುಂದಾದರೂ ಉತ್ತಮ ದರ್ಜೆಯ ಬಟ್ಟೆಗಳನ್ನು ಕೊಡುವುದಕ್ಕೆ ಸರ್ಕಾರದವರು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಕನ್‌ಸ್ಯೂಮರ್ಸ್ ಫೆಡರೇಷನ್ ಇದೆ. ಅದರ ಕಾರ್ಯವ್ಯಾಪ್ತಿ ಕೇವಲ ಒಂದೆರಡು ಸಿಟಿಗಳಿಗೆ ಮಾತ್ರ ಸೀಮಿತವಾಗಿದೆ. ತಾಲ್ಲೂಕುಮಟ್ಟದ ಊರುಗಳಿಗೆ ಮತ್ತು ಗ್ರಾಮಾಂತರ ಪ್ರದೇಶಗಳವರೆಗೆ ಅದರ ವ್ಯಾಪ್ತಿ ಇಲ್ಲ. ಕನಿಷ್ಟಪಕ್ಷ ತಾಲ್ಲೂಕು ಮಟ್ಟದ ಊರುಗಳಿಗಾದರೂ ಅದರ ಕೆಲಸ ಹೋಗುವ ರೀತಿಯಲ್ಲಿ ಮಾಡುವುದಾದರೆ ಅಗತ್ಯ ವಸ್ತುಗಳನ್ನು ಈ ರಾಜ್ಯದ ಎಲ್ಲ ವರ್ಗದ, ಎಲ್ಲ ಭಾಗದ ಜನರಿಗೂ ಕನಿಷ್ಟಪ್ರಮಾಣದಲ್ಲಾದರೂ ಸರಬರಾಜು ಮಾಡಲು ಸಾಧ್ಯವಾಗುತ್ತದೆ ಆದ್ದರಿಂದ ಈ ಬಗ್ಗೆ ತಾವು ಯೋಚನೆ ಮಾಡಬೇಕು ಎಂದು ಹೇಳಿ ಈ ಬೇಡಿಕೆಯನ್ನು ವಿರೋಧಮಾಡುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೆ, ಮಾನ್ಯ ಆಹಾರ ಮತ್ತು ಅರಣ್ಯ ಖಾತಾ ಸಚಿವರು ಮಂಡಿಸಿರತಕ್ಕ ಈ ಬೇಡಿಕೆಗಳನ್ನು ಅನುಮೋದಿಸುತ್ತಾ, ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಪ್ರಮುಖವಾದ ವಿಷಯಗಳನ್ನು ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಮಲೆನಾಡಿಗೆ ಸಂಬಂಧಪಟ್ಟ ಹಾಗೆ ಅಕ್ರಮ ಸಾಗುವಳಿಯಲ್ಲಿರತಕ್ಕ ಜಮೀನಿನ ಮಂಜೂರಾತಿ ವಿಷಯದಲ್ಲಿ ಬಹುಮಂದಿ ಸದಸ್ಯರು ಎಲ್ಲ ಸದಸ್ಯರೂ ಎಂದು ಹೇಳಿದರೂ ತಪ್ಪಾಗಲಾರದು, ತಮ್ಮ ಕಳಕಳಿಯನ್ನು ಹೊಂದಿದ್ದಾರೆ. ಹಲವಾರು ವರ್ಷಗಳ ಬೇಡಿಕೆ, ಒತ್ತಡ, ಕಳಕಳಿಯ ಮನವಿ ಎಲ್ಲವೂ ಕೂಡ ಅನೇಕ ಜಿಲ್ಲೆಗಳಿಂದ ಸರ್ಕಾರದ ಮಟ್ಟಕ್ಕೆ ಬಂದಿದೆ. ಈ ದಿಸೆಯಲ್ಲಿ ಸರ್ಕಾರದವರು ಕೆಲವು ನಿರ್ದಿಷ್ಟವಾದಂಥ ಕಾರ್ಯಕ್ರಮಗಳನ್ನು ಹಾಕತಕ್ಕ ಪ್ರಯತ್ನವನ್ನು ಇನ್ನೂ ಹೆಚ್ಚು ಮಾಡಬೇಕು ಎಂಬುದೇ ನನ್ನ ಭಾವನೆ. ಕೇವಲ ಚುನಾವಣಾ ಕಾಲದಲ್ಲಿ ಒಂದು ಹೇಳಿಕೆ ಕೊಟ್ಟು ನಂತರ ಅದನ್ನು ಜಾರಿಗೆ ತರತಕ್ಕ ಪ್ರಯತ್ನವನ್ನು ಮಾಡಲಿಲ್ಲ ಎನ್ನತಕ್ಕ ಆಪಾದನೆಗೆ ನಾವು ಯಾವಾಗಲೂ ಗುರಿಯಾಗಬಾರದು. ಚುನಾವಣೆ ಬರಬಹುದು ; ಹೋಗಬಹುದು. ಈ ಅನ್ನದ ಪ್ರಶ್ನೆ ಸಾವಿರಾರು ಕುಟುಂಬಗಳಿಗೆ ಸಂಬಂಧಪಟ್ಟದ್ದು. ಈಗ ಕೆಲವು ಜಿಲ್ಲೆಗಳಲ್ಲಿ 100ಕ್ಕೆ 80ರಷ್ಟು ಭಾಗ ಅರಣ್ಯ ಪ್ರದೇಶವಿದೆ. ಉದಾಹರಣೆಗೆ, ಕಾರವಾರ ಜಿಲ್ಲೆಯನ್ನು ತೆಗೆದುಕೊಂಡರೆ ಆ ಜಿಲ್ಲೆಯು 100ಕ್ಕೆ 80 ಭಾಗದಷ್ಟು ಅರಣ್ಯದಿಂದ ಆವೃತ್ತವಾಗಿರತಕ್ಕ ಪ್ರದೇಶವಾಗಿದೆ. ನಮ್ಮ ಶಿವಮೊಗ್ಗ ಜಿಲ್ಲೆಯು ಸುಮಾರು ಅರ್ಧ ಭಾಗದಷ್ಟು ಕಾಡಿನಿಂದ ಆವೃತ್ತವಾಗಿದೆ ಇದೇ ರೀತಿ ಗುಲ್ಬರ್ಗ, ಧಾರವಾಡ, ಬೆಳಗಾಂ, ಹಾಸನ, ಚಿಕ್ಕಮಗಳೂರು, ಕೊಡಗು ಮತ್ತಿತರ

ಜಿಲ್ಲೆಗಳು ಸಹ ಹೆಚ್ಚು ಭಾಗ ಕಾಡಿನಿಂದ ಆವೃತ್ತವಾದ ಪ್ರದೇಶಗಳಾಗಿವೆ. ರೆವಿನ್ಯೂ ಅಥಾರಿಟಿಯ ವಶದಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿಯ ಪ್ರಮಾಣ ಬಹಳ ಕಡಿಮೆ ಇದೆ. ಜನಸಂಖ್ಯೆ ಮಾತ್ರ ಸಾಕಷ್ಟು ಪ್ರಮಾಣದಲ್ಲಿ ಏರುತ್ತಾ ಬಂದಿದೆ. ಹೀಗಾಗಿ ಮಲೆನಾಡು ಪ್ರದೇಶದಲ್ಲಿರತಕ್ಕ ಭೂಮಿಯು ಖಾಲಿಯಾಗುವುದಕ್ಕೆ ಸಾಧ್ಯವಿಲ್ಲ. ಆ ಪ್ರದೇಶದ ಜನರಿಗೆ ಕೃಷಿಯೇ ಪ್ರಧಾನವಾದ ಕಸುಬಾಗಿರಬೇಕಾದರೆ, ಜನಸಂಖ್ಯೆ ಜಾಸ್ತಿಯಾದಾಗ ಸಾಗುವಳಿಗೆ ಯೋಗ್ಯವಾದ ಪ್ರದೇಶಗಳನ್ನು ಹುಡುಕಬೇಕಾಗುತ್ತದೆ. ಇದರಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕಾಗುತ್ತದೆ. ಅದೇನೆಂದರೆ, ನ್ಯಾಷನಲ್ ಫಾರೆಸ್ಟ್ ಪಾಲಿಸಿ ಎನ್ನತಕ್ಕದು ಏನು ಸರ್ಕಾರದ ಎದುರಿನಲ್ಲಿ ಇದೆ ಆ ಒಂದು ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ನಾವು ಈ ಸದನದಲ್ಲಿ ಆ ವಿಚಾರವನ್ನು ಹಲವಾರು ಬಾರಿ ಪ್ರಸ್ತಾಪ ಮಾಡಿದ್ದೇವೆ. ಅರಣ್ಯವನ್ನು ಕಡಿದು ಲೂಟಿ ಮಾಡಿ ಜನತೆಗೆ ಭೂಮಿಯನ್ನು ಹಂಚಬೇಕೆಂಬ ಅಭಿಪ್ರಾಯವನ್ನು ಯಾವ ಸದಸ್ಯರು ಹೊಂದಿಲ್ಲ. ಸಾಗುವಳಿಗೆ ಯೋಗ್ಯವಾದ ಭೂಮಿ ಏನು ಇದೆ ಅದನ್ನು ಬಿಟ್ಟರೆ ಹೆಚ್ಚಾಗಿ ಸಿಗುವುದು ಫಾರೆಸ್ಟ್. ಆದರೆ ಎಲ್ಲ ಪ್ರದೇಶಗಳಲ್ಲಿಯೂ ಬೆಳೆಯನ್ನು ಬೆಳೆಯಬಹುದು. ಉದಾಹರಣೆಗೆ, ಗುಡ್ಡದ ಮೇಲೂ ಸಹ ಕೆಲವು ಬೆಳೆಗಳನ್ನು ಬೆಳೆಯಬಹುದೆಂದು ವ್ಯವಸಾಯ ಇಲಾಖೆಯವರು ಹೇಳುತ್ತಾರೆ ಕೆಲವು ಬೆಳೆಗಳು ನೀರು ಸಿಕ್ಕಿದರೆ ಸಾಕು, ಸುಮಾರಾಗಿ ಎಂತಹ ಪ್ರದೇಶದಲ್ಲಿಯೂ ಸಹ ಬೆಳೆಯುತ್ತವೆ. ಕಾರವಾರ ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಖುಷ್ಕಿ ಬೆಳೆಯಾದ ಹೈಬ್ರಿಡ್ ಜೋಳವನ್ನು ಬೆಳೆಯಬಹುದು. ಅಂಥ ಪ್ರದೇಶಗಳಲ್ಲಿ ಕಾಡನ್ನು ಸಂಪೂರ್ಣವಾಗಿ ಕಡಿದು ಕೊಟ್ಟು ಬೆಳೆಯನ್ನು ತೆಗೆಯಬಹುದು. ಒಟ್ಟಿನಲ್ಲಿ ಎಲ್ಲಿ ಬೇಕಾದರೂ ಬೆಳೆ ತೆಗೆಯಬಹುದು ; ಅಂಥಂಥ ಒಳ್ಳೆಯ ಬೆಳೆಗಳು ನಮ್ಮಲ್ಲಿವೆ. ಕಾಡನ್ನು ಲೂಟಿ ಮಾಡಿ ಹಾಳುಮಾಡಬೇಕೆಂಬ ಅಭಿಪ್ರಾಯವನ್ನು ನಾವು ಯಾರೂ ಹೊಂದಿಲ್ಲ. ಕಾಡು ನಮ್ಮದು, ಅರಣ್ಯ ಸಂಪತ್ತು ನಮ್ಮದು. ಆದರೆ, ಜನಸಂಖ್ಯೆಯ ಆಧಾರದ ಮೇಲಾಗಲೀ ಅಥವಾ ಶೇಕಡ ಇಷ್ಟು ಜನಕ್ಕಾದರೂ ಭೂಮಿಯನ್ನು ಕೊಡುತ್ತೇವೆಂಬ ಮೂಲ ಅಂಶವದನ್ನು ಸರ್ಕಾರದವರು ಒಪ್ಪಿ ಕೆಲವು ಭಾಗದ ಭೂಮಿಯನ್ನು ಬಿಡುಗಡೆ ಮಾಡುವುದಕ್ಕೆ ತಯಾರಾಗಬೇಕೆಂದು ಒತ್ತಾಯ ಮಾಡುತ್ತೇನೆ. ಹಿಂದಿನ ಸಾರಿ ಅಧಿವೇಶನ ಸೇರಿದಾಗ ಅರಣ್ಯ ಇಲಾಖೆಗೆ ಸೇರಿದ ಕೆಲವು ಭಾಗ ಜಮೀನನ್ನು ಖುಲಾಸೆ ಮಾಡಿದ್ದೇವೆ ಎಂಬ ಪಟ್ಟಿಯನ್ನು ಸದನದ ಮುಂದೆ ಇಟ್ಟಿದ್ದೀರಿ. ಆ ವಿಚಾರ ಕೇಳಿ ನನಗೆ ಬಹಳ ಸಂತೋಷವಾಯಿತು. ಆ ಪಟ್ಟಿಯನ್ನು ನಾನು ನೋಡಿದ ಹಾಗೆ ಅಕ್ರಮವಾಗಿ ಸಾಗುವಳಿ ಮಾಡಿರುವವರಿಗೆ ಆ ಭೂಮಿಯನ್ನು ನೀವು ಮಂಜೂರ್ಮಾಡತಕ್ಕ ಒಂದು ತೀರ್ಮಾನವನ್ನು ತೆಗೆದುಕೊಂಡಿರತಕ್ಕ ವಿಚಾರವನ್ನು ಕೇಳಿ ಬಹಳ ಸಂತೋಷವಾಯಿತು. ಆದರೆ ಎಷ್ಟು ಜನಕ್ಕೆ ಆ ರೀತಿ ಕೊಡುವುದಕ್ಕೆ ಸಾಧ್ಯವಾಯಿತು ? ಅದು ಬಹಳ ಕಡಿಮೆ. ಹಿಂದಿನ ಸರ್ಕಾರ ಒಂದು ಲಕ್ಷ ಎಕರೆ ಅರಣ್ಯ ಭೂಮಿಯನ್ನು ಕಾರವಾರ ಜಿಲ್ಲೆಯಲ್ಲಿ ಬಿಡುಗಡೆ ಮಾಡುವುದಕ್ಕೆ ತೀರ್ಮಾನ ಮಾಡಿತ್ತು. ಆ ತೀರ್ಮಾನ ಸರಿಯಲ್ಲ. ಈ ರೀತಿ ಬಿಡುಗಡೆ ಮಾಡಿದ ಜಮೀನನ್ನು ಜಮೀನು ಇದ್ದವರಿಗೆ ಹಂಚತಕ್ಕುದ್ದು ಸರಿಯಲ್ಲ ; ಹಾಲಿ ಭೂಮಿ ಇರತಕ್ಕ ವ್ಯಕ್ತಿಗಳಿಗೆ ಭೂಮಿ ಸಲ್ಲದು. ತತ್ಸಂಬಂಧವಾಗಿ ರೆಗ್ಯುಲರ್ ಸಮಿತಿಯನ್ನು ಬಿಟ್ಟು ಸಬ್ ಸಮಿತಿಯನ್ನು ಮಾಡಿ ತಮಗೆ ಬೇಕಾದವರಿಗೆ ಭೂಮಿಯನ್ನು ಕೊಡತಕ್ಕ ಪ್ರಯತ್ನವನ್ನು ಮಾಡಿದ್ದರಿಂದ ನಾವು ಆ ಜಮೀನನ್ನು ವಜಾ ಮಾಡಿದ್ದೇವೆಂಬ ಮಾತನ್ನು ಹೇಳಬೇಕಾಯಿತು. ಭೂಮಿ ಇಲ್ಲದೆ ಇರತಕ್ಕವರಿಗೆ ಭೂಮಿಯನ್ನು ಕೊಡುವುದಕ್ಕೆ ತಯಾರಾಗಿದ್ದೇವೆ ಎಂಬುದು ಸರ್ಕಾರದ ಅಭಿಪ್ರಾಯವಾಗಿತ್ತು, ಮತ್ತು ಈಗಲೂ ಆಗಿದೆ. ಅದರ ಬಗ್ಗೆ ಪ್ರತ್ಯೇಕ ವ್ಯಾಖ್ಯಾನ ಮಾಡುವುದಕ್ಕೆ ಕಾರಣ ಸಿಕ್ಕಿಲ್ಲ. ಒಟ್ಟಿನಲ್ಲಿ ಸರ್ಕಾರದವರು ಒಳ್ಳೆಯ ಅಭಿಪ್ರಾಯವನ್ನು ಹೊಂದಿದ್ದಾರೆಂದು ಭಾವಿಸಿದ್ದೇನೆ. ಈ ದಿಸೆಯಲ್ಲಿ, ಒಂದು ನಿರ್ದಿಷ್ಟವಾದ ಕಾಲಮಿತಿಯನ್ನು ಅದಕ್ಕೋಸ್ಕರವಾಗಿ ಗೊತ್ತುಪಡಿಸಿ ಆ ಪ್ರಶ್ನೆಯನ್ನು ಇತ್ಯರ್ಥ ಮಾಡಬೇಕಾಗಿದೆ. ನಿನ್ನೆಯ ದಿವಸ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ, ಈ ಅಧಿವೇಶನದಲ್ಲಿ ಅದನ್ನು ಮಾಡುವುದಕ್ಕೆ ಹೋಗಲಾರೆ, ಈ ಅಧಿವೇಶನ ಕಳೆದ ನಂತರ ತೀರ್ಮಾನ ಮಾಡಬಹುದೆಂಬ ಅಭಿಪ್ರಾಯವನ್ನು ಪಟ್ಟಿದ್ದೀರಿ. ಆ ಬಗ್ಗೆ ಬಹಳ ಮಂದಿ ಸದಸ್ಯರು ಮಾತನಾಡಿದ್ದಾರೆ ಇನ್ನು. ಚುನಾವಣೆ ಬಂತು ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದರು. ಚುನಾವಣಾ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಸಿರಸಿಯಲ್ಲಿ ಒಂದು ಹೇಳಿಕೆ ಕೊಟ್ಟು. ಯಾರು ಯಾರು ಅತಿಕ್ರಮಣವಾಗಿ ಭೂಮಿಯನ್ನು ಸಾಗುವಳಿ ಮಾಡಿದ್ದಾರೆ ಅವರಿಗೆ ಆ ಭೂಮಿಯನ್ನು ರಿಲೀಸ್ ಮಾಡುತ್ತೇನೆ

ಎಂಬ ಮಾತನ್ನು ಚುನಾವಣೆಗೋಸ್ಕರ, ಜನತಾ ಬೆಂಬಲವನ್ನು ಗಳಿಸುವುದಕ್ಕೋಸ್ಕರ ಆಡಿದ್ದಾರೆ ಎಂದು ವದಂತಿಯಾಗಿದೆ. ಚುನಾವಣೆ 2 ತಿಂಗಳಿಗೋ, 6 ತಿಂಗಳಿಗೋ ಅಥವಾ ಫೆಬ್ರುವರಿ-ಮಾರ್ಚಿಗೋ ಬರಬಹುದು. ಆದರೆ ನಾವು ಮಾಡತಕ್ಕ ಕಾರ್ಯ ಏನು ಎಂದು ಆಲೋಚಿಸಿ ಆ ಬಗ್ಗೆ ನಿರ್ದಿಷ್ಟವಾದ ತೀರ್ಮಾನವನ್ನು ತೆಗೆದುಕೊಳ್ಳಬೇಕು. ಹಾಲಿ ಇರುವ ಫಾರೆಸ್ಟ್ ಆಕ್ಟಿಗೆ ಕೂಡಲೇ ತಿದ್ದುಪಡಿ ತರಬೇಕು. ಈ ಬಗ್ಗೆ ಸರ್ಕಾರದವರು ಸೂಕ್ತ ಗಮನ ಹರಿಸಿ ಕಾನೂನು ಚೌಕಟ್ಟಿನಲ್ಲಿ ತಿದ್ದುಪಡಿಯನ್ನು ತಂದು, ಎಲ್ಲೆಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿ ಇದೆಯೋ ಅದನ್ನು ಜನತೆಗೆ ಜನಸಂಖ್ಯೆಯ ಆಧಾರದ ಮೇಲೆ ಹಂಚುವ ತೀರ್ಮಾನ ಮಾಡಬೇಕು. ಈ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಕೊಟ್ಟ ಸಲಹೆಯನ್ನು ನಾನು ಸಹ ಕೊಡಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದೇನು. ಅದಕ್ಕೆ ಸಂಬಂಧಪಟ್ಟ ಸರ್ವೆ ನಂಬರುಗಳನ್ನು ತಂದುಕೊಡಿ ಎಂಬ ಧೋರಣೆ ಬೇಡ. ಆ ಕೆಲಸದ ಜವಾಬ್ದಾರಿಯನ್ನು ಇಲಾಖೆಯ ಅಧಿಕಾರಿಗಳು ವಹಿಸಿಕೊಳ್ಳುವಂತೆ ಅವರಿಗೆ ಸ್ಪಷ್ಟವಾಗಿ ಆದೇಶ ನೀಡಿದ 2-3 ತಿಂಗಳೊಳಗೆ ಸರ್ವೆ ನಂಬರುಗಳನ್ನು ಒದಗಿಸುವಂತಹ ವ್ಯವಸ್ಥೆ ಮಾಡಬೇಕೆಂದು ಮಾನ್ಯ ತಿಮ್ಮಪ್ಪನವರು ಅಭಿಪ್ರಾಯಪಟ್ಟರು. ಆದರೆ ನಾನು ಹೇಳುವುದು, 3 ತಿಂಗಳವರೆಗೆ ಕಾಯಬಾರದು ; ಕೇವಲ 15 ದಿವಸಗಳಲ್ಲೇ ಆ ಕೆಲಸವಾಗುವಂತಹ ವ್ಯವಸ್ಥೆ ಮಾಡಬೇಕೆಂದು ನನ್ನ ಅಭಿಪ್ರಾಯ. ಇವತ್ತು ಸೊರಬ ಮತ್ತು ಶಿವಮೊಗ ಜಿಲ್ಲೆಯ ಕೆಲವು ಸರ್ವೆ ನಂಬರುಗಳನ್ನು ಬೇಕಾದರೆ ನಾನು ಬಾಯಿಯಲ್ಲೇ ಹೇಳಬಲ್ಲೆ ; ಕೆಲವಂತೂ ಬಾಯಿಪಾಠವಾಗಿ ಹೋಗಿವೆ. ಹೇಗೆಂದರೆ, 10 ವರ್ಷದಿಂದ ನಾನು ಶಾಸನಸಭಾ ಸದಸ್ಯನಾದ ಮೇಲೆ ಅದೇ ನಂಬರಿಗೆ ಪದೇ ಪದೇ ಜನರು ಅರ್ಜಿ ಕೊಡುತ್ತಿರುವುದರಿಂದ ಅದನ್ನು ನೋಡಿ ನೋಡಿ ಸುಮಾರಾಗಿ ನನ್ನ ನಾಲಿಗೆ ಮೇಲೆ ಕೆಲವು ಸರ್ವೆ ನಂಬರುಗಳು ಬಂದು ಹೋಗಿವೆ. ಆದರೆ ಎಲ್ಲ ನಂಬರುಗಳನ್ನು ನನ್ನಿಂದ ಕೊಡವುದಕ್ಕೆ ಸಾಧ್ಯವಿಲ್ಲ. ಆದುದರಿಂದ ತಾವು ಒಂದು ಆದೇಶವನ್ನು ಹೊರಡಿಸಿ, ಇಲಾಖಾ ಅಧಿಕಾರಿಗಳಿಂದ ಈ ಮಾಹಿತಿಯನ್ನು 15 ದಿವಸಗಳೊಳಗೆ ತರಿಸುವ ವ್ಯವಸ್ಥೆಯನ್ನು ಮಾಡಬಹುದು. ಹೆಚ್ಚು ಎಂದರೆ ಒಂದು ತಿಂಗಳೊಳಗೆ ಈ ಅಂಕಿ ಅಂಶಗಳನ್ನು ದಯವಿಟ್ಟು ತರಿಸಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ—ಇದುವರೆಗೆ ಯಾರು ಯಾರು ಟಿ.ಟಿ. ಕಟ್ಟಿದ್ದಾರೆ ಅವರುಗಳ ಹೆಸರನ್ನು ತರಿಸಿದರೆ ಮುಂದಿನ ಕ್ರಮ ಕೈಗೊಳ್ಳಲು ಸುಲಭವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಮುಂದೆ ಅತಿಕ್ರಮಣ ಮಾಡುವವರು ಇದ್ದಾರೆ. ಇವತ್ತು ಅರಣ್ಯಕ್ಕೆ ಸೇರಿರತಕ್ಕ ನಂಬರ್ ಇರಲಿ, ಮತ್ತೊಂದು ಇರಲಿ, ಅದನ್ನು ಶಕ್ತಿವಂತ ಜಮೀನ್ದಾರರು ಅಂದರೆ ಸಾಕಷ್ಟು ಜಮೀನು ಹೊಂದಿರುವವರು ಸಹ ಅತಿಕ್ರಮಣ ಮಾಡಿ ಅನೇಕ ಕಡೆ ಭೂಮಿಯನ್ನು ಸಾಗು ಮಾಡಿದ್ದಾರೆ ಅಂಥವರನ್ನು ಯಾವ ದಯಾದಾಕ್ಷಿಣ್ಯವು ಇಲ್ಲದೆ ಉಚ್ಚಾಟಣೆ ಮಾಡುವ ಕ್ರಮವನ್ನು ಆಗತ್ಯವಾಗಿ ಕೈಗೊಳ್ಳಬೇಕು ; ಇದಕ್ಕೆ ನಾವು ಸಂಪೂರ್ಣವಾಗಿ ಬೆಂಬಲ ಕೊಡುತ್ತೇವೆ. ಈ ವಿಚಾರವನ್ನು ಕಾನೂನು ಚೌಕಟ್ಟಿನಲ್ಲಿ ತಂದು ಅವರನ್ನು ಹೊರಗಡೆ ಹಾಕಬೇಕು. ಆದರೆ ಅದೇ ಸಂದರ್ಭದಲ್ಲಿ ಸಾಗರ ತಾಲ್ಲೂಕು ಮತ್ತು ಕಾರವಾರ ಜಿಲ್ಲೆಗಳಲ್ಲಿ ಏನೇನು ಇಲ್ಲದೆ ಇರತಕ್ಕ ಬಡ ಜನರು ಮತ್ತು ಕಡಿಮೆ ಜಮೀನನ್ನು ಹೊಂದಿರುವವರು ಸುಮಾರು 20-25 ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರತಕ್ಕ ಜಮೀನನ್ನು ಅವರಿಗೆ ಮಂಜೂರ್ಮಾಡತಕ್ಕ ತೀರ್ಮಾನವನ್ನು ಶೀಘ್ರವಾಗಿ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ ಮತ್ತು ಅಂಥ ಜನರಾರಾದರು ಉಚ್ಚಾಟಣೆಗೆ ಒಳಗಾಗಿದ್ದರೆ ಅಂಥವರನ್ನು ಜರೂರಾಗಿ ವಿಮುಕ್ತಗೊಳಿಸಬೇಕೆಂದು ಸಲಹೆ ಮಾಡುತ್ತೇನೆ.

ಈ ಒಂದು ತೀರ್ಮಾನವನ್ನು ಚಾಚೂತಪ್ಪದೆ ಮಾಡುತ್ತೀರಿ ಎನ್ನುವ ನಂಬಿಕೆಯನ್ನು ನಾನು ಇಟ್ಟುಕೊಂಡಿದ್ದೇನೆ. ಇದೇ ಸಂದರ್ಭದಲ್ಲಿ ಸೊರಬ ತಾಲ್ಲೂಕಿನ ಬಗ್ಗೆ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮ್ಮ ತಾಲ್ಲೂಕಿನ ಆನವಟ್ಟಿ ಹೋಬಳಿಯಲ್ಲಿ ತಲೂರು ಗ್ರಾಮ ಇದೆ. ಈ ಗ್ರಾಮಕ್ಕೆ ಸೇರಿರತಕ್ಕ ಸರ್ವೆ ನಂಬರಿನಲ್ಲಿ ಅದು ಸುಮಾರು 80-100 ಎಕರೆ ಆಗಬಹುದು. ಇದಕ್ಕೆ ನಾವು ಹಿಂದೆ ಸ್ಟೇ ಆರ್ಡರ್ ತೆಗೆದು ಕೊಂಡಿದ್ದೆವು. ಇದರಲ್ಲಿ ಪ್ಲಾಂಟೇಷನ್ ಕಾರ್ಪೊರೇಷನ್‌ವರು ಪ್ಲಾಂಟೇಷನ್ ಬೆಳಸಬೇಕು ಎಂದು ಯೋಜನೆಯನ್ನು ತಯಾರು ಮಾಡಿದ್ದರು. ಇಲ್ಲಿ ಹೆಚ್ಚಾಗಿ ಷೆಡ್ಯೂಲ್ ಕ್ಯಾಸ್ಟ್ ಜನ ಅನೇಕ ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದಾರೆ. ಇವರನ್ನು ಉಚ್ಚಾಟನೆ ಮಾಡಿ

ಪ್ಲಾಂಟೇಷನ್ ಕಾರ್ಪೋರೇಷನ್‌ನವರು ಪ್ಲಾಂಟೇಷನ್ ಮಾಡಬೇಕು ಎಂದಿದ್ದರು. ಇದಕ್ಕೆ ಸ್ಟೇ ತಂದಿದ್ದೇವೆ. ಮತ್ತೊಂದು ಹುರುಳಿ ಗ್ರಾಮ ಇದೆ, ಅಲ್ಲಿಯೂ ಕೂಡ ಇಷ್ಟೇ ಆಗಿದೆ. ಅಲ್ಲಿ ನೀಲಗಿರಿ ಗಿಡಗಳನ್ನು ಹಾಕಬೇಕು ಎಂದು ಯೋಜನೆ ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಸಾವಿರಾರು ಎಕರೆಯಷ್ಟು ಜಮೀನನ್ನು ಇದಕ್ಕಾಗಿ ನಾವು ಕೊಡುತ್ತೇವೆ, ಆದರೆ ಬಡವರು ಸಾಗುವಳಿ ಮಾಡತಕ್ಕ ಜಮೀನನ್ನು ಮಾತ್ರ ಇದಕ್ಕಾಗಿ ಕೊಡುವುದು ಬೇಡ ಎಂದು ನಾನು ಹೇಳುತ್ತೇನೆ. ಹಿಂದೆ ನಾವು ತೆಗೆದು ಕೊಂಡಂಥ ಸ್ಟೇ ಈಗ ರದ್ದಾಗಿದೆಯೆಂಬು ನಾನು ಕೇಳಿದ್ದೇನೆ. ಆದ್ದರಿಂದ ತಾವು ದಯವಿಟ್ಟು ಇದನ್ನು ಸರಿಯಾಗಿ ಪರಿಶೀಲನೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ. ಈಗಾಗಲೇ ಅರಣ್ಯ ಇಲಾಖೆಯವರು ಷೆಡ್ಯೂಲ್ ಕ್ಯಾಸ್ಟ್ ಜನರನ್ನು ಆ ಪ್ರದೇಶಕ್ಕೆ ಹೋಗಬೇಡಿ ಎಂದು ಹೇಳುತ್ತಿದ್ದಾರೆ. ಇದು ಷಿಕಾರಿಪುರ ತಾಲ್ಲೂಕಿನಲ್ಲಿಯೂ ಹರಡಿದೆ, ಇದೇ ರೀತಿಯಾಗಿ ರಾಜ್ಯದ ಅನೇಕ ಭಾಗಗಳಲ್ಲಿ ನಡೆದಿರಬಹುದು. ದಯವಾಡಿ ಇದನ್ನು ಪರಿಶೀಲಿಸಿ ಸೂಕ್ತವಾದಂಥ ರಕ್ಷಣೆಯನ್ನು ಬಡವರಿಗೆ ಕೊಡಬೇಕು. ಏಕೆಂದರೆ ಈ ವಿಷಯ, ಅಲ್ಲಿ ಸಾಗುವಳಿ ಮಾಡತಕ್ಕವರಿಗೆ ಭೂಮಿಯನ್ನು ಮಂಜೂರು ಮಾಡಬೇಕು ಎನ್ನುವ ಹಂತದಲ್ಲಿದೆ. ಈಗ ಸ್ಟೇ ಆರ್ಡರ್ ಕ್ಯಾನ್ಸಲ್ ಮಾಡಿ ಬಡವರನ್ನು ಉಚ್ಚಾಟನೆ ಮಾಡತಕ್ಕ ಕ್ರಮವಾಗಲೀ, ಅಥವಾ ಬೇರೆ ಕೆಲಸ ಮಾಡುವುದಾಗಲೀ ಒಳ್ಳೆಯದಲ್ಲ. ಇದೇ ಸಂದರ್ಭದಲ್ಲಿ ನಾನು ಇನ್ನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶರಾವತಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನಿಂದ ಅನೇಕರಿಗೆ ಜಮೀನು ಮುಳುಗಡೆಯಾದಾಗ, ಅವರಿಗೆ ಇಲ್ಲಿಗೆ ಬಂದುಬಿಡಿ ಎಂದು ಜಮೀನನ್ನು ತೋರಿಸಿ ಬಿಟ್ಟಿದ್ದಾರೆ. ಈ ರೀತಿಯಾಗಿ ಅರಣ್ಯ ಇಲಾಖೆಯವರು ತೋರಿಸತಕ್ಕ ಜಮೀನಿನಲ್ಲಿ ಇವರು ಸುಮಾರು 15-16 ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದಾರೆ. ತೀರ್ಥಹಳ್ಳಿ, ಹೊಸನಗರ ಮತ್ತು ಷಿಕಾರಿಪುರ ತಾಲ್ಲೂಕುಗಳಲ್ಲಿ, ಅಲ್ಲದೆ ಸೊರಬ ತಾಲ್ಲೂಕಿನಲ್ಲಿಯೂ ಸಾಗುವಳಿ ಮಾಡುತ್ತಿದ್ದ ಜನರನ್ನು ಉಚ್ಚಾಟನೆ ಮಾಡತಕ್ಕ ಸುದ್ದಿ ಹರಡಿದೆ. ಆದ್ದರಿಂದ ತಾವು ಇದರ ಬಗ್ಗೆ ಸೂಕ್ತ ಆದೇಶವನ್ನು ಅಧಿಕಾರಿಗಳಿಗೆ ಕೊಟ್ಟು ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ತುಂಗಭದ್ರ ಪ್ರಾಜೆಕ್ಟಿಗೆ ಸೇರಿರತಕ್ಕ ಇನ್ನೊಂದು ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇದು ಸೊರಬ ತಾಲ್ಲೂಕಿಗೆ ಏನು ಸಂಬಂಧವೊ ನನಗೆ ಗೊತ್ತಿಲ್ಲ. ಒಂದು ಆರ್ಡರ್ ತಾಲ್ಲೂಕಿಗೆ ಬಂದಿದೆ. ಅವನ್ನು ನಮ್ಮ ಜಿಲ್ಲಾಧಿಕಾರಿಗಳು ಕಳುಹಿಸಿದ್ದಾರೆ ಅದರಲ್ಲಿ ಏನಾಗಿದೆ ಎಂದರೆ, ಎಲ್ಲಿ ಫಾರೆಸ್ಟ್ ಜಮೀನು ಇದೆ ಅದನ್ನು ಯಾರಿಗೂ ಮಂಜೂರು ಮಾಡಬಾರದು ಎಂದು ತಿಳಿಸಿದ್ದಾರೆ ಇದಕ್ಕೂ ಸೊರಬ ತಾಲ್ಲೂಕಿಗೂ ಏನು ಸಂಬಂಧ ಎಂದು ನಮಗೆ ತಿಳಿಯಲಿಲ್ಲ. ಸೊರಬ ತಾಲ್ಲೂಕು ಇರುವುದು ಎಲ್ಲಿ, ಹೊಸಪೇಟೆ ತಾಲ್ಲೂಕು ಇರುವುದು ಎಲ್ಲಿ? ಇದರ ಬಗ್ಗೆ ನಾನು ಒಂದು ಕಾಲಿಂಗ್ ಅಟೆನ್ಷನ್ ಅನ್ನೂ ಸಹ ಕಳುಹಿಸಿದ್ದೇನೆ. ಈ ರೀತಿಯಾಗಿ ಕಳುಹಿಸಿರುವ ಆರ್ಡರನ್ನು ಕೂಡಲೇ ಸರ್ಕಾರದವರು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ,

ಇನ್ನೊಂದು ಪ್ರಮುಖವಾದ ಸಲಹೆಯನ್ನು ನಾನು ಈ ಸಂದರ್ಭದಲ್ಲಿ ಕೊಡಲು ಬಯಸುತ್ತೇನೆ. ಮನೆ ಕಟ್ಟುವುದಕ್ಕೆ ಬಡವರಿಗೆ ಸಾಲ ಕೊಡುತ್ತಿದ್ದರು. ಮಲೆನಾಡಿನ ಜನಕ್ಕೆ ಇದು ಒಂದು ಸ್ಪೆಷಲ್ ಪ್ರಿವಿಲೇಜ್. ಇದರ ಬಗ್ಗೆ ದುರುಪಯೋಗ ಆಗಿದ್ದರಿಂದ ಅದನ್ನು ಹಾಗೆಯೇ ನಿಲ್ಲಿಸಿದ್ದಾರೆ. ಇದಕ್ಕೆ ಒಂದು ಹೊಸ ಯೋಜನೆಯನ್ನು ತಾವು ದಯಮಾಡಿ ತರಬೇಕು ಮತ್ತು ಬಡವರಿಗೆ ಭೂಮಿಯನ್ನು ಒದಗಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಫಾರೆಸ್ಟ್ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಬಗ್ಗೆ ನಾನು ಗುರುತರವಾದ ಆಪಾದನೆಗಳನ್ನು ಮಾಡಿದ್ದೇನೆ. ಅದರ ಮ್ಯಾನೇಜಿಂಗ್ ಡೈರೆಕ್ಟರನ್ನು ಸಸ್ಪೆಂಡ್ ಮಾಡಿದ ತಕ್ಷಣ ಎಲ್ಲಾ ಸರಿ ಹೋಗಲಿಲ್ಲ. ಅಲ್ಲಿರತಕ್ಕ ಹಣ ನಮ್ಮ ಹಣ. ಇದನ್ನು ನಾವು ಸರಿಯಾಗಿ ಉಳಿಸಿಕೊಳ್ಳಬೇಕಾಗಿದೆ. ಅಲ್ಲಿ ಟೆಂಡರ್ ಇಲ್ಲದೆ ಮರವನ್ನು ಮಾರಿರತಕ್ಕ ಅನೇಕ ವ್ಯವಹಾರಗಳು ಇವೆ. ಇದಕ್ಕೆ ನಾನು ಸಭೆಯಲ್ಲಿ ಅಂಕಿ ಅಂಶಗಳನ್ನು ಕೊಟ್ಟು ಪ್ರಸ್ತಾಪಮಾಡಿದ್ದೇನೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ತಮ್ಮ ಉತ್ತರದಲ್ಲಿ ತಿಳಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ,

ನಂತರ ಆಹಾರದ ಬಗ್ಗೆ ನಾನು ಒಂದು ಮಾತನ್ನು ಆಡಬೇಕಾಗಿದೆ. ಹಳೆಯ ದಾಸ್ತಾನು ನಮ್ಮ ರಾಜ್ಯದಲ್ಲಿ ಯಥೇಚ್ಛವಾಗಿದೆ. ಮೂರು ವರ್ಷಗಳಿಂದ ಇಟ್ಟಿರತಕ್ಕ ಭತ್ತ ಹುಳ ಹತ್ತಿದೆ ಎಂದು ನಾನು ಕೇಳಿದ್ದೇನೆ. ದಯಮಾಡಿ ಇದರ ಬಗ್ಗೆ ಪೂರ್ಣ ತನಿಖೆ ಮಾಡಿಸಬೇಕು.

ಅನಂತರ ನಮ್ಮ ವಿರೋಧ ಪಕ್ಷದ ಮಿತ್ರರು ಮಾತನಾಡಬೇಕಾದರೆ, ಒಂದು ಮಾತನ್ನು ಹೇಳಿದ್ದಾರೆ. ಕಟ್ಟಿಗೆ ಕಡಿಯುವ ರೈತರಿಗೆ ಸರ್ಕಾರದವರು ತೊಂದರೆ ಕೊಟ್ಟಿದ್ದಾರೆ ಎನ್ನುವುದು.

ಶ್ರೀ ಕೋಣಂದೂರು ಲಿಂಗಪ್ಪ.—ಇದು ಸುಳ್ಳೆ ?

ಶ್ರೀ ಎಸ್. ಬಂಗಾರಪ್ಪ.—ಇದು ಸ್ವಲ್ಪಮಟ್ಟಿಗೆ ನಿಜ ಇರಬಹುದು, ಆದರೆ ತಾವು ಹೇಳುವ ಮಟ್ಟಿಗೆ ಇರಲಿಲ್ಲ. ಚುನಾವಣೆಯ ಕಾಲದಲ್ಲಿ ಇದರ ಬಗ್ಗೆ ದೊಡ್ಡ ರಾದ್ಧಾಂತ ಮಾಡಿದರು.

ಶ್ರೀ ಕೋಣಂದೂರು ಲಿಂಗಪ್ಪ.—ನಿಮ್ಮ ತಾಲ್ಲೂಕಿನಲ್ಲಿ ಇದು ನಡೆಯಲಿಲ್ಲವೆ ?

ಶ್ರೀ ಎಸ್. ಬಂಗಾರಪ್ಪ.—ನಮ್ಮ ತಾಲ್ಲೂಕಿನಲ್ಲಿ ಇದು ನಡೆದಿದೆ, ಆದರೆ ತಾವು ಹೇಳುವ ಮಟ್ಟದಲ್ಲಿ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಬಂಗಾರಪ್ಪನವರು ಈ ಕಡೆ ಕುಳಿತಾಗ ಅದು ಎಷ್ಟು ಪ್ರಮಾಣದಲ್ಲಿತ್ತು ?

ಶ್ರೀ ಎಸ್. ಬಂಗಾರಪ್ಪ.—ನಾನು ಪೂರಾ ಬದಲಾವಣೆಯಾಗಿಲ್ಲ. ಕೆಲವು ಮಾತು ಸತ್ಯ ಇರಬಹುದು. ಆದರೆ ಕೆಲವು ಅಂಶಗಳು ಉತ್ಪ್ರೇಕ್ಷೆಯಿಂದ ಕೂಡಿವೆ, ಕಳೆದ ಸಾರಿ ಅಧಿವೇಶನ ಸೇರಿದಾಗ ಮಾನ್ಯ ಪಾಟೀಲರು ತಮ್ಮ ಕಾನೂನನ್ನು ಅಲ್ಲಿ ಪ್ರಚುರ ಪಡಿಸಿದರು. ಸರ್ಕಾರದವರು ತೆಗೆದುಕೊಂಡಿರತಕ್ಕ ಕ್ರಮಕ್ಕೆ ಬೆಂಬಲ ಸಿಕ್ಕಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಬಂಗಾರಪ್ಪನವರು ಆ ಕಡೆಗೆ ಹೋದ ಮೇಲೆ ಬದಲಾವಣೆಯಾದರೆ ಸಂತೋಷ ಪಡೋಣ. ನಮ್ಮ ರೈತರು, ಅವರ ರೈತರುಗಳು ಆಲೆಮನೆ ಆಡುವುದಕ್ಕೆ ಸೌದೆಯನ್ನು ಹೇಗೆ ತರುತ್ತಾರೆ ಎನ್ನುವುದನ್ನು ಅವರು ತಿಳಿಸಬೇಕು. ಈಗ ಆಲೆ ಆಡುವುದಕ್ಕೆ ಸೌದೆಯನ್ನು ಲೈಸೆನ್ಸ್ ಪಡೆದು ತರಬೇಕಾಗಿದೆ. ಅವರ ರೈತರುಗಳು ಹೇಗೆ ಸೌದೆ ತರುತ್ತಾರೆ ಎಂದು ಅವರು ಹೇಳಲಿ ?

ಶ್ರೀ ಎಸ್. ಬಂಗಾರಪ್ಪ.—ಆಲೆ ಮನೆ ಆಡುವುದಕ್ಕೆ ಸೌದೆ ಬೇಕಾದರೆ ಹೇಗೆ ಸೌದೆ ತರಬೇಕು ಎನ್ನುವುದನ್ನು ನಾನು ಕಳೆದ ಸಾರಿ ಪ್ರಸ್ತಾಪ ಮಾಡಿದಾಗ ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೆನು. ಮಾನ್ಯ ಪಾಟೀಲರು ಇದರ ಬಗ್ಗೆ ಏನು ತಿಳಿಸುತ್ತಾರೆಯೋ ನೋಡೋಣ. ನನಗೆ ಗೊತ್ತಿರುವ ಹಾಗೆ ಇದಕ್ಕೆ ಕೆಲವು ಕಡೆಗಳಲ್ಲಿ ತೊಂದರೆ ಆಗಿರಬಹುದು ಆದರೆ ಅದು ಸರ್ಕಾರದ ಗಮನಕ್ಕೆ ಬಂದಿರಲಿಕ್ಕಿಲ್ಲ. ಈಗ ಮುಖ್ಯವಾದ ವಿಷಯ ಪ್ರಸ್ತಾಪ ಮಾಡುವುದು ಏನೆಂದರೆ, ಚುನಾವಣೆ ಕಾಲದಲ್ಲಿ ಇವರುಗಳು ದೊಡ್ಡ ದೊಡ್ಡ ಭಾಷಣಗಳನ್ನು ಮಾಡಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಬಂಗಾರಪ್ಪನವರು ಹೋದ ವರ್ಷದ ತಮ್ಮ ಬಡ್ಜೆಟ್ ಭಾಷಣವನ್ನು ಜ್ಞಾಪಕ ಮಾಡಿಕೊಳ್ಳಲಿ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ಸರ್ಕಾರದವರು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ ಅವೆಲ್ಲವೂ ಜನರ ಅಭಿವೃದ್ಧಿಗಾಗಿಯೇ ಎನ್ನುವುದನ್ನು ಎಲ್ಲರೂ ಅರಿತು ಕೊಂಡಿದ್ದಾರೆ. ದೇಶದ ಅಭಿವೃದ್ಧಿಗೆ ತಕ್ಕ ಕಾರ್ಯಕ್ರಮಗಳನ್ನು ಸರ್ಕಾರದವರು ಜಾರಿಗೆ ತಂದಿದ್ದಾರೆ, ಅದಕ್ಕಾಗಿ ಮಾನ್ಯ ಸಚಿವರನ್ನು ವಂದಿಸಿ, ಮತ್ತು ಅಧ್ಯಕ್ಷರು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರಾದ ಬಂಗಾರಪ್ಪನವರು ಅರಣ್ಯ ಜಮೀನನ್ನು ಕೊಡಬೇಕು ಎಂದು ಕಾರವಾರ ಜಿಲ್ಲೆಯಲ್ಲಿ ಸತ್ಯಾಗ್ರಹ ಮಾಡಿದ್ದರು, ಈಗ ತಮ್ಮ ಪಾರ್ಟಿಗೆ ಸೇರಿಕೊಂಡಿದ್ದಾರೆ.

5-00 ಪಿ. ಎಂ.

ಶ್ರೀ ಕೆ. ಎಚ್. ಪಾಟೀಲ್.—ಅವರನ್ನು ನಾವು ಸೇರಿಸಿಕೊಂಡಿದ್ದೇವೋ ಅಥವಾ ನೀವು ಮಾನ್ಯ ಸದಸ್ಯರಾದ ದೇವೇಗೌಡರ ಪಾರ್ಟಿಗೆ ಸೇರಿಕೊಂಡಿದ್ದಕ್ಕೆ ಅವರು ಇಲ್ಲಿಗೆ ಬಂದರೋ,

ಶ್ರೀ ಎಸ್. ಬಂಗಾರಪ್ಪ.—ಅಕ್ರಮ ಸಾಗುವಳಿ ಜಮೀನಿನ ಬಗ್ಗೆ ನಾವು ಸತ್ಯಾಗ್ರಹ ಮಾಡಿ ಆ ಬಗ್ಗೆ ಒಂದು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಹೇಳಿ ಒತ್ತಾಯ ಮಾಡಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈ ಒಂದು ಬೇಡಿಕೆ ಮೇಲೆ ಚರ್ಚೆ ಮಾಡಲಿಕ್ಕೆ ಭಾಗವಹಿಸಬಾರದು ಎಂದು ಮನಸ್ಸಿನಲ್ಲಿ ಇಟ್ಟುಕೊಂಡಿದ್ದೆ, ಆದರೆ ಈ ಒಂದು ವಿಷಯಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುವ ಸಂದರ್ಭದಲ್ಲಿ ವಿವರ ತಿಳಿಸಬೇಕು, ಅದು ಸಾಧ್ಯವಿಲ್ಲದೆ ಹೋದರೆ ಈ ಅಧಿವೇಶನ ಮುಗಿಯುವುದರೊಳಗಾಗಿ ತಿಳಿಸಬೇಕು ಎಂದು ಕೇಳಿಕೊಳ್ಳುವುದಕ್ಕಾಗಿ ನಿಂತಿದ್ದೇನೆ. 1972ರಲ್ಲಿ ನಮ್ಮ ರಾಜ್ಯದಲ್ಲಿ ಭೀಕರ ಬರಗಾಲ ಬಂದಾಗ ಬೇರೆ ರಾಜ್ಯಗಳಿಂದ ಎಷ್ಟು ಆಹಾರವನ್ನು ಗೌರ್ನಮೆಂಟ್ ಟು ಗೌರ್ನಮೆಂಟ್ ಕೊಟ್ಟಿದ್ದಾರೆ. ಈ ರಾಜ್ಯದ ಜನತೆಯ ಕಷ್ಟವನ್ನು ಮನಗಂಡು ಬೇರೆ ರಾಜ್ಯದವರು, ರಾಗಿ, ಅಕ್ಕಿ, ಗೋಧಿ, ಬೇಳೆ ಮುಂತಾದ ಯಾವ ಯಾವ ಆಹಾರ ಪದಾರ್ಥಗಳನ್ನು ಕೊಟ್ಟಿದ್ದಾರೆ. ಅದನ್ನು ಯಾರ ಮುಖಾಂತರ ರಾಜ್ಯಕ್ಕೆ ಸಾಗಾಣಿಕೆ ಮಾಡಿಸಿ ವಿತರಣೆ ಮಾಡಲಾಗಿದೆ 1972-73 ರಿಂದ ಈ ತಹಲ್ ವರೆವಿಗೆ ಎಷ್ಟು ಬಂದಿದೆ. ಇದನ್ನು ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್‌ನವರು ಮಾಡಿದ್ದಾರೆಯೇ, ಫುಡ್ ಕಾರ್ಪೊರೇಷನ್‌ನವರು ಮಾಡಿದ್ದಾರೆಯೇ, ಅಥವಾ ಖಾಸಗಿ ವರ್ತಕರಿಗೆ ಕೊಟ್ಟು ಮಾಡಿಸಿದ್ದೀರಾ, ಇದರ ಬಗ್ಗೆ ಕಳೆದ 5 ವರ್ಷಕ್ಕೆ ಸಂಬಂಧಪಟ್ಟಂತೆ ಪೂರ್ಣ ವಿವರವನ್ನು ಈ ಸಭೆಗೆ ಒದಗಿಸಬೇಕು, ಈಗ ಸದ್ಯಕ್ಕೆ ಕಷ್ಟವಾದರೆ, ಈ ಅಧಿವೇಶನ ಮುಗಿಯುವುದರೊಳಗಾಗಿ ಪೂರ್ಣ ವಿವರವನ್ನು ಸಭೆಯ ಮುಂದೆ ಇಡಬೇಕು ಎಂದು ಕೇಳಿಕೊಳ್ಳುತ್ತೇನೆ.

SRI B. B. SAYANAK (Belgaum City).—Sir, I oppose the Demands for Grants moved by the Hon. Minister for Food and Civil Supplies and Forests. The prices of essential commodities such as pulses, onions, etc. are scaring in the market. The Janata Party in blaming the Congress and the Congress is blaming the Janata Party for this scaring of prices. I request the Hon. Minister not to blame any person but make arrangements to supply the essential commodities at fair prices to the poor and downtrodden people. Cement is also not available in the market. I want to know what action the Government is going to take in this respect because people want to construct houses but cement is not available and they have to purchase it in blank market. The merchant community is minting money by induling in black market and I know that the Hon. Minister is also of the opinion that it must be stopped. I would like to ask the Minister way there is discrimination in distributing rice, wheat, jowar and milo to Bangalore City and places like Belguam and Dharwar. He is giving 3 kgs of rice in Bangalore City as against 1 kg in Belguam, 850 grams of sugar in Bangalore City as against 800 grams in Belgaum. Why this discrimination and why not the Government distribute equally to all the citizens of the Karnataka State ?

Another thing is that in the ration shops in Belgaum worst quality of jowar, milo and rice are supplied. They cannot be eaten by the poor people or the public. I have asked the officer concerned

why there is dirt in milo and jowar. He told me that jowar is of last year and that milo is supplied by the Centre and so we cannot help.

SRI K. H. PATIL.—What is his name ?

SRI B. B. SAYANAK.—He is Mr. Naik. If this is so, why is the Government not supplying good quality milo and jowar to the public.

I have got a shop at Tilakwadi and my brother Sri Krishna Bhimarao Sayanak is running it. He got only a few kgs of edible oil. He was arrested by the police under D.I.R. So many retailers were arrested but not the wholesale merchants in the month of September 1976. The police were getting money from the rich shopkeepers but not from the retailers. All of them are now acquitted by the court. When my brother and others went in appeal before the D.C., he was surprised to know how my brother was prosecuted under D.I.R. If this is the attitude of the Government *i. e.* to take revenge against Mr. Sayanak or his brother, it is reprehensible.

Regarding Forest, the Government has given 80 acres of forest land to one Mr. Channappa Wali for cultivation. That man is not cultivating that land but he has leased it out to some people belonging to the Christian community for running a training college. There are so many persons of this type. If this is the case, what is the use of giving land to persons who are political sufferers or Harijans or Girijans ? This must be stopped. In my taluka, in Karwar Taluka and so many other talukas the Government has given lands but nobody is cultivating them and they have leased them out. We must grow trees and create forest. Unless and until we create more and more forest, we cannot get rain. But what happens is that we are only cutting trees and are not planting them. If this is so, how can we get rain which is needed for agriculture ? In my taluk there is no rain and people are worried that crops may suffer for want of rain. I request the Government not to give land to any person.

I know of a case where a person had gone to Karwar. He is a truck owner and he went to bring wood for another person. He loaded the truck but the guard attached the truck under the impression that this truck was allowed for some illegal transaction. I have no objection for you to file a case. But for how many days you want that vehicle to be impounded ? For nearly 35 days it was not allowed to be taken. You should see that cases are disposed of in three or four days. Please don't damage the property of others.

SRI K. H PATIL.—I do not know the nature of the case. As a matter of fact if it is unauthorised felling of wood, even the vehicle is liable to be confiscated to the Government. I do not know how it was returned to him.

SRI B. B. SAYANAK —I will give you the particulars, That is not an illegal transaction. He was punished with a fine of Rs. 1,500. The car is not confiscated.

I thank the chair for giving me the opportunity to speak and conclude my speech.

† ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್ (ಹೊಸನಗರ).—ಮಾನ್ಯ ಸಭಾಧ್ಯಕ್ಷರೇ, ಅರಣ್ಯ ಮತ್ತು ಆಹಾರ ಸಚಿವರು ತಂದಿರತಕ್ಕ ಮನ್ನಣೆಗೆ ನನ್ನ ಸಂಪೂರ್ಣ ಬೆಂಬಲ ನೀಡಿ ಎರಡು ಮಾತುಗಳನ್ನು ಆಡುವುದಕ್ಕೆ ಬಯಸುತ್ತೇನೆ. ಕಳೆದ 5 ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ಆಗಿರತಕ್ಕ ಅಭಿವೃದ್ಧಿ ಯಾವ ಕಾಲದಲ್ಲೂ ಆಗಿಲ್ಲ ಎನ್ನುವ ಮಾತನ್ನು ಅಭಿನಂದನಾ ಪೂರ್ವಕವಾಗಿ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ದಕ್ಷರಾದ ಮಂತ್ರಿಗಳು ಹಾಗೂ ಅವರ ಜೊತೆಗೆ ಇರತಕ್ಕ ಅಧಿಕಾರಿಗಳು ಕಾರಣ. ಈ ಸಂದರ್ಭದಲ್ಲಿ ನಾನು ಅವರುಗಳಿಗೆ ವಂದನೆಯನ್ನು ಹೇಳುವುದರ ಮೂಲಕ ಅಭಿನಂದಿಸುತ್ತೇನೆ. ನಮ್ಮ ಮಾನ್ಯ ದೇವೇಗೌಡರು ಈ ಸದನದಲ್ಲಿ ಇಲ್ಲ ಅವರು ಹೊರಗಡೆ ಹೋಗಿದ್ದಾರೆ ಕೋಣಂದೂರು ಲಿಂಗಪ್ಪನವರು ಇದ್ದಾರೆ ಅವರು ಅವರ ಜೊತೆ ಸೇರಿಕೊಂಡಿದ್ದಾರೆ. ದೇವೇಗೌಡರು ಮಾತನಾಡುತ್ತಾ ಮಧ್ಯೆ ಹೇಳಿದರು. ಘೋರ್ಪಡೆಯವರಿಗೆ ಅವರ ಕೈಗಾರಿಕೆಗೆ ಕಟ್ಟಿಗೆಕೊಟ್ಟು ಸುಮಾರು 80 ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಲುಕ್ಸಾನು ಮಾಡಿದ್ದಾರೆ ಎನ್ನುವ ಅಪಾದನೆಯನ್ನು ಈ ಸದನದ ಮೂಲಕ ಹೇಳಿದರು. ನಾನು ಈ ಸದನದ ಮುಖೇನ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಹಿಂದೆ ವೀರೇಂದ್ರಪಾಟೀಲ್‌ರವರ ಸರ್ಕಾರ ಇದ್ದಾಗ ದಾಂಡೇಲಿ ಕಂಪನಿಗೆ 30-40 ವರ್ಷಗಳಕಾಲ ಒಪ್ಪಂದ ಮಾಡಿ ಕೇವಲ 25 ರೂಪಾಯಿಗೆ ಒಂದು ಟನ್ನಿನಂತೆ ನೀಲಗಿರಿ ಮರಗಳನ್ನು ಕೊಟ್ಟರು ಅದರ ಪ್ರಕಾರ ವರ್ಷಕ್ಕೆ ಎಷ್ಟು ಲುಕ್ಸಾನು ಆಯಿತು ? ಇದಕ್ಕೆ ಜವಾಬ್ದಾರರು ಯಾರು ? ಇದರ ಬಗ್ಗೆ ಪರಿಶೀಲನೆ ನಡೆಯುತ್ತಿದೆ, ನಮ್ಮ ಸರ್ಕಾರಕ್ಕೆ ನಾನು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಹಿಂದೆ ಅವರು ಮಾಡಿಕೊಂಡಿರತಕ್ಕ ಒಪ್ಪಂದದ ಪ್ರಕಾರ ಮಲೆನಾಡಿನ ಜನ ಬಹಳ ಕಷ್ಟಕ್ಕೆ ಗುರಿಯಾಗಿದ್ದಾರೆ. ರಾಜಮಹಾರಾಜರನ್ನೇ ಓಡಿಸಿದಂತ ಧೀಮಂತ ಪಕ್ಷ ನಮ್ಮದು ನನಗೆ ಆಶ್ಚರ್ಯವಾಗುತ್ತದೆ ಈ ವಿಚಾರದಲ್ಲಿ ಏಕೆ ಈ ರೀತಿ ಮಾಡುತ್ತಿದೆ. ಒಂದು ನಿದರ್ಶನ ಕೊಟ್ಟು ಹೇಳುತ್ತೇನೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬೆಡ್ಡೆಕೊಪ್ಪ ಎನ್ನುವ ಊರಿನಲ್ಲಿ ಯಾವತ್ತೂ ಕೂಡ ಹೇರಳವಾದ ನೀರು ಬಾವಿಗಳಲ್ಲಾಗಲೀ ಕೆರೆಗಳಲ್ಲಾಗಲೀ ಇರುತ್ತಿತ್ತು. ಇವತ್ತು ದುರಾದೃಷ್ಟವಶಾತ್ ಅರಣ್ಯ ಇಲಾಖೆಯಿಂದ ಎಲ್ಲಾ ಕಡೆಯಲ್ಲಿಯೂ ನೀಲಗಿರಿ ಮರಗಳನ್ನು ಹಾಕಿರುವ ಕಾರಣ ಯಾವ ಬಾವಿಯಲ್ಲಾಗಲೀ, ಕೆರೆಯಲ್ಲಾಗಲೀ ಇವತ್ತು ನೀರಿಲ್ಲ. ನೀಲಗಿರಿ ಮರಗಳನ್ನು ಹಾಕಿರತಕ್ಕ ಕಡೆ ಅರಣ್ಯ ಇಲಾಖೆಯವರು ಪರಿಶೀಲನೆ ಮಾಡಿ ನೋಡಬೇಡವೆ ? ಇವತ್ತು ಮಲೆನಾಡಿನಲ್ಲಿ ನೀರಿನ ಸೌಕರ್ಯ ಕಡಿಮೆಯಾಗಿದೆ. ಇಂಥ ಒಂದು ಒಪ್ಪಂದ ಮಾಡಿಕೊಂಡು 80 ರೂಪಾಯಿ ಕೊಟ್ಟರೂ ಕೊಡದಂತ ಕಟ್ಟಿಗೆಯನ್ನು ಕೇವಲ 25 ರೂಪಾಯಿಗೆ ಒಂದು ಟನ್ನಿನಂತೆ ಕೊಡುವ ಒಪ್ಪಂದವನ್ನು ಆದಷ್ಟುಬೇಗ ಕಿತ್ತುಹಾಕಬೇಕೆಂದು ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಮಲೆನಾಡಿನಲ್ಲಿರತಕ್ಕ ಅರಣ್ಯವೇ ಈಗ ಕಡಿಮೆಯಾಗಿದೆ ಇದರ ಜೊತೆಗೆ ಮಳೆ ಕಡಿಮೆಯಾಗುವುದಕ್ಕೆ ನೀಲಗಿರಿ ಮರಗಳೇ ಕಾರಣ ಎಂದು ಸೈದ್ಧಾಂತಿಕವಾಗಿ ಹೇಳುತ್ತೇನೆ. ನಾನು ಚಿಕ್ಕವಯಸ್ಸಿನವನಾಗಿದ್ದಾಗ ನಮ್ಮ ಭಾಗದಲ್ಲಿ ಜೂನ್ ತಿಂಗಳಲ್ಲಿ ಮಳೆ ಪ್ರಾರಂಭವಾಗಿ ಧಾರಾಕಾರವಾಗಿ ಬರುತ್ತಿತ್ತು. ಇವತ್ತು ಜೂನ್ ಜುಲೈ ಎರಡು ತಿಂಗಳು ಆದರೆ ಬಹಳ ಹೆಚ್ಚು. ಇದಕ್ಕೆ ಮಲೆನಾಡಿನ ರೈತರು ಕಾರಣ ಅಲ್ಲ ನಾವು ನೀಲಗಿರಿ ಪ್ಲಾಂಟೇಶನ್‌ಗಳನ್ನು ಮಾಡಿದ್ದೇ ಕಾರಣ ಎಂದು ಖಂಡಿತವಾಗಿ ಹೇಳುತ್ತೇನೆ. ನೀಲಗಿರಿ ಮರಗಳಿಗೆ ಮೋಡವನ್ನು ತಮ್ಮ ಕಡೆ ಸೆಳೆದುಕೊಳ್ಳುವ ಶಕ್ತಿ ಇಲ್ಲ ಈ ಭಾವನೆ ಮಲೆನಾಡು ಜನತೆಯಲ್ಲಿ ಸಾಕಷ್ಟು ಇದೆ ಎಂದು ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ. ಆದರೆ ಒಳ್ಳೆಯ ಕೆಲಸವನ್ನು ಬಹಳಷ್ಟು ಮಾಡಿದ್ದಾರೆ ಇವತ್ತು ಗುಡ್ಡೆಕೊಪ್ಪ ಗ್ರಾಮ ಹೊಸದಾಗಿ ಬೆಳೆದಿದೆ ಆ ಗುಡ್ಡದಲ್ಲಿ ಏನೇನು ಬೆಳೆಯುತ್ತಾ ಇರ

ಲಲ್ಲ. ಇವತ್ತು ಅಲ್ಲಿ ಒಳ್ಳೆಯ ಗೇರು ಬೀಜದ ಮರಗಳನ್ನು ಹಾಕಿಸಿ ಉತ್ತಮ ಕೆಲಸ ಮಾಡಿದ್ದಾರೆ. ಪ್ರಾರಂಭದಲ್ಲಿ ಅಲ್ಲಿನ ಜನತೆ ನಮ್ಮ ದನಕರುಗಳಿಗೆ ಅನುಕೂಲವಾಗಿದ್ದಂತ ಗುಡ್ಡವನ್ನು ಆಕ್ರಮ ಸಿಕೊಂಡು ನಮಗೆ ತೊಂದರೆ ಮಾಡಿದರು ಎಂದು ಹೇಳುತ್ತಿದ್ದರು. ಆದರೆ ಇವತ್ತು ಅಲ್ಲಿನ ಜನತೆ ಸರ್ಕಾರದವರನ್ನು ಶ್ಲಾಘನೆ ಮಾಡಿ ಮೆಚ್ಚುತ್ತಿದ್ದಾರೆ. ಇವತ್ತು ಅಲ್ಲಿ ಎಲ್ಲಾ ಕಡೆಯು ರಮ್ಯವಾದ ಗೇರುಮರಗಳನ್ನು ಹಾಕಿದ್ದಾರೆ. ಇಲ್ಲಿ ಒಂದು ವಿಷಯವನ್ನು ಸರ್ಕಾರ ಯೋಚನೆ ಮಾಡಬೇಕು, ವರ್ಷೇ ವರ್ಷೇ ಇದನ್ನು ಖಾಸಗೀ ಜನಗಳಿಗೆ ಅಕ್ಷನ್ನಿನಲ್ಲಿ ಕೊಟ್ಟು ಹಾಕಿಸುತ್ತಿದ್ದಾರೆ. ಖಾಸಗೀ ಯವರು ಬಂದಂತ ಗೇರು ಬೀಜವನ್ನು ಮಾರಾಟ ಮಾಡುತ್ತಾರೆ, ಈ ಕೆಲಸವನ್ನು ಸರ್ಕಾರವೇ ವಹಿಸಿಕೊಂಡು ಮಾರಾಟ ಮಾಡಿದರೆ, ಸರ್ಕಾರಕ್ಕೆ ಹೆಚ್ಚು ಲಾಭ ಬರುವುದಲ್ಲದೆ ಲುಕ್ಸಾನು ಕೂಡ ಕಡಿಮೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಪಡುತ್ತೇನೆ. ಅನೇಕ ಜನ ಆಕ್ಷನ್ನಿನಲ್ಲಿ ಪಾಪರಾಗಿ ತಮ್ಮ ರಕ್ಷಣೆ ಮಾಡಿಕೊಳ್ಳುವುದಕ್ಕೆ ಆಗುತ್ತಾ ಇಲ್ಲ ಅವನಿಗೆ ಜವಾಬ್ದಾರಿ ಜಾಸ್ತಿ ಇರುತ್ತದೆ. ಅವನು ಕಳ್ಳಕಾಕರಿಂದ ರಕ್ಷಣೆ ಮಾಡಿಕೊಳ್ಳುವುದು ಕಷ್ಟವಾಗುತ್ತದೆ ಆದುದ ರಿಂದ ಇನ್ನುಮುಂದೆ ಸರ್ಕಾರವೇ ವಹಿಸಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಭಾಗದ ಸದಸ್ಯರುಗಳಾದ ತಿಮ್ಮಪ್ಪನವರೂ ಬಂಗಾರಪ್ಪನವರೂ ಹಾಗೂ ಕೋಣಂದೂರು ಲಿಂಗಪ್ಪನವರು ಪದೇ ಪದೇ ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳಲ್ಲಿ ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇದು ಮಲೆನಾಡಿನ ಜನರ ಜೀವನ ಸಮಸ್ಯೆ ಸುಮಾರು 15—20 ವರ್ಷಗಳಿಂದಲೂ ಸಾಗುವಳಿ ಮಾಡಿಕೊಂಡು ಬಂದಂತ ಜಮೀನುಗಳನ್ನು ಅವರ ಕೈತಪ್ಪಿಸುವುದಕ್ಕೆ ಪ್ರಯತ್ನ ನಡೆಯುತ್ತದೆ. ನಾನು ಶ್ರೀಮಂತರ ಹಾಗೂ ಭೂ ಮಾಲೀಕರ ಪರವಾಗಿ ಮಾತನಾಡುತ್ತಾ ಇಲ್ಲ ಇವತ್ತು ಆ ಜನತೆಗೆ ಆ ಜಮೀನನ್ನು ಬಿಟ್ಟರೆ, ಬೇರೆ ಯಾವುದೇ ರೀತಿಯ ಜಮೀನು ಇಲ್ಲ ಇದು ಸತ್ಯವಾದ ವಿಚಾರ. ಮಾನ್ಯ ಮಂತ್ರಿಗಳು ಈ ಸದನ ಮುಗಿಯುವುದರೊಳಗೆ ಈ ಸಮಸ್ಯೆಯನ್ನು ತೀರ್ಮಾನ ಮಾಡ ಬೇಕೆಂದು ಹೇಳುತ್ತೇನೆ ಇಲ್ಲದೇ ಇದ್ದರೆ ನಮ್ಮ ಕಾಂಗ್ರೆಸ್ ಪಕ್ಷ ಬರುವುದು ಕಷ್ಟವಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಬರಬೇಕು ಅನ್ನುವ ದೃಷ್ಟಿ ಯಿಂದ ನಾವು ಯಾವುದನ್ನೂ ನಿರ್ಣಯ ಮಾಡುತ್ತಾ ಇಲ್ಲ. ಜನರ ಹಿತವಾಗುವ ಕೆಲಸ ಯಾವುದಾ ದರೂ ಇದ್ದರೆ ಹೇಳಿ. ಅವರ ಹಿತವಾಗುವಂಥಾ ಕೆಲಸ ಮಾಡೋಣ. ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಬರಬೇಕು ಅನ್ನುವ ದೃಷ್ಟಿಯಿಂದ ಹೇಳುವುದಾದರೆ ಅದನ್ನು ಮಾಡುವುದಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನೀವು ಹಾಗೆ ಹೇಳಬೇಕಾದ್ದೇ ಸರಿ, ನಾವು ಹೀಗೆ ಹೇಳಬೇಕಾದ್ದೇ ಸರಿ. ಈಗ ಇರತಕ್ಕಂಥಾ ಈ ಮಲೆನಾಡಿನ ಸಮಸ್ಯೆ ಸುಮಾರು 10—20 ಸಾವಿರ ಜನರಿಗೆ ನೇರವಾಗಿ ಪರಿಣಾಮ ಉಂಟಾಗುವುದರಿಂದ ಇದನ್ನು ಆದಷ್ಟು ಶೀಘ್ರವಾಗಿ ಬಗೆಹರಿಸಬೇಕು ಎಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಿಗೆ ಮತ್ತು ಸೊಪ್ಪಿನ ವಿಚಾರದಲ್ಲಿ ಹೇಳುವುದಾದರೆ ಅವರು ಈ ಬಗ್ಗೆ ಮಲೆನಾಡಿನ ಜನರಿಗೆ ಉಸಿರು ಬಿಡುವಂತೆ ಮಾಡಿದ್ದಾರೆ. ಅದೇರೀತಿಯಾಗಿ ಈ ಸಮಸ್ಯೆಯನ್ನೂ ಕೂಡ ಬೇಗನೆ ಬಿಡಿಸಿ ಮಲೆನಾಡಿನ ಜನರಿಗೆ ಉಪಯೋಗ ಮಾಡಿಕೊಡಬೇಕು ಎಂದು ನಾನು ಮತ್ತೊಮ್ಮೆ ಕೇಳುತ್ತೇನೆ.

ಇನ್ನು ಆಹಾರದ ವಿಚಾರದಲ್ಲಿ ಹೇಳುವುದಾದರೆ ಹಿಂದೆ ಅವರು ಶಿವಮೊಗ್ಗಾಕ್ಕೆ ಬಂದಾಗ ನಾನು ಅವರಲ್ಲಿ ಖಾಸಗಿಯಾಗಿ ಮಾತನಾಡಿದೆ. ಈವೊತ್ತು ನಿಮಗೆ ಹೇಳುವುದಾದರೆ ನಮ್ಮ ಜಿಲ್ಲೆ ಬರಗಾಲ ಪೀಡಿತವಾದಂಥಾ ಜಿಲ್ಲೆಯಾದುದರಿಂದ ಪ್ರತಿಯೊಬ್ಬನೂ ಕೂಡ ದುಡಿದು 4—5 ರೂಪಾಯಿ ಸಂಪಾದನೆ ಮಾಡಬೇಕು. ಆತ ಏನಾದರು ಆಹಾರವನ್ನು ಕೊಂಡುಕೊಳ್ಳಬೇಕಾದರೆ ನಮ್ಮ ಶಿವಮೊಗ್ಗಕ್ಕಾಗಲಿ ಅಥವಾ ಹತ್ತಿರದ ಯಾವುದಾದರೂ ಊರಿಗೆ ಹೋಗಿ ಆಹಾರ ದವಸ ವನ್ನು ಕೊಂಡುಕೊಳ್ಳಬೇಕು. ಅವನಿಗೆ ಅಲ್ಲಿ ಆಹಾರ ದವಸಗಳು ಸಿಕ್ಕುವುದಿಲ್ಲ. ಅಂತ ಹೇಳಿ ನಾನು ಈ ಬಗ್ಗೆ ಒಂದು ಸಲಹೆ ಮಾಡಿದೆ. ಅದೇನೆಂದರೆ ಅವರಿಗೆ ಯಾವುದಾದರೂ ಅಲ್ಲೇ ಒಂದು ಫೇರ್‌ಪ್ರೈಸ್ ಡಿಪೋ ಮೂಲಕವಾಗಲಿ ಅಥವಾ ಬೇರೆ ಯಾವುದಾದರೂ ಒಂದು ವ್ಯವಸ್ಥೆಮಾಡಿ

ಅಲ್ಲೇ ಅವರಿಗೆ ಆಹಾರ ದವಸಗಳು ವಿತರಣೆಯಾಗುವಂತೆ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳಿದೆ. ಅವರು ಜಿಲ್ಲಾಧಿಕಾರಿಯವರಿಗೆ ಹೇಳಿ ಮಾಡಿಸುತ್ತೇನೆ ಅಂತ ಹೇಳಿದರು, ಮತ್ತೇನಾಯಿತೋ ನನಗೆ ಗೊತ್ತಿಲ್ಲ.

ಇನ್ನು ಸಕ್ಕರೆ ದರದ ವಿಚಾರದಲ್ಲಿ ಹೇಳುವುದಾದರೆ ಹೊರಗಡೆ ಒಂದು ಕೆ.ಜಿ.ಗೆ $4\frac{1}{2}$ ಯಿಂದ 5 ರೂಪಾಯಿನವರೆಗೆ ಇದೆ. ಕಂಟ್ರೋಲ್ ರೇಟ್ ಸುಮಾರು 2 ರೂಪಾಯಿ ಇದೆ. ಈ ಒಂದು ವ್ಯತ್ಯಾಸದಿಂದ ಅನೇಕ ದುರ್ವ್ಯವಹಾರಗಳು ನಡೆಯುತ್ತಾ ಇದೆ ಅನ್ನುವುದನ್ನು ಅವರೂ ಒಪ್ಪುತ್ತಾರೆ ಮತ್ತು ಇದು ಎಲ್ಲರಿಗೂ ತಿಳಿದೇ ಇದೆ. ನಾನು ಎಲ್ಲಾ ಸಹಕಾರ ಸಂಘಗಳೂ ಹೀಗೆ ಮಾಡುತ್ತವೆ ಎಂದು ಹೇಳುವುದಿಲ್ಲ. ಅನೇಕ ಸಹಕಾರ ಸಂಘಗಳು ಈ ಸಕ್ಕರೆ ಅಲಾಟ್‌ಮೆಂಟ್ ಅನ್ನು ಏನು ತೆಗೆದುಕೊಳ್ಳುತ್ತಾರೆ ಅವರು ನಗರದಲ್ಲೆ ಅಲ್ಲೇ ಮಾರಿಕೊಂಡು ಹೋಗುತ್ತಾರೆ. ಹಾಗಾಗಬಾರದು ನಾವಾಗಿಯೆ ಈ ದುರ್ವ್ಯವಹಾರದ ಅಭ್ಯಾಸ ಮಾಡಿಕೊಟ್ಟಂತಾಗುತ್ತದೆ. ದರದಲ್ಲಿ ಈ ರೀತಿ ವ್ಯತ್ಯಾಸ ಇರುವುದರಿಂದ ಆಸೆ ಇರತಕ್ಕಂಥಾ ಸಹಕಾರ ಸಂಘಗಳು ಇಂಥಾ ಕೆಲಸ ಮಾಡುತ್ತಾರೆ. ಈ ವ್ಯತ್ಯಾಸವನ್ನು ತಪ್ಪಿಸಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇವೆ.

ಇನ್ನು ನಮ್ಮ ಮಲೆನಾಡಿನ ಕಡೆ ಆಹಾರದ ವಿತರಣೆ ಬಗ್ಗೆ ಹೇಳುವುದಾದರೆ ಅಕ್ಕಿಯನು ವಿತರಣೆ ಮಾಡುತ್ತಾ ಇಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ಅಕ್ಕಿ ಬೆಳೆಯುವವರು ನೀವೇ ಆಗಿರುವುದರಿಂದ ನಿಮಗೆ ಕೊಡುವುದಕ್ಕಾಗುವುದಿಲ್ಲ ಎಂದು ಖಚಿತವಾದ ಅಭಿಪ್ರಾಯವನ್ನು ಹೇಳುತ್ತಿದ್ದಾರೆ ಈ ಅಭಿಪ್ರಾಯವನ್ನು ತಾವು ಇಟ್ಟುಕೊಳ್ಳಬಾರದು. ಕಾರಣ ಹೋದವರ್ಷ ಬೆಳೆ ಚೆನ್ನಾಗಿ ನಮ್ಮ ಕಡೆ ಆಗಲಿಲ್ಲ. ಮುಂದಿನ ಮಳೆಗಾಲದವರೆಗೂ ನಮಗೆ ಈ ಪರಿಸ್ಥಿತಿ ಇರುವುದರಿಂದ ತಾವು ನಮಗೆ ಸಹಕಾರ ಸಂಘಗಳ ಮೂಲಕ ಅಕ್ಕಿಯನ್ನು ವಿತರಣೆ ಮಾಡಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಅದೇನೆಂದರೆ ಹೋದ ವರ್ಷವೋ ಅಥವಾ ಹಿಂದಿನ ವರ್ಷವೋ ನಮ್ಮ ಊರಿನ ಅರಸಾಳು ಫಾರೆಸ್ಟ್‌ನಲ್ಲಿ 3—4 ಆನೆಗಳು ನುಗ್ಗಿಬಿಟ್ಟು 3—4 ಜನರು ಸತ್ತುಬಿಟ್ಟರು. ಅವರಿಗೆ ಪರಿಹಾರ ಈವೊತ್ತಿನವರೆಗೂ ಸಂದಾಯವಾಗಿಲ್ಲಾ. ನಾನು ಆ ಬಗ್ಗೆ ಪದೇ ಪದೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುತ್ತಿದ್ದೇನೆ. ಈ ಅರಸಾಳು ಫಾರೆಸ್ಟ್ ರೇಂಜ್ ಏನು ಇದೆ ಇದು ಅಂಥಾ ಅಭಯಾರಣ್ಯ ಪ್ರದೇಶವಲ್ಲ. ಈ ಊರಿನ ಕಾಡಿನಲ್ಲಿ ಆನೆಗಳು ನುಗ್ಗಿ ಅನೇಕ ಜನಗಳನ್ನು ಕೊಲ್ಲತಕ್ಕಂಥಾದ್ದು ಒಳ್ಳೆಯದಲ್ಲ, ಇದಕ್ಕೆ ತಾವು ಸೂಕ್ತ ರಕ್ಷಣೆ ಕೊಡಿಸಬೇಕು ಎಂದು ಅರಿಕೆ ಮಾಡಿಕೊಂಡು, ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಪೋರ್ಟ್).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಮುಂದೆ ಇಟ್ಟಿರತಕ್ಕಂಥಾ ಆಹಾರ ಮತ್ತು ಸಿವಿಲ್ ಸಪ್ಲೈಸ್ ಸಾಮಾನುಗಳ ಹಾಗೂ ಅನ್ಯ ವಿಚಾರದಲ್ಲಿ ಇಟ್ಟಿರತಕ್ಕಂಥಾ ಬೇಡಿಕೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ.

ಮೊಟ್ಟ ಮೊದಲನೆಯದಾಗಿ ನಿತ್ಯಬಳಕೆಯ ಸಾಮಾನುಗಳ ಬೆಲೆ ಬಹಳ ಜಾಸ್ತಿಯಾಗಿ ದಿನೇ ದಿನೇ ಏರತ್ತಾ ಇರತಕ್ಕಂಥಾದ್ದು ಸರ್ಕಾರ ಸಾಕಷ್ಟು ಗಮನಿಸುತಾ ಇಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅದರಲ್ಲೂ ಮುಖ್ಯವಾಗಿ ಕೆಲವು ತಿಂಗಳಿಂದ ಈಚೆಗೆ ಸಿಮೆಂಟ್‌ಗೆ ಅಭಾವ ಬಂದು ಸಾಮಾನ್ಯವಾಗಿ 29—30 ರೂಪಾಯಿ ಕೊಟ್ಟರೆ ಎಷ್ಟು ಬೇಕಾದರೂ ಸಿಮೆಂಟ್ ಸಿಕ್ಕುತ್ತಿತ್ತು. ಆದರೆ ನ್ಯಾಯವಾಗಿ ದೊರಕಬೇಕಾದಂಥಾ ಬೆಲೆಗೆ ಸಿಕ್ಕುತಾ ಇಲ್ಲ ಎನ್ನುವ ದೂರು ಇದೆ. ಅನೇಕ ಕಡೆಯಲಿ ಸಿಮೆಂಟ್ ಬಂದಿದ್ದರೂ ಕೂಡ ಡಿಪೋಗೆ ತರದೇ ರೈಲ್ವೇ ಸ್ಟೇಷನ್‌ನಲ್ಲೇ ಬೇರೆ ಕಡೆಗೆ ವಿಲೇವಾರಿ ಆಗುತ್ತಿತ್ತು ಅನ್ನುವ ದೂರು ಬಂದಿದೆ. ಇದರ ಬಗ್ಗೆ ಸರ್ಕಾರದವರು ತೀವ್ರ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದರೆ ನಾಗರೀಕರಿಗೆ ಇನ್ನೂ ಹೆಚ್ಚಿನ ತೊಂದರೆಯಾಗುತ್ತದೆ ಅನ್ನುವುದನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ಸರ್ಕಾರ ಅಕ್ಕಿ ವಿತರಣೆ ಮಾಡತಕ್ಕಂಥಾ ಅಕ್ಕಿಯನ್ನು ನೋಡಿದರೆ ಆದರ ಗುಣ ಮಟ್ಟ ಸಾಕಷ್ಟು ಕಡಿಮೆ ಇರುವುದರಿಂದ ಅನೇಕ ಜನರು ಆ ಅಕ್ಕಿಯನ್ನು ತೆಗೆದುಕೊಳ್ಳದೆ ಬರೇ ಸಕ್ಕರೆಯನ್ನು ಮಾತ್ರ ಆ ರೇಷನ್ ಕಾರ್ಡ್‌ನಲ್ಲಿ ತೆಗೆದುಕೊಳ್ಳುತ್ತಿದ್ದಾರೆ. ಆದುದರಿಂದ ನಾನು ಹೇಳುವುದು ರೇಷನ್ ಡಿಪೋಗೆ ಕೊಡುವ ಅಕ್ಕಿಯ ಗುಣಮಟ್ಟವನ್ನು ಆದಷ್ಟು ಉತ್ತಮ ಪಡಿಸದೇ ಇದ್ದ ಪಕ್ಷದಲ್ಲಿ ಜನಗಳಿಗೆ ಇನ್ನೂ ಹೆಚ್ಚಿನ ಅನಾನುಕೂಲವಾಗುತ್ತದೆ ಎಂದು ಹೇಳು ತ್ತೇನೆ. ಈಗ ಫೇರ್‌ಪ್ರೈಸ್‌ಗೆ ಏನು ಅಕ್ಕಿ ಕೊಡುತ್ತೀರೋ ಅದು ಹೆಚ್ಚಿನಮಟ್ಟಿಗೆ ಹೋಟೇಲ್‌ಗೆ ವಿತರಣೆಯಾಗುತ್ತಿದೆ, ನಾಗರಿಕರು ಅದರ ಗುಣಮಟ್ಟ ಕಡಿಮೆ ಇರುವುದರಿಂದ ಅದನ್ನು ತೆಗೆದು ಕೊಳ್ಳುತ್ತಾ ಇಲ್ಲ. ಆ ಅಕ್ಕಿಯ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಸಕ್ಕರೆ ವಿತರಣೆ ಬಗ್ಗೆ ಹೇಳುವುದಾದರೆ ಗುಡಿಸಲಿನಲ್ಲಿರತಕ್ಕಂಥಾವರು ಹೆಚ್ಚು ತೆಗೆದುಕೊಳ್ಳದೇ ಇರುವುದರಿಂದ ಅದನ್ನು ವರ್ತಕರು ಹೆಚ್ಚು ಮಟ್ಟಿಗೆ ದುರುಪಯೋಗಪಡಿಸಿಕೊಳ್ಳು ತ್ತಿದ್ದಾರೆ. ಅದನ್ನು ಬೇರೆ ಕಡೆ ಮಾರಿಕೊಳ್ಳುತ್ತಿದ್ದಾರೆ. ಕೆಲವು ಅಂಗಡಿಗಳಲ್ಲಿ ಹೊರಗಡೆ ಮಾರ್ಕೆಟ್‌ಗಿಂತ 50—60 ಪೈಸೇ ಕಡಿಮೆಗೆ ಸಿಕ್ಕುತ್ತವೆ. ಈ ಸಕ್ಕರೆ ಯಾವುದು ಎಂದರೆ ಗುಡಿ ಸಲುನವರು ತೆಗೆದುಕೊಳ್ಳದೇ ಇರತಕ್ಕಂಥಾ ಸಕ್ಕರೆ ಏನು ಇದೆ ಅದನ್ನು ಈ ಕಡಿಮೆ ಬೆಲೆಗೆ ಕೊಡುತ್ತಿದ್ದಾರೆ ಅಂತ ಹೇಳುತ್ತಾರೆ. ಆ ಬಗ್ಗೆ ತಾವು ತಕ್ಕ ಕಾರ್ಯಕ್ರಮ ತೆಗೆದುಕೊಂಡರೆ ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಬೋಗಸ್ ರೇಷನ್ ಕಾರ್ಡ್ ಬಗ್ಗೆ ಹೇಳುವುದಾದರೆ ಈಗ ಇದು ಸಾಕಷ್ಟು ಕಡಿಮೆ ಯಾಗಿದೆ. ಆದರೆ ಇದು ಕಡಿಮೆಯಾಗಿದೆ ಅಂದ ಮಾತ್ರಕ್ಕೆ ಇದರ ತನಿಖೆಯನ್ನು ಬಿಡಬಾರದು. ಈ ಬಗ್ಗೆ ಆಗಿಂದಾಗ್ಗೆ ತನಿಖೆ ನಡೆಸಿದರೆ ಉತ್ತಮವಾಗುತ್ತದೆ. ಈಗ ಅಕ್ಕಿ, ಗೋಧಿ ಸಾಕಾ ದಷ್ಟು ಸಿಕ್ಕುವುದರಿಂದ ಆದರ ಅಭಾವ ಈಗ ಗೊತ್ತಾಗುವುದಿಲ್ಲ. ಮುಂದೆ ಏನಾದರೂ ಇದರ ಅಭಾವ ಬಂದಾಗ ಈ ಬೋಗಸ್ ಕಾರ್ಡ್‌ನಿಂದ ಬಹಳ ತೊಂದರೆ ಯಾಗುತ್ತದೆ, ಆದುದರಿಂದ ಇದನ್ನು ಆಗಿಂದಾಗ್ಗೆ ತನಿಖೆ ಮಾಡಬೇಕು ಎಂದು ಹೇಳುತ್ತೇನೆ. ಹಿಂದೆ ಈ ಬಗ್ಗೆ ಒಂದು ಹೆಚ್ಚಿನ ರೀತಿಯಲ್ಲಿ ಪತ್ತೆ ಆಯಿತು. ಆದುದರಿಂದ ಈ ಬಗ್ಗೆ ಆಗಿಂದಾಗ್ಗೆ ತನಿಖೆ ನಡೆಸುವುದಕ್ಕೆ ಕಾರ್ಯ ಕ್ರಮ ತೆಗೆದುಕೊಂಡರೆ ಸ್ವಲ್ಪಮಟ್ಟಿಗೆ ಅನುಕೂಲವಾದೀತು ಎಂದು ಹೇಳುತ್ತೇನೆ.

ಇನ್ನು ಈಗ ಎಣ್ಣೆ ಮತ್ತು ಬೇಳೆ ವಿಚಾರದಲ್ಲಿ ಹೇಳುವುದಾದರೆ ಈ ಬೆಲೆಗಳು ಇಳಿಯುವ ಹಾಗೆ ಕಾಣುವುದಿಲ್ಲ. ಇದರ ಬೆಲೆ ಹೆಚ್ಚಾಗಿದೆ ಏತಕ್ಕೆಂದರೆ ಇದು ಹೊರಗಡೆಯಿಂದ ಬರತಕ್ಕಂಥಾ ವಸ್ತುವಾಗಿರುವುದರಿಂದ ಇದನ್ನು ಹೆಚ್ಚಿಗೆ ತರಿಸಿ ವಿತರಣೆ ಮಾಡಿದರೆ ಅನುಕೂಲವಾಗುತ್ತದೆ, ಇದನ್ನು ವಿಚಾರಣೆ ಮಾಡಬೇಕು. ಬೇಳೆ ಕೆ.ಜಿ.ಗೆ 4-4½ ರೂಪಾಯಿ ಆಗಿರುವುದರಿಂದ ಇದರ ಬೆಲೆ ಬಹಳ ದುಬಾರಿಯಾಗಿದೆ, ಇದನ್ನು ತಾವು ಯೋಚನೆ ಮಾಡಬೇಕು ಎಂದು ನಾನು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ಅರಣ್ಯ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ ಎಕಾನಾಮಿ ಸ್ಪೀಷಿಸ್ ಕಡಿಮೆಯಾಗಿದೆ ಅಂದರೆ ಹುಣಿಸೆಮರ ಹಿಪ್ಪೆಮರ ಮತ್ತು ಹೊಂಗೆ ಮರಗಳು ದಿನೇ ದಿನೇ ಅದರ ಬೆಳವಣಿಗೆ ಕಡಿಮೆಯಾಗಿದೆ. ಆದುದರಿಂದ ಈ ಮರಗಳನ್ನು ಹೆಚ್ಚು ಬೆಳಸದೇ ಹೋದರೆ ಜನಸಾಮಾನ್ಯರಿಗೆ ಮುಂದೆ ಇದರಿಂದ ಅಭಾವ ಪರಿಸ್ಥಿತಿ ಬಂದು ಬಹಳ ತೊಂದರೆಗೆ ಈಡಾಗಬೇಕಾಗುತ್ತದೆ. ಅದ ರಿಂದ ಈ ಬಗ್ಗೆ ಹೆಚ್ಚು ಮರಗಳನ್ನು ಬೆಳೆಸುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಂಡರೆ ಒಳ್ಳೆಯದು ಎಂದು ಹೇಳುತ್ತೇನೆ,

ಇನ್ನು ಬೆಂಗಳೂರು ಸುತ್ತಮುತ್ತಲೂ ಕೂಡ ಒಂದು ಗ್ರೀನ್‌ಬೆಲ್ಟ್ ಮಾಡುವ ಕಾರ್ಯ ಕ್ರಮವನ್ನು ಮೊದಲು ಹಾಕಿಕೊಂಡಿತ್ತು. ಆದರೆ ಈಗ ಅದು ಸ್ವಲ್ಪ ಮಟ್ಟಿಗೆ ಸ್ಥಗಿತಕೊಂಡಿರು ವಂತೆ ಕಾಣುತ್ತದೆ. ಆದುದರಿಂದ ಈಗಲಾದರೂ ಈ ಕಾರ್ಯಕ್ರಮವನ್ನು ಸಾಧ್ಯವಾದಷ್ಟು ಬೇಗ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಮತ್ತು ಹತ್ತಿರ ಹತ್ತಿರ ಇರುದಂಥಾ ಮುಖ್ಯ ಮುಖ್ಯ ಪಟ್ಟಣ ಗಳಲ್ಲಿ ಈ ಗ್ರೀನ್ ಬೆಲ್ಟ್ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈಗ ತಮಗೆ ಹೇಳಬೇಕಾದರೆ ಬೆಂಗಳೂರಿನಲ್ಲಿ ಗ್ರೀನ್‌ಬೆಲ್ಟ್ ಮಾಡಬೇಕಾದರೆ ಇದಕ್ಕೆ ಬೇಕಾದ

ಜಮೀನನ್ನು ಪೂರೈಸುವ ಹಾಗೆ ಸರ್ಕಾರದ ವಶದಲ್ಲಿರತಕ್ಕಂಥಾ ಜಮೀನನ್ನಾಗಲಿ ಅಥವಾ ಎಲ್ಲಿ ಜಮೀನು ಸಿಗುತ್ತದೋ ಅಲ್ಲಿ ತೆಗೆದುಕೊಂಡು ಗ್ರೀನ್‌ಬೆಲ್ಟ್ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ.

5—00 ಪಿ. ಎಂ.

ಅಧ್ಯಕ್ಷರು.—ಅಧ್ಯಕ್ಷ (ಪೀಠವನ್ನಲಂಕರಿಸಿದರು.)

ಸಧ್ಯದಲ್ಲಿ ಈಗ ಸೌದೆಗೆ ಅಭಾವ ಕಾಣುತ್ತಿಲ. ಕಾರಣ ಏನೆಂದರೆ ಬೆಂಗಳೂರಿನಲ್ಲಿ ಬಹಳ ಜನ ಸೀಮೆಎಣ್ಣೆ, ಗ್ಯಾಸ್ ಮುಂತಾದುವುಗಳನ್ನು ಅಡಿಗೆ ಇತ್ಯಾದಿಗಳಿಗೆ ಉಪಯೋಗಿಸುತ್ತಿದ್ದಾರೆ. ಆದರೆ ಹಳ್ಳಿಗಳ ಕಡೆ ಸ್ವಲ್ಪ ಮಾತ್ರ ಸೌದೆಗೆ ಅಭಾವ ಕಾಣುತ್ತಿದೆ. ಆದುದರಿಂದ ತಾವು ಈಗಲಾದರೂ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಮುಂದೆ ಸೌದೆಗೆ ಅಭಾವ ಬಂದು, ಬೆಲೆ ಜಾಸ್ತಿಯಾಗಿ, ಜನಸಾಮಾನ್ಯರಿಗೆ ಬಹಳ ತೊಂದರೆಯಾಗುತ್ತದೆ. ಇಷ್ಟೇ ಅಲ್ಲದೆ ಯಾವು ಯಾವುದಕ್ಕೆ ಯಾವ ಯಾವ ಮರಗಳನ್ನು ಬಳಸಬೇಕು ಎಂಬುದನ್ನೂ ಕೂಡ ಯೋಚನೆ ಮಾಡಬೇಕಾಗುತ್ತದೆ.

ಇನ್ನೊಂದು ವಿಚಾರ ಎಂದರೆ ಗೇರು ಹಣ್ಣಿನ ಅಭಾವ. ನಮ್ಮಲಿ ಇದು ಯಥೇಚ್ಛವಾಗಿ ಬೆಳೆಯುತ್ತಿದ್ದರೂ ಇದರ ಬೆಲೆ ಮಾತ್ರ ಜಾಸ್ತಿಯಾಗುವುದಕ್ಕೆ ಕಾರಣ ಏನು ಎಂಬುದನ್ನೂ ಯೋಚನೆ ಮಾಡಬೇಕು. ಇದು ಫಾರಿನ್‌ಗೆ ಹೋಗುತ್ತಿರುವುದರಿಂದ ನಮಗೆ ಜಾಸ್ತಿ ಲಾಭ ಸಿಕ್ಕುತ್ತಿದೆ, ಆದುದರಿಂದ ಬಹುಶಃ ಇದಕ್ಕೆ ಇಲ್ಲಿ ಹೆಚ್ಚು ಬೆಲೆ ಇರಬಹುದುದೆಂದು ನಾವು ಭಾವಿಸಬಹುದು.

ಇನ್ನು ಕೊನೆಯದಾಗಿ ಹೇಳುವುದಾದರೆ ಆಹಾರ ಮತ್ತು ಅರಣ್ಯ ಇಲಾಖೆಗಳಲ್ಲಿ ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿ, ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಸಭಾಧ್ಯಕ್ಷರೆ, ಇದುವರೆಗೂ ನಮ್ಮ ಮಲೆನಾಡಿನ ಬಗ್ಗೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಕಾಗೋಡು ತಿಮ್ಮಪ್ಪನವರೂ, ಶ್ರೀಮಾನ್ ಶೀರಾಳಿ ಚಂದ್ರಶೇಕರ್‌ರವರೂ, ಶ್ರೀಮಾನ್ ಬಂಗಾರಪ್ಪನವರೂ ಏನೇನು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ ಅದೆಲ್ಲವನ್ನೂ ಸಂಪೂರ್ಣವಾಗಿ ಸಮರ್ಥಿಸಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ.

ಮುಖ್ಯವಾಗಿ ಒಂದು ಮಾತು ಹೇಳುವುದಾದರೆ, ಅನ್ ಅಥರೈಸ್ಡ್ ಕಲ್ಟಿವೇಷನ್ ಎಂಬ ಶಬ್ದದ ಹಿನ್ನೆಲೆಯಲ್ಲಿ ಬಡವರನ್ನು ಜಮೀನಿನಿಂದ ಹೊರದೂಡಬೇಡಿ. ಯಾರಿಗೆ ಸ್ವಂತವಾಗಿ ಸಾಕಷ್ಟು ಭೂಮಿ ಇದೆ, ಅದರ ಜೊತೆಗೆ ಅಕ್ರಮವಾಗಿ ಇನ್ನೂ ಹೆಚ್ಚು ಜಮೀನನ್ನು ಸಾಗುವಳಿ ಮಾಡಿದ್ದಾರೆ, ಅಂಥವರನ್ನು ಅವರ ಜಮೀನುಗಳಿಂದ ತೆರವು ಮಾಡಿಸಿ. ಆದರೆ ಯಾರು ಕೇವಲ 2-3 ಎಕರೆಗಳಷ್ಟು ಜಮೀನನ್ನು ಇಟ್ಟುಕೊಂಡಿದ್ದಾರೆ, ಹತ್ತಾರು ವರ್ಷಗಳಿಂದ ಆ ಜಮೀನಿನಲ್ಲಿ ಸಾಗುವಳಿ ಮಾಡಿಕೊಂಡು ಬಂದಿದ್ದಾರೆ ಅಂಥ ಬಡವರಿಗೆ ಆ ಜಮೀನುಗಳ ಸಾಗುವಳಿ ಚೀಟಿಯನ್ನು ಕೊಡಿ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಶಾಮಣ್ಣನವರು ಒಂದು ಮಾತನ್ನು ಹೇಳಿದರು ಅದು ಏನೆಂದರೆ ಕಾಡನ್ನು ಉಳಿಸುತ್ತಿದ್ದಾರೆ ಎಂದು, ಆದರೆ ಇವತ್ತು ಆ ಕಾಡನ್ನು ಅಳಿಸುತ್ತಿದ್ದಾರೆಂದು ನಾನು ಬಹಳ ಹಿಂದೆಯೇ ಹೇಳಿದ್ದೇನೆ. ಇರುವ ಕಾಡನ್ನು ಕಡಿದು ಎಲ್ಲಾ ಬಯಲು ಮಾಡಬೇಕೆಂದು ಯಾರು ಹೇಳುವುದಿಲ್ಲ, ನಮ್ಮ ಮಾನ್ಯ ಶೀರಾಳಿ ಚಂದ್ರಶೇಖರ್‌ರವರ ಊರಿಗೆ 8 ಮೈಲಿ ದೂರದಲ್ಲಿ ಕುಂಡುಗೋಡು ಎಂಬಲ್ಲಿ ಬೋಳಿ ಗುಡ್ಡಗಳು ಎಂದು ಇವೆ. ಅಲ್ಲಿ ಗೇರು, ತೇಗ, ಹೊನ್ನೆ ಮುಂತಾದ ಉಪಯುಕ್ತ ಮರಗಳನ್ನು ಬೆಳೆಸುವುದಕ್ಕೆ ಅವಕಾಶ ಇದೆ. ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಮತ್ತು ಫಾರೆಸ್ಟ್ ಡಿಪಾರ್ಟ್‌ಮೆಂಟ್ ಈ ಎರಡೂ ಡಿಪಾರ್ಟ್‌ಮೆಂಟ್‌ಗಳೂ ಒಂದೇ ಆಡಳಿತದಲ್ಲಿ ಬಂದರೆ ಆಗ ಸಮಗ್ರವಾದ ಕೆಲಸ ಕಾರ್ಯಗಳನ್ನು ಮಾಡುವುದಕ್ಕಾಗುತ್ತದೆ ಎಂಬುದನ್ನು ಹೇಳಬಯಸುತ್ತೇನೆ ಮುಖ್ಯವಾಗಿ ಗೇರು ಬೆಳೆಯುವುದರ ಬಗ್ಗೆ ಹೇಳುವುದಾದರೆ ಮಲೆನಾಡಿನ ಬೋಳು ಗುಡ್ಡಗಳಲ್ಲಿ ಈ ಮರಗಳನ್ನು ಬೆಳೆದರೆ ಸರ್ಕಾರಕ್ಕೆ ಆದಾಯ ಬರುವುದರ ಜೊತೆಗೆ, ಈಗ ರಾಜ್ಯದಲ್ಲಿ ತುಂಬಿರುವ ನಿರುದ್ಯೋಗ ಸಮಸ್ಯೆಯನ್ನೂ ಕೂಡ ಪರಿಹಾರ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಸನ್ಮಾನ್ಯ ಅಧ್ಯಕ್ಷರೆ, ವೈಲ್ಡ್ ಲೈಫ್ ಪ್ರೊಟೆಕ್ಷನ್ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಕಡೆ ಕೆಲವು ಹುಚ್ಚು ಆನೆಗಳು ಬಂದಿವೆ. ಮೊನ್ನೆ ಅವುಗಳ ಹಾವಳಿಗೆ ಸಿಕ್ಕಿ ಅರಸಾಲ್ ಎನ್ನುವ ಊರಿನಲ್ಲಿ ೪ ಜನ ಸತ್ತಿದ್ದಾರೆ. ಅವರಿಗೆ ಇನ್ನೂ ಕೂಡ ಪರಿಹಾರ ಸಿಕ್ಕಿಲ್ಲ. ಅವು ನಮ್ಮ ಭಾಗದ ಊರುಗಳಲ್ಲಿ ರೈತರು ಬೆಳೆದ ಕಬ್ಬಿನ ಗದ್ದೆ, ಬಾಳೆತೋಟ ಮುಂತಾದುಗಳಿಗೆ ನುಗ್ಗಿ ಅದನ್ನೆಲ್ಲಾ ತುಳಿದು, ಮುರಿದು ಹಾಕಿವೆ; ಅಲ್ಲದೆ ಅಲ್ಲಿನ ಜನಗಳಿಗೂ ಕೂಡ ಬಹಳ ತೊಂದರೆ ಮಾಡುತ್ತಿವೆ. ಇದರಿಂದ ಸುಮಾರು ೩೦೦ ಜನಗಳಿಗಿಂತಲೂ ಹೆಚ್ಚಾಗಿ ಪ್ರತಿಸಾರಿ ತೊಂದರೆಯಾಗುತ್ತಿದೆ. ಆದುದರಿಂದ ಈ ಜನಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದಕ್ಕೋಸ್ಕರ ಆ ಹುಚ್ಚು ಆನೆಗಳನ್ನು ಹಿಡಿಯುವುದಕ್ಕೆ ವ್ಯವಸ್ಥೆ ಮಾಡಬೇಕು.

ಸ್ವಾಮಿ, ಮಾನ್ಯ ಅಧ್ಯಕ್ಷರೇ, ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ನಮ್ಮ ಕಡೆ ಇಲಿಗಳು ಗದ್ದೆಗಳಲ್ಲಿ ಸುಮಾರು ೩ ಸಾವಿರ ಟನ್‌ಗಳಷ್ಟು ಭತ್ತವನ್ನು ಪ್ರತಿವರ್ಷ ತಿನ್ನುತ್ತವೆ. ಅಂಥ ಇಲಿಗಳನ್ನೇ ಹಿಡಿಯುವುದಕ್ಕೆ ಸಾಧ್ಯವಿಲ್ಲದ ಇವರು ಇನ್ನು ಈ ಹುಚ್ಚು ಆನೆಗಳನ್ನು ಹಿಡಿಯುತ್ತಾರೆಯೋ ಎಂದು ತಮ್ಮನ್ನು ಕೇಳಬಯಸುತ್ತೇನೆ. ಖಂಡಿತವಾಗಿಯೂ ಇವರಿಂದ ಆ ಆನೆಗಳನ್ನು ಹಿಡಿಯುವುದಕ್ಕೆ ಸಾಧ್ಯವಿಲ್ಲವೆಂದು ಹೇಳಬಯಸುತ್ತೇನೆ. ಹೋಗಲಿ ಅವುಗಳನ್ನು ಹಿಡಿಯುವುದಕ್ಕೆ ಸಾಧ್ಯವಾಗದೇ ಹೋದರೆ ಗುಂಡಿಟ್ಟಾದರೂ ಅವುಗಳನ್ನು ಕೊಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾನು ತಮ್ಮಲ್ಲಿ ಈ ಮಾತನ್ನು ನಿರ್ವಿಕಾರದ ದೃಷ್ಟಿಯಿಂದ ಹೇಳುತ್ತಿದ್ದೇನೆ.

ಸ್ವಾಮಿ, ಇನ್ನೊಂದು ವಿಚಾರ ಹೇಳಬೇಕಾದರೆ ನಮ್ಮಲ್ಲಿ ಕಾಳಿ ಮತ್ತು ವಾರಾಹಿ ಪ್ರಾಜೆಕ್ಟ್‌ಗಳ ಕೆಳಗೆ ಬಹಳಷ್ಟು ಜಮೀನು ಅನಾವಶ್ಯಕವಾಗಿ ಮುಳುಗಡೆಯಾಗುತ್ತಿದೆ. ಆ ಮುಳುಗಡೆಯಾಗುವ ಪ್ರದೇಶದಲ್ಲಿರತಕ್ಕ ಮರಗಿಡಗಳನ್ನು ಕಡಿದು ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಯಾರು ಯಾರಿಗೆ ಮನೆಗಳಿಲ್ಲ ಅಂಥವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಮಾನುಗಳನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ಅದನ್ನಾದರೂ ಮಾಡಿದರೆ ಅದರಿಂದ ಆ ಜನಗಳಿಗೆ ಅನುಕೂಲವಾಗುವುದರ ಜೊತೆಗೆ ನಿರುದ್ಯೋಗಿಗಳಿಗೆ ಕೆಲಸವೂ ಕೂಡ ಸಿಕ್ಕಂತಾಗುತ್ತದೆ. ವಾರಾಹಿ ಪ್ರಾಜೆಕ್ಟ್ ಕೆಳಗೆ ಮುಳುಗಡೆಯಾಗುವ ಪ್ರದೇಶದಿಂದ ನಮ್ಮ ಸರ್ಕಾರಕ್ಕೆ ಸುಮಾರು ೨ ಕೋಟಿ ರೂಪಾಯಿಗಳಷ್ಟು ವರಮಾನ ಬರತ್ತದೆಂದು ತಜ್ಞರು ಹೇಳುತ್ತಾರೆ. ಇಂಥ ಕೆಲಸವನ್ನು ನಮ್ಮ ಸರ್ಕಾರದವರೇ ಮಾಡುವುದನ್ನು ಬಿಟ್ಟು ಕಂಟ್ರಾಕ್ಟರ್‌ಗಳಿಗೆ ಆ ಕೆಲಸ ವಹಿಸಿ ಮರಗಳನ್ನು ಕಡಿಸುತ್ತಿದ್ದಾರೆ. ಅವರಿಗೆ ಕೊಟ್ಟರೆ ಏನಾಗುತ್ತದೆ ಎಂಬುದು ತಮಗೇ ಗೊತ್ತಿದೆ. ಇದು ಹೇಗಿದೆ ಎಂದರೆ ''ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ'' ಎನ್ನುವಂತಾಗಿದೆ. ಆದುದರಿಂದ ನಾನು ಹೇಳುವುದೇನೆಂದರೆ ಆ ಮರಗಳನ್ನು ಕಡಿಯುವುದನ್ನು ಕಂಟ್ರಾಕ್ಟರ್‌ಗಳಿಗೆ ಕೊಡದೇ ತಾವೇ ಕಡಿಸಿದರೆ ನಮ್ಮ ಸರ್ಕಾರಕ್ಕೆ ಆದಾಯವಾಗುತ್ತದೆ. ಇವತ್ತು ಶಿವಮೊಗ್ಗದಲ್ಲಿ ಮ್ಯಾಚ್ ಫ್ಯಾಕ್ಟರಿ ಇದೆ ಅವರಿಗೆ ಬೇಕಾದ ಮರಗಳನ್ನು ಕೊಡಿ, ಪ್ಲೈವುಡ್ ಫ್ಯಾಕ್ಟರಿ ಇದೆ ಅವರಿಗೆ ಎಂಥ ಮರಗಳು ಬೇಕೋ ಅಂಥವನ್ನು ಕೊಡಿ. ಆರಣ್ಯ ಪ್ರದೇಶದಲ್ಲಿ ಜಮೀನು ಮುಳುಗಡೆ ಆದರೆ ಬರೀ ಮರಗಿಡಗಳೇ ಮುಳುಗಡೆಯಾಗುವುದಿಲ್ಲ. ಅಲ್ಲಿ ವಾಸ ಮಾಡುವ ಜನರೂ ನಿರ್ವಸಿತರಾಗುತ್ತಾರೆ. ಅಂಥವರಿಗೆ ಅರಣ್ಯಪ್ರದೇಶದಲ್ಲಿ ಇರುವುದಕ್ಕೆ ಜಾಗವನ್ನು ಕೊಡಬೇಕು. ಅವರು ತಮ್ಮ ಬದುಕನ್ನು ಹಸನು ಮಾಡಿಕೊಳ್ಳುವುದಕ್ಕೆ, ಅವರು ಉತ್ತಮವಾದ ಜೀವನವನ್ನು ನಡೆಸುವುದಕ್ಕೆ ಜಮೀನು ಕೊಟ್ಟು ಅವಕಾಶ ಮಾಡಿಕೊಡಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಆ ಜನಗಳು ನಮಗೋಸ್ಕರ ತಮ್ಮನ್ನು ತಾವು ಅರ್ಪಣೆ ಮಾಡಿಕೊಳ್ಳುತ್ತಿದ್ದಾರೆ. ಅಂಥವರಿಗೆ ತಾವು ಯಾವ ಕಾನೂನುಗಳನ್ನಾಗಲಿ, ವಿಧಿ ನಿಯಮಗಳನ್ನಾಗಲಿ ಹಾಕದೆ, ಅವರ ಬಗ್ಗೆ ಮಾನವೀಯತೆಯಿಂದ ನಡೆದುಕೊಳ್ಳಬೇಕು. ಅದು ಬಿಟ್ಟು ಅವರ ವಿಷಯದಲ್ಲಿ ತಾವು ದುರ್ಯೋಧನತನವನ್ನು ತಾಳಿ ನಿಮಗೆ ಒಂದು ಇಂಚು ಜಾಗವನ್ನೂ ಬಿಟ್ಟು ಕೊಡುವುದಿಲ್ಲ ಎಂದು ಹೇಳುವುದಕ್ಕೆ ಹೋಗಬಾರದು. ಏತಕ್ಕೆಂದರೆ ಹಿಂದೆ ತಾವು ಆ ರೀತಿ ಹೇಳುತ್ತಿದ್ದೀರಿ.

ಆದುದರಿಂದ ನೆಲದ ಆಸೆ ಬಹಳವಾಗಿ ಇರತಕ್ಕಂಥ ದುರ್ಯೋಧನನ ದೃಷ್ಟಿ ಬೇಡ ಮಾನವೀಯತೆಯ ದೃಷ್ಟಿಯಿಂದ ಮುಳುಗಡೆಯಾಗಿರತಕ್ಕಂಥ ಪ್ರದೇಶದ ಜನರಿಗೆ ಪುನರ್ ವ್ಯವಸ್ಥೆಯನ್ನು ಮಾಡತಕ್ಕ ಕಾರ್ಯ ಆಗಬೇಕಾಗಿರುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಕರ್ನಾಟಕ ಸ್ಟೇಟ್ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೋರೇಷನ್ ಎಂದು ಒಂದು ಸಂಸ್ಥೆ ಇದೆ, ಅದು ಬದುಕಿದಿಯೋ ಇಲ್ಲವೋ ನನಗಂತೂ ಗೊತ್ತಿಲ್ಲ ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ಇಂಥ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೋರೇಷನ್ ಚೆನ್ನಾಗಿ ಕೆಲಸ ಮಾಡುವುದು ಬಹಳ ಅವಶ್ಯಕತೆ ಇರುತ್ತದೆ. ಏತಕ್ಕೆಂದರೆ ಇದರಿಂದ ನೂರಾರು ಜನರಿಗೆ ಕೆಲಸ ಸಿಗುತ್ತದೆ. ಅಲ್ಲದೆ ಇದರಿಂದ ನಾನಾ ರೀತಿಯ ಕೈಗಾರಿಕೆಗಳನ್ನು ಪ್ರಾರಂಭಮಾಡಿ ಹಳ್ಳಿಗಳಲ್ಲಿಯ ಅನೇಕ ಸಮಸ್ಯೆಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಯೋಜನವಾಗುತ್ತದೆ ಆದರೆ ಈ ಕಾರ್ಪೋರೇಷನ್‌ನಿಂದ ಏನು ಆಗಬೇಕಾಗಿತ್ತೋ ಅದು ಆಗುತ್ತಿಲ್ಲ. ಆದ್ದರಿಂದ ಇದಕ್ಕೆ ಕಾಯಕಲ್ಪ ಮಾಡಿದರೆ ಒಳ್ಳೆಯದು. ಆಗ ಇದು ಚೆನ್ನಾಗಿ ಕೆಲಸ ಮಾಡುತ್ತದೆಂದು ಹೇಳುತ್ತೇನೆ.

ಕೊನೆಯದಾಗಿ ಫುಡ್ ಇಲಾಖೆ ಎಂದು ಏನು ಇದೆ ಅದರ ಬಗ್ಗೆ ಹೇಳುವುದಾದರೆ ಈವತ್ತು ಸರ್ಕಾರದವರು ನಾವು ಬಡವರ ಉದ್ಧಾರಕರು ಎಂದು ಹೇಳಿಕೊಂಡು ಕೈಸಾಲ, ಕಣಿಸಾಲ, ಕಿವಿಸಾಲ ಎಂದು ಎಲ್ಲ ವಿಧವಾದ ಸಾಲವನ್ನು ಕೊಡುತ್ತೇವೆ, ನಿಮಗೆ ಎಲ್ಲ ಅನುಕೂಲವನ್ನು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ರೈತನು ಬೆಳೆದಂಥ ಬೆಳೆ ಏನು ಇದೆ ಅದಕ್ಕೆ ತಕ್ಕ ಬೆಲೆ ಕೊಡುವುದಕ್ಕೆ ಸರ್ಕಾರದವರಿಗೆ ಸಾಧ್ಯವಾಗುತ್ತಿಲ್ಲ ಇವತ್ತು ರೈತರು ಒಂದು ಎಕರೆ ಜಮೀನಿನಲ್ಲಿ ಆರು ಕ್ವಿಂಟಾಲ್‌ಗಿಂತ ಹೆಚ್ಚು ದವಸ ಧಾನ್ಯಗಳನ್ನು ಬೆಳೆಯುವುದಕ್ಕೆ ಆಗುವುದಿಲ್ಲ. ನಿಮ್ಮ ರೇಟಿನ ಪ್ರಕಾರ ಹೇಳುವುದಾದರೆ ಇದರ ಬೆಲೆ ೫೦೦ ರೂಪಾಯಿಗಳು ಆಗುತ್ತದೆ. ಆದರೆ ರೈತನು ಒಂದು ಎಕರೆಗೆ ಆರುನೂರು ರೂಪಾಯಿಗಳನ್ನು ಹಿಡಿದು ಏಳುನೂರು ರೂಪಾಯಿಗಳ ವರೆಗೂ ಬೇಸಾಯಕ್ಕಾಗಿ ಖರ್ಚು ಮಾಡಬೇಕಾಗಿರುತ್ತದೆ. ಬಿತ್ತನೆ, ಗೊಬ್ಬರ, ವ್ಯವಸಾಯ ಇವುಗಳಿಗೆ ಎಷ್ಟು ಬಂಡವಾಳವನ್ನು ಪ್ರತಿವರ್ಷ ಹಾಕಬೇಕಾಗಿರುತ್ತದೆ ಇದನ್ನೆಲ್ಲಾ ಯೋಚಿಸಿ ಅದಕ್ಕೆ ತಕ್ಕಂತೆ ಬೆಲೆಯನ್ನು ನಿಗದಿಪಡಿಸಬೇಕಾಗಿರುತ್ತದೆ. ಏತಕ್ಕೆಂದರೆ ಈವತ್ತು ತಮ್ಮ ಕೈಗಾರಿಕೆಗಳಲ್ಲಿ ಏನು ಉದ್ಪಾದನೆಯನ್ನು ಮಾಡುತ್ತೀರಿ, ಅಲ್ಲಿ ಉತ್ಪಾದನೆಯಾಗತಕ್ಕಂಥ ಸಾಮಾನುಗಳ ಬೆಲೆಗೂ ರೈತನು ಬೆಳೆದಂಥ ಬೆಳೆಗೂ ಸಮತೋಲನವಾಗಿರಬೇಕು. ಆದರೆ ಕೈಗಾರಿಕೆಗಳಲ್ಲಿ ಉತ್ಪಾದನೆ ಮಾಡತಕ್ಕ ವಸ್ತುಗಳ ಬೆಲೆ ಗಗನಕ್ಕೆ ಮುಟ್ಟಿದೆ. ಇದರಿಂದ ಒಂದು ರೀತಿಯಾದ ಪಕ್ಷಪಾತ ಮಾಡುತ್ತಾಗುತ್ತದೆ. ಈ ದೃಷ್ಟಿಯಿಂದ ರೈತನು ಬೆಳೆದಂಥ ಬೆಳೆಗೆ ಕ್ವಿಂಟಾಲಿಗೆ ೧೦೦ ರೂಪಾಯಿನಂತೆ ಯಾದರೂ ಬೆಲೆಯನ್ನು ಕೊಟ್ಟು ಸಹಕರಿಸಬೇಕು. ನಾಳೆ ದಿವಸ ನಮ್ಮ ಜೊತೆಯಲ್ಲಿ ನೀವು ಕೂಡ ಓಟನ್ನು ಕೇಳುವುದಕ್ಕೆ ಬರಬೇಕಾಗಿರುತ್ತದೆ. ಕೇಂದ್ರ ಸರ್ಕಾರವನ್ನು ದುಡ್ಡುಕೊಡಿ ಎಂದು ಒತ್ತಾಯ ಮಾಡಬೇಕು. ಇದರ ಬಗ್ಗೆ ಯಾವ ಒಂದು ದಾಕ್ಷಿಣ್ಯವೂ ತೋರುವುದು ಬೇಡವೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ರಂಗನಾಥ್.—ನಿಮ್ಮ ಒತ್ತಾಯದಿಂದ ಬೆಲೆಯನ್ನು ಇಳಿಸುತ್ತಾ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ತಮ್ಮ ಕಾಲ ಪ್ರಾರಂಭವಾಗಿ ಮೂವತ್ತು ವರ್ಷಗಳಾಯಿತು. ಈ ಮೂವತ್ತು ವರ್ಷಗಳ ಕೊಳೆಯನ್ನು ತೊಳೆಯಬೇಕಾಗಿರುತ್ತದೆ. ನಮ್ಮ ಅಧಿಕಾರಬಂದು ೭೦ ದಿವಸಗಳು ಆಗಿಲ್ಲ. ಈ ೩೦ ವರ್ಷ ಹೊರೆಯನ್ನು ಇಳಿಸಬೇಕಾದರೆ ನಮಗೆ ಸ್ವಲ್ಪ ಕಾಲವಕಾಶಬೇಕಾಗುತ್ತದೆ ಎನ್ನುವುದು ಜನರಿಗೂ ತಿಳಿದ ವಿಷಯವಾಗಿದೆ. ಈಗಾಗಲೇ ರೇಡಿಯೋ ವರದಿ ಪ್ರಕಾರ ಎಣಿಕೆಯಾಗಿರುವ ೭೪ ವಿಧಾನಸಭಾ ಸ್ಥಾನಗಳಿಗೆ ೫೩ ಸ್ಥಾನ ಜನತಾಪಕ್ಷಕ್ಕೆ ಬಂದಿದೆ. ಆದುದರಿಂದ ರೈತರು ಬೆಳೆಯತಕ್ಕಂಥ ಬೆಳೆ ಏನು ಇದೆ. ಅದಕ್ಕೆ ಸರಿಯಾದ ಬೆಲೆ ನಿಗದಿಪಡಿಸಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ನಮ್ಮ ಪಕ್ಷದ ಮಂತ್ರಿಗಳವರಿಗೆ, ಅವರು ಕೇಂದ್ರದವರೇ ಇರಲಿ, ಅಥವಾ ರಾಜ್ಯದವರೇ ಇರಲಿ ಯಾರೇ ಬಂದರೂ ಅವರಿಗೆ ಕಾಡನ್ನು ಕಡಿದು ತೋರಣಗಳನ್ನು ಕಟ್ಟುವುದು ಬೇಡವೆಂದು ಹೇಳುತ್ತೇನೆ. ಕಾಡನ್ನು ಕಡಿದು ಊರನ್ನು ಶೃಂಗಾರ ಮಾಡುವುದು ಬೇಡ.

ಮಾನ್ಯ ಅಧ್ಯಕ್ಷರೆ ಚುನಾವಣೆಯ ಸಮಯದಲ್ಲಿ ಶಿವಮೊಗ್ಗಕ್ಕೆ ಶ್ರೀಮಂತಿ ಇಂದಿರಾಗಾಂಧಿಯವರು ಬಂದಿದ್ದಾಗ್ಗೆ ಅಲ್ಲಿ ದೊರೆಯತಕ್ಕ ಎಲ್ಲ ನಾಟಗಳನ್ನು ಕಡಿದು ಊರ ಊರ ಬೇಲಿಯನ್ನೆಲ್ಲ ಕಡಿದುತಂದು ತಳಿರುತೋರಣಗಳನ್ನು ಕಟ್ಟಿ ಮೆರವಣಿಗೆಯನ್ನು ಮಾಡಿದರು. ಆದ್ದರಿಂದ ಇನ್ನು ಮುಂದೆ ಈ ರೀತಿಯಾಗಿ ಮಾಡಬೇಕಾದ ಅವಶ್ಯಕತೆ ಇರುವುದಿಲ್ಲ ಹಳ್ಳಿಗಳಲ್ಲಿರುವ ರೈತರು ಏನು ಇದ್ದಾರೆ ಅವರಿಗೆ ಕಾಡಿನಿಂದ ಒಂದು ಗೂಟಕ್ಕೆ ಮರವನ್ನು ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ತಾವು ವಿಚಾರ ಮಾಡಬೇಕೆಂದು ಹೇಳುತ್ತೇನೆ. ರೈತರ ನಿಜವಾದ ನೋವು ಏನು ಇದೆ ಅದನ್ನು ಅರ್ಥಮಾಡಿಕೊಳ್ಳಬೇಕು. ಒಂದು ವಿಪರ್ಯಾಸ ನಡೆಯುತ್ತಿರುವುದೇನೆಂದರೆ ಬಡವರಿಗೆ ಉಪಕಾರ ಮಾಡುತ್ತೇವೆಂದು, ಅವರ ಹೆಸರನ್ನು

ಹೇಳಿಕೊಂಡು ದೊಡ್ಡವರಿಗೆ ಅನುಕೂಲ ಮಾಡಿಕೊಡುವ ಕೆಲಸ ನಡೆಯುತ್ತಿದೆ. ಸರ್ಕಾರಕ್ಕೆ ಈವತ್ತು ಏನಾದರೂ ಚಾತಿ ಇದ್ದರೆ, ಧೈರ್ಯವಿದ್ದರೆ, ರಕ್ತ ಇದ್ದರೆ, ಬಡವರ ಬಗ್ಗೆ ಪ್ರಾಮಾಣಿಕವಾಗಿ ಕಳಕಳಿ ಇದ್ದರೆ, ಶ್ರೀಮಂತರು ದೊಡ್ಡ ದೊಡ್ಡ ಜಮೀನುದಾರರು ಯಾರು ಯಾರು ಅಕ್ರಮವಾಗಿ ಅರಣ್ಯ ಪ್ರದೇಶಗಳನ್ನು ಆಕ್ರಮಿಸಿಕೊಂಡು ಸಾಗುವಳಿ ಮಾಡುತ್ತಿದ್ದಾರೆ ಅವರನ್ನು ತೆರವುಮಾಡಿ ಭೂಮಿಯಿಲ್ಲದ ಬಡ ರೈತರಿಗೆ, ಹಿಂದಿನಿಂದಲೂ ವ್ಯವಸಾಯವನ್ನು ಮಾಡಿಕೊಂಡು ಬಂದಿರತಕ್ಕ ರೈತರಿಗೆ ಆ ಭೂಮಿಗಳನ್ನು ಹಂಚಬೇಕೆಂದು ಹೇಳುತ್ತೇನೆ. ಇದರ ಬಗ್ಗೆ ಇಂಥಿಂಥಕಡೆ ಇಷ್ಟಿಷ್ಟು ಭೂಮಿಯಿದೆ ಎಂದು ಇದೇ ಶಾಸನಸಭೆಯಲ್ಲಿ ಒಂದು ಪಟ್ಟಿಯನ್ನು ಕೊಟ್ಟಿರುತ್ತೇನೆ. ನಿಮ್ಮ ಅಧಿಕಾರಿಗಳು ಅದರ ಬಗ್ಗೆ ಯಾವ ವಿಧವಾದ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಅರಣ್ಯ ಪ್ರದೇಶಗಳಲ್ಲಿ ತೆರವು ಮಾಡಿದ ಭೂಮಿಯನ್ನು ಯಾರು ಹಿಂದಿನಿಂದ ಬೇಸಾಯ ಮಾಡಿಕೊಂಡು ಬಂದಿರುತ್ತಾರೋ ಅವರಿಗೆ ಭೂಮಿಯನ್ನು ಬಿಟ್ಟುಕೊಡಬೇಕೆಂದು ಸಚಿವರಲ್ಲಿ ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೆ ನಮ್ಮ ಮುಂದೆ ಇಟ್ಟಿರುವ ಆಹಾರ ಮತ್ತು ಅರಣ್ಯ ಶಾಖೆಗೆ ಸಂಬಂಧಪಟ್ಟ ಎರಡು ಬೇಡಿಕೆಗಳನ್ನು ನಾನು ವಿರೋಧಿಸಿ ಎರಡು ಮೂರು ಅಂಶಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯದಾಗಿ ಆಹಾರ ಇಲಾಖೆಯನ್ನು ತೆಗೆದುಕೊಂಡು ಹೇಳುವುದಾದರೆ, ಅವರ ವರದಿಯಲ್ಲಿ ಒಂದು ಶಹಭಾಸಗಿರಿಯನ್ನು ಕೊಟ್ಟುಕೊಂಡಿದ್ದಾರೆ. ತಮ್ಮ ಕಾರ್ಯಕ್ರಮದ ಆಧಾರದಮೇಲೆ, ಧೋರಣೆಯ ಆಧಾರದ ಮೇಲೆ ಈಗ ಬೆಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇದರ ಬಗ್ಗೆ ದೀರ್ಘವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ.

ಆದರೆ ನಿಜವಾಗಿಯೂ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗಿದೆಯೇ ಎಂದು ನೋಡುವುದಾದರೆ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗಿಲ್ಲ ಎಂಬುದು ಅಂಕಿಅಂಶಗಳಿಂದ ಸ್ಪಷ್ಟವಾಗಿ ಕಾಣುತ್ತದೆ, ಈ ದಿನ ಕಾಂಗ್ರೆಸ್ ಪಕ್ಷವೇ ಇರಲಿ, ನಾಳೆ ಜನತಾ ಪಕ್ಷವೇ ಬರಲಿ ಪ್ರಶ್ನೆ ಅದಲ್ಲ. ಮೊದಲನೆಯದಾಗಿ ತುರ್ತು ಪರಿಸ್ಥಿತಿಯ ಕಾಲದಲ್ಲಾಗಲೀ ಈ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗಿದೆಯೇ ಎಂದು ನೋಡಿದರೆ, ಅಂಕಿಅಂಶಗಳ ಆಧಾರದ ಮೇಲೆ ನಮಗೆ ಏನು ಗೊತ್ತಾಗುತ್ತದೆ ಎಂದರೆ, ತುರ್ತುಪರಿಸ್ಥಿತಿಯಲ್ಲಿ ಕೆಲವು ದಿವಸ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಯಿತು, ಆದರೆ ಸ್ವಲ್ಪ ದಿವಸಗಳಾದ ಮೇಲೆ ಈ ಬೆಲೆಗಳು ಜಾಸ್ತಿಯಾಗುತ್ತಾ ಹೋಯಿತು. ಜನತಾ ಪಕ್ಷ ಬಂದ ಮೇಲೂ ಸಹ ಈ ಬೆಲೆಗಳನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇನ್ನೂ ಜಾಸ್ತಿಯಾಗುತ್ತಾ ಇದೆ. ಈ ಬಗ್ಗೆ ಒಂದೆರಡು ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬೆಲೆಗಳ ಬಗ್ಗೆ ಏಪ್ರಿಲ್ ತಿಂಗಳಿನ ಕೆಲವು ಅಂಕಿಅಂಶಗಳನ್ನು "ಎಕನಾಮಿಕ್ ಟೈಮ್ಸ್ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ೧೯೬೯-೭೦ರಲ್ಲಿ ಹೋಲ್‌ಸೇಲ್ ಇಂಡೆಕ್ಸ್‌ನಲ್ಲಿ ಅಕ್ಕಿ ಬೆಲೆ ೧೦೦ ರೂ. ಇದ್ದುದು ೧೧೨ ರೂಪಾಯಿ ಆಯಿತು. ಅದರ ಹಿಂದೆ ಗೋಧಿಯ ಬೆಲೆ ೧೪೨.೭ ಇದ್ದದ್ದು ೧೯೭೭ರ ಏಪ್ರಿಲ್ ೧೧ನೇ ತಾರೀಖಿನಲ್ಲಿ ೧೪೩.೯ ಆಯಿತು. ನಮ್ಮ ರಾಜ್ಯದ ಫಿಗರ್ಸ್ ನನ್ನ ಹತ್ತಿರ ಇಲ್ಲ. ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ರಾಜ್ಯದ ಪರಿಸ್ಥಿತಿಯಲ್ಲೂ ಬದಲಾವಣೆ ಆಗಿಲ್ಲ. ಗ್ರೌಂಡ್‌ನಟ್, ಪಲ್ಸಸ್, ಆಯಿಲ್ ಸೀಡ್ಸ್ ಇವೆಲ್ಲದರ ಬೆಲೆಗಳು ೧೯೭೭ರಲ್ಲಿ ಹಿಂದಿನದಕ್ಕಿಂತ ಜಾಸ್ತಿಯಾಗಿದೆ ಎಂದು ಎಕನಾಮಿಕ್ ಟೈಮ್ಸ್ ಪತ್ರಿಕೆಯಲ್ಲಿ ಕೊಟ್ಟಿದ್ದಾರೆ. ಜೂನ್ ತಿಂಗಳ ೯ನೇ ತಾರೀಖಿನ ಪತ್ರಿಕೆಯಲ್ಲಿ ಈಗಿನ ಒಂದೆರಡು ಅಂಶಗಳನ್ನು ಕೊಟ್ಟಿದ್ದಾರೆ. ಏನೆಂದರೆ ;

> "The wholesale price index increased by 9.33 percent from 168.2 on 24th April, 1976 to 183.9 on 23rd April 1977. The index of non-food articles went up by 30 percent, textiles by 14 percent, food articles by 13 percent, manufactured food products by 12.4 percent and miscellaneous products by 7.85 percent."

ಎಂದು ಹೇಳಿದ್ದಾರೆ. ಇದು ೧೯೭೭ರ ಏಪ್ರಿಲ್ ತಿಂಗಳಲ್ಲಿ ನಡೆದಂತ ವಿದ್ಯಮಾನಗಳು, ಹಾಗೂ ನಂತರ ಆಗಿರುವಂಥ ವಿದ್ಯಮಾನಗಳು ಏನೆಂದರೆ ಬೆಲೆಗಳು ಜಾಸ್ತಿಯಾಗಿರುವುದು. ಈ ಜನತಾ ಪಕ್ಷ ಬಂದಮೇಲೆ ಬೆಲೆಗಳು ಕಡಿಮೆಯಾಗಿದೆ ಎಂದು ಯಾರೂ ಹೇಳಲಿಲ್ಲ. ಅದರ ಬಗ್ಗೆ ಏನನ್ನೂ ಮಾತನಾಡಲಿಲ್ಲ. ನಾನು ಹೇಳುತ್ತೇನೆ ಬೆಲೆಗಳು ಕಡಿಮೆಯಾಗಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಜನತಾಪಕ್ಷ ಬಂದಮೇಲೆ ಪ್ರಜಾಪ್ರಭುತ್ವ ಬಂದಿದೆ ; ಬೆಲೆಗಳು ಇಳಿದಿಲ್ಲ ಎಂದು ಹೇಳಿದ್ದಾರೆ. ಆದರೆ ತುರ್ತುಪರಿಸ್ಥಿತಿಯಲ್ಲಿ ಬೆಲೆಗಳು ಏನಿತ್ತು ಎಂಬುದನ್ನು ಹೇಳಲಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಮೊದಲನೆಯದು ತುರ್ತುಪರಿಸ್ಥಿತಿ ಇದ್ದಾಗ ಕೆಲವು ದಿವಸ ಬೆಲೆಗಳು ಕಡಿಮೆ ಇತ್ತು, ನಂತರ ಬೆಲೆಗಳು ಜಾಸ್ತಿಯಾಯಿತು. ಎರಡನೆಯದು ಈ ಬೆಲೆಗಳು ಜಾಸ್ತಿಯಾಗುವುದಕ್ಕೆ ಕಾರಣ ಮತ್ತು ಅದಕ್ಕೆ ಪರಿಹಾರ ಹುಡುಕುವುದು ಬಹಳ ಮುಖ್ಯವಾದ ಪ್ರಶ್ನೆ. ನಮ್ಮ ಅಭಿಪ್ರಾಯದಲ್ಲಿ ಇವತ್ತಿನ ದಿವಸ ಕೇಂದ್ರದ ಜನತಾಪಕ್ಷದ ಸರ್ಕಾರವೇ ಆಗಲೀ, ಇಲ್ಲಿರುವ ಕಾಂಗ್ರೆಸ್ ಪಕ್ಷದ ಸರ್ಕಾರವೇ ಆಗಲೀ ಈ ಎರಡು ಸರ್ಕಾರಗಳ ನೀತಿ ಮತ್ತು ಧೋರಣೆಯಲ್ಲಿ ವ್ಯತ್ಯಾಸವಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಕೇರಳ ಸರ್ಕಾರದ್ದು ;

ಶ್ರೀ ಎಂ. ಎಸ್. ಕೃಷ್ಣನ್.—ಅವರು ನಿಮ್ಮ ಹಾಗೆ; ನಾನು ಈ ಎರಡೂ ಸರ್ಕಾರಗಳ ಧೋರಣೆಯಲ್ಲಿ ಏನೂ ವ್ಯತ್ಯಾಸವಿಲ್ಲ ಎಂದು ಏತಕ್ಕೆ ಹೇಳಿದೆನೆಂದರೆ ಈ ಆಹಾರ ಧಾನ್ಯಗಳ ಬೆಲೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು ಅವರಿಗೆ ಸಾಧ್ಯವಾಗಿಲ್ಲ. ಮೊನ್ನೆ ದಿವಸ ಗೋಧಿ ಬಗ್ಗೆ ತಮ್ಮ ಧೋರಣೆಯನ್ನು ತಿಳಿಸಿದ್ದಾರೆ: ಈ ಬಗ್ಗೆ ಪ್ರೊಕ್ಯೂರ್‌ಮೆಂಟ್ ಮೈನ್‌ಟೈನ್ ಮಾಡಬೇಕಾಗಿಲ್ಲ; ಧಾರಣೆಗಳ ಶೇಖರಣೆ ಮಾಡಬೇಕಾಗಿಲ್ಲ, ಅದನ್ನು ಫ್ರೀಯಾಗಿ ಬಿಟ್ಟುಬಿಡಬೇಕು ಎಂಬುದು ಸರ್ಕಾರದ ಧೋರಣೆಯಾಗಿದೆ. ಆದ್ದರಿಂದ ಇವತ್ತಿನ ದಿವಸ ರೈತರಿಗೆ ಕಷ್ಟವಾಗಿದೆ. ಅದರಿಂದ ಡಿಸ್ಟ್ರೆಸ್ ಸೇಲ್ಸ್ ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರೊಕ್ಯೂರ್‌ಮೆಂಟ್ ಮಾಡದಿದ್ದರೆ.........

ಶ್ರೀ ಎಂ. ಎಸ್. ಕೃಷ್ಣನ್ —ಪ್ರೊಕ್ಯೂರ್‌ಮೆಂಟ್ ಮಾಡದಿದ್ದರೆ ಅದೇ ರೀತಿ ಆಗುತ್ತದೆ. ಅದರಲ್ಲಿ ಅನುಮಾನ ಬರುವುದಕ್ಕೆ ಆಸ್ಪದವಾಗುತ್ತದೆ. ಇಲ್ಲಿ ತಾವು ನೋಡಿದರೆ ೧೯೭೬–೭೭ರಲ್ಲಿ ಟಾರ್ಗೆಟ್ ೨,೫೩,೦೦೦ ಟನ್ಸ್ ಇದ್ದರೆ ಕಲೆಕ್ಷನ್ ಆಗಿರುವುದು ೯೦ ೪೭೪ ಟನ್ಸ್ ಎಂದು ಇದೆ. ಇದು ೧೯೭೭ರ ಫೆಬ್ರವರಿ ತಿಂಗಳ ಕೊನೆಯವರೆಗೆ ಕಲೆಕ್ಷನ್ ಆಗಿರತಕ್ಕಂಥಾದ್ದು ಇದೆ. ಇದು ಏತಕ್ಕೆ ಹೀಗಾಗಿದೆ ಎಂಬುದನ್ನು ಹೇಳಬೇಕು. ಹಿಂದಿನ ವರ್ಷ ೧೯೭೫-೭೬ರಲ್ಲಿ ಟಾರ್ಗೆಟ್ ೨,೮೦,೦೦೦ ಟನ್ಸ್ ಇದ್ದರೆ ಕಲೆಕ್ಷನ್ ಆಗಿರುವುದು ೨,೪೩,೮೯೭ ಟನ್ಸ್ ಎಂದು ಇದೆ. ನಂತರ failure of rains in certain parts of the state was the reason given in the case of Jowar ಎಂದು ಇಷ್ಟು ಮಾತ್ರ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಏನಾಗಿದೆ ಎಂದರೆ ಮಾನ್ಯ ಕೃಷ್ಣನ್‌ರವರು ಅವರ ಜಮೀನಿನಲ್ಲಿ ಏನನ್ನೂ ಬೆಳೆಯುವುದಿಲ್ಲ ಅಂತ ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ರಿಪೋರ್ಟಿನಲ್ಲಿ ಹೇಳಿರುವುದನ್ನು ನಾನು ಹೇಳುತ್ತಿದ್ದೇನೆ. ನನಗೆ ಜಮೀನೇ ಇಲ್ಲ ಬೆಳೆಯುವುದಕ್ಕೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಳೆದ ಸಾರಿ ಭತ್ತ ಬೆಳೆಯತಕ್ಕಂಥ ಪ್ರದೇಶದಲ್ಲಿ ಅನೇಕ ಕಡೆ ಮಳೆಯ ಅಭಾವದಿಂದ ಫಸಲು ಹೋಗಿದೆ. ಉದಾಹರಣೆಗೆ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ, ಹೊನ್ನಾಳಿ, ಶಿಕಾರಿಪುರ, ಸೊರಬ ಇವು ಡ್ರಾಟ್ ಎಫೆಕ್ಟೆಡ್ ಏರಿಯಾ ಎಂದು ಸರ್ಕಾರಕ್ಕೆ ಕೊಟ್ಟಿರತಕ್ಕ ವರದಿಯಲ್ಲಿ ಸೇರಿವೆ. ಅಲ್ಲಿ ಭತ್ತದ ಫಸಲು ಹೋದರೂ ಲೆವಿಯನ್ನು ವಸೂಲಿ ಮಾಡುತ್ತಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಕಾಗೋಡು ತಿಮ್ಮಪ್ಪನವರು ಇಲ್ಲಿ ಕೊಟ್ಟಿರತಕ್ಕಂಥ ಅಂಕಿ ಅಂಶಗಳನ್ನು ನೋಡಿಲ್ಲ ಎಂದು ಕಾಣುತ್ತದೆ. ಆದರೆ ಅವರು ಹೇಳಿದ ಹಾಗೆ ನಾನು ಜಮೀನು ಇಟ್ಟು ಕೊಂಡಿಲ್ಲ, ಅದರಲ್ಲಿ ಏನೂ ಬೆಳೆಯುವುದಿಲ್ಲ. ನಾನು ಈ ಅಂಕಿಅಂಶಗಳ ಮೇಲೆ ಮಾತನಾಡುವಾಗ ಅವರು ಇದನ್ನು ನೋಡಬೇಕು. ಚಿತ್ರದುರ್ಗದಲ್ಲಿ ಭತ್ತದ ಟಾರ್ಗೆಟ್ ೧೫,೦ ೦ ಟನ್ಸ್ ಇದ್ದರೆ, ಕಲೆಕ್ಷನ್ ಆಗಿರುವುದು ೧೫,೬೪೦ ಟನ್ಸ್ ಎಂದು ಇದೆ. ಮತ್ತೆ ಮಂಡ್ಯದಲ್ಲಿ ಟಾರ್ಗೆಟ್ ೨೫ ೦೦೦ ಟನ್ಸ್ ಇದ್ದರೆ ಕಲೆಕ್ಷನ್ ಆಗಿರುವುದು ೨೫,೨೯೧ ಟನ್ಸ್ ಎಂದು ಇದೆ. ರಾಯಚೂರಿನಲ್ಲಿ ೨೨,೦೦೦ ಟನ್ಸ್ ಟಾರ್ಗೆಟ್ ಇದ್ದರೆ, ೨೪,೨೯೪ ಟನ್ಸ್ ಕಲೆಕ್ಷನ್ ಆಗಿದೆ. ಇನ್ನು ಮಾನ್ಯ ಕಾಗೋಡು ತಿಮ್ಮಪ್ಪನವರ ಶಿವಮೊಗ್ಗ ಜಿಲ್ಲೆಯಲ್ಲಿ ೪೫,೦೦೦ ಟನ್ಸ್ ಟಾರ್ಗೆಟ್ ಇದ್ದರೆ, ಕಲೆಕ್ಷನ್ ಆಗಿರುವುದು ೪೭,೪೨೭ ಟನ್ಸ್ ಇದೆ. ಈ ನಾಲ್ಕು ಜಿಲ್ಲೆಗಳಲ್ಲಿ ಮಾತ್ರ ಹೆಚ್ಚಿನ ಕಲೆಕ್ಷನ್ ಆಗಿದೆ; ಬೇರೆ ಕಡೆಗಳಲ್ಲಿ ಆಗಿಲ್ಲ. ಬೇರೆ

ಕಡೆಗಳಲ್ಲಿ ಕಲೆಕ್ಷನ್ ಆಗಿಲ್ಲ ಎಂದು ಇಲ್ಲಿಯ ಅಂಕಿಅಂಶಗಳೇ ತೋರಿಸುತ್ತವೆ. ಬೇರೆ ಕಡೆಗಳಲ್ಲಿ ಈ ಟಾರ್ ಗೆಟ್‌ಗಿಂತ ಕಲೆಕ್ಷನ್ ಕಡಿಮೆಯಾಗಿದೆ. ಈ ದೃಷ್ಟಿಯಿಂದ ಪ್ರೊಕ್ಯೂರ್‌ಮೆಂಟ್ ಮಾಡಬೇಕೆಂಬ ಅಂಶ ಇದ ರಿಂದ ಸ್ಪಷ್ಟವಾಗಿದೆ. ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದ ಹಾಗೆ ಈ ಪ್ರೊಕ್ಯೂರ್‌ಮೆಂಟ್ ಮಾಡುವಾಗ ರೈತನಿಗೆ ಒಳ್ಳೆಯ ಬೆಲೆಯನ್ನು ಕೊಡಬೇಕು ಎನ್ನುವುದು ಮುಖ್ಯವಾದ ಅಂಶ ಈ ಅಂಶದ ಬಗ್ಗೆ ಹೇಳಬೇಕೆಂದರೆ ರೈತ ಸಂಘಗಳಲ್ಲಿ ಈ ಬಗ್ಗೆ ಚರ್ಚೆ ಮಾಡಿ ಒಂದು ಕ್ವಿಂಟಾಲ್ ಭತ್ತಕ್ಕೆ ೧೨೦ ರೂ. ಕೊಡಬೇಕು ಎಂದು ಹೇಳಿದ್ದಾರೆ. ಅದೇ ರೀತಿ ಜವರಿಗೂ ಸಹ ಒಂದು ಕ್ವಿಂಟಾಲ್‌ಗೆ ೧೧೦ ರೂಪಾಯಿ ಕೊಡಬೇಕೆಂದು ಹೇಳಿದ್ದಾರೆ. ಇನ್ನು ಈ ಬೆಲೆಗಳು ಕಡಿಮೆಯಾಗುವ ವಿಚಾರದಲ್ಲಿ ಆಹಾರಧಾನ್ಯಗಳ ಸಗಟು ವ್ಯಾಪಾರ ಎಲ್ಲಿಯವರೆಗೆ ದೊಡ್ಡ ದೊಡ್ಡ ವ್ಯಾಪಾರಸ್ಥರ ಕೈಯೊಳಗೆ ಇರುತ್ತದೆಯೋ ಅಲ್ಲಿಯ ವರೆಗೆ ಬೆಲೆಗಳು ಕಡಿಮೆಯಾಗುವುದಿಲ್ಲ. ಈ ಬಗ್ಗೆ ನಾವು ಪದೇ ಪದೇ ಹೇಳುತ್ತಿದ್ದೇವೆ. ಮಾನ್ಯ ದೇವರಾಜ್ ಅರಸ್‌ರವರ ಸರ್ಕಾರದವರು ಇದರ ಬಗ್ಗೆ ಉಡಾಫೆ ಹೊಡೆಯುವ ರೀತಿಯಲ್ಲಿ ಮಾತನಾಡು ತ್ತಾರೆ. ಆಹಾರಧಾನ್ಯಗಳ ಸಗಟು ವ್ಯಾಪಾರವನ್ನು ಅವರ ಕೈಯಿಂದ ತೆಗೆದುಕೊಂಡರೆ ಮಾತ್ರ ನ್ಯಾಯ ಬೆಲೆಯನ್ನು ರೈತನಿಗೆ ಕೊಟ್ಟು, ಕಡಿಮೆ ಬೆಲೆಗೆ ಆಹಾರಧಾನ್ಯಗಳನ್ನು ಜನಗಳಿಗೆ ಮಾರಾಟ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆಗ ಬೆಲೆಗಳೂ ಸಹ ಕಡಿಮೆಯಾಗುತ್ತದೆ. ಇಲ್ಲದಿದ್ದರೆ ಬೆಲೆಗಳು ಕಡಿಮೆಯಾಗುವು ದಿಲ್ಲವೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಟಾರ್‌ಗೆಟ್‌ಗಿಂತ ಜಾಸ್ತಿ ಕಲೆಕ್ಟ್ ಆಗಿದೆ ಯೆಂದು ಹೇಳಿದ್ದಾರೆ. ಆದರೆ ಸ್ಟೇಟ್‌ಮೆಂಟ್ ನಂ. ೪ರಲ್ಲಿ ನೋಡಿದರೆ ಟಾರ್‌ಗೆಟ್ ೪೧,೦೦೦ ಟನ್ಸ್ ಇದ್ದರೆ ವಸೂಲಾಗಿರುವುದು ೧೨,೨೬೫ ಟನ್ಸ್ ಎಂದು ಇದೆ. ಟಾರ್‌ಗೆಟ್‌ಗಿಂತ ಕಡಿಮೆ ವಸೂಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ಕರೆಕ್ಟ್ ಮಾಡಿದರೆ ಒಳ್ಳೆಯದು. ಅವರು ೧೯೭೬-೭೭ ರಲ್ಲಿ ಆಗಿರುವುದನ್ನು ಹೇಳಿದ್ದಾರೆ. ಅದು ಸರಿ. ಇದರಲ್ಲಿ ೨,೫೦,೦೦೦೦ ಟನ್ಸ್ ಟಾರ್‌ಗೆಟ್‌ನ್ನು ನಿಗದಿ ಮಾಡಿದ್ದರೂ ೯೦,೯೭೪ ಟನ್ಸ್ ಕಡಿಮೆ ಕಲೆಕ್ಷನ್ ಆಗಿರುವುದು ಏತಕ್ಕೆ ಎಂಬುದೇ ನನ್ನ ಪ್ರಶ್ನೆ. ಕೆಲವು ಕಡೆ ಮಳೆ ಬರದೇ ಇರಬಹುದು, ಕೆಲವು ಕಡೆ ಡ್ರಾಟ್ ಕಂಡಿಷನ್ ಆಗಿರಬಹುದು. ಆದರೆ ಬೇರೆ ಕಡೆ ಗಳಲ್ಲಿ ಆ ರೀತಿ ಆಗಿಲ್ಲ. ಆದ್ದರಿಂದ ಇದರ ಬಗ್ಗೆ ಸಮಂಜಸವಾದ ಉತ್ತರ ಹೇಳಬೇಕು. ನಾನು ಏತಕ್ಕೆ ಈ ಪ್ರಶ್ನೆಯನ್ನು ಎತ್ತಿದ್ದೇನೆ ಎಂದರೆ ಬೆಲೆ ಏರಿಕೆಯನ್ನು ಕಡಿಮೆ ಮಾಡಬೇಕಾದರೆ ಅತ್ಯುತ್ತಮವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಪ್ರೊಕ್ಯೂರ್‌ಮೆಂಟ್ ಮಾಡಬೇಕಾಗಿಲ್ಲ ವೆಂಬ ಧೋರಣೆ ಕೇಂದ್ರದವರಲ್ಲಿ ಇದೆ. ಕೇಂದ್ರ ಸರ್ಕಾರದವರ ಧೋರಣೆಯನ್ನು ತಾವು ಅನುಸರಿಸುವು ದಾದರೆ ಬೆಲೆಗಳನ್ನು ಕಡಿಮೆ ಮಾಡುವುದಕ್ಕಾಗುವುದಿಲ್ಲ.

ಅಷ್ಟೇ ಮಾತ್ರವಲ್ಲ, ಇನ್ನೂ ಮೂಲಭೂತವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಎಲೆಕ್ಷನ್ ಬಂದಮೇಲೆ ಏನಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಈಗಾಗಲೇ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಎಲ್ಲೋ ಒಂದು ಕಡೆ ೬೩ ಸೀಟಿನಲ್ಲಿ ೫೩ ಸೀಟು ಜನತಾಪಕ್ಷಕ್ಕೆ ಬರುತ್ತವೆ ಎಂದು ಹೇಳುತ್ತಿದ್ದರು. ಈಗ ಜನತಾ ಗಾಳಿ ಹೊಡೆಯುತ್ತಿದೆ. ಇಂದಿರಾಗಾಳಿ ಹೋಗಿ ಜನತಾಗಾಳಿ ಹೊಡೆಯುತ್ತಿದೆ. ಜನತಾಗಾಳಿ ಎಷ್ಟು ದಿವಸ ಹೊಡೆಯುತ್ತದೆಯೋ ಕಾದು ನೋಡೋಣ. ಅದು ನನಗಂತೂ ಗೊತ್ತಿಲ್ಲ.

೬-೦೦ ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಜನ ತೀರ್ಮಾನ ಮಾಡುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹೌದು ಎಲ್ಲವನ್ನೂ ಜನತೆ ತೀರ್ಮಾನ ಮಾಡುತ್ತಾರೆ. ಅದು ನಿಜ. ಆಗಲೂ ಜನಾನೇ ತೀರ್ಮಾನ ಮಾಡಿದ್ದರು. ಈಗಲೂ ಜನಾನೇ ತೀರ್ಮಾನ ಮಾಡಿದ್ದಾರೆ. ಬೆಲೆ ಏರಿಕೆ ಬಗ್ಗೆ ಶ್ರೀಮಾನ್ ಮೊರಾರಜಿ ದೇಸಾಯಿ ಅವರು ಮತ್ತು ಪಟೇಲ್ ಅವರು ಈ ತರಹ ಧೋರಣೆ ತೆಗೆದುಕೊಂಡರೆ ಬೆಲೆಗಳೇನೂ ಕಡಿಮೆಯಾಗುವುದಿಲ್ಲ, ಅದೇ ರೀತಿ ಇರುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಧೋರಣೆ ?

ಶ್ರೀ ಎಂ. ಎಸ್. ಕೃಷ್ಣನ್.—ಧೋರಣೆ ಏನೆಂದರೆ ಎಲ್ಲಾ ಫ್ರೀಯಾಗಿ ಬಿಟ್ಟುಬಿಡಬೇಕು ; ಪ್ರೊಕ್ಯೂರ್‌ಮೆಂಟ್ ಮಾಡಬೇಕಾಗಿಲ್ಲ, ಸ್ಮಗ್ಲರ್‌ಗಳನ್ನೆಲ್ಲಾ ಬಿಟ್ಟುಬಿಡಬೇಕು. ಅವರಿಗೆ ಹೂವಿನ ಹಾರ ಹಾಕಿ ಮರ್ಯಾದೆ ಮಾಡಬೇಕು ; ಹಾರ ಹಾಕಿರುವ ಫೋಟೋ ನನ್ನ ಹತ್ತಿರ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಶ್ರೀಮಾನ್ ಕೃಷ್ಣನ್ ಅವರು ಮಾತನಾಡುತ್ತ ಶ್ರೀಮಾನ್ ಮುರಾರ್ಜಿ ದೇಸಾಯಿ ಮತ್ತು ಪಟೇಲ್ ಅವರ ಧೋರಣೆ ಸ್ಮಗ್ಲರ್‌ಗಳನ್ನೆಲ್ಲಾ ಬಿಟ್ಟುಬಿಡಬೇಕು, ಅವರಿಗೆ ಹೂವಿನ ಹಾರ ಹಾಕಬೇಕು ಎಂದು ಹೇಳಿದರು. ಅದು ತಪ್ಪು. ಸ್ಮಗ್ಲರ್‌ಗಳನೆಲ್ಲಾ ಬಿಟ್ಟುಬಿಡಬೇಕು ಎಂದು ಶ್ರೀಮಾನ್ ಮುರಾರ್ಜಿ ದೇಸಾಯಿ ಅವರಾಗಲೀ, ಪಟೇಲ್ ಅವರಾಗಲೀ ಹೇಳಲಿಲ್ಲ. ಶ್ರೀಮಾನ್ ಜಯಪ್ರಕಾಶ್ ನಾರಾಯಣ್ ಅವರ ಹತ್ತಿರ ಇವರೆಲ್ಲಾ ಹೋಗಿ ನಾವು ಸರೆಂಡರ್ ಆಗುತ್ತೇವೆ. ನಾವೆಲ್ಲಾ ಕೆಟ್ಟ ಕೆಲಸ ಬಿಟ್ಟುಬಿಡುತ್ತೇವೆ ಸ್ಮಗ್ಲಿಂಗ್ ತಡೆಯುವುದಕ್ಕೆ ನಾವೇ ಕಾವಲಾಗಿರುತ್ತೇವೆ ಎಂದು ಹೇಳಿದ್ದಾರೆ. ಮನುಷ್ಯರಲ್ಲಿ ಪರಿವರ್ತನೆಯಾಗುವುದಿಲ್ಲ ಎಂಬುದನ್ನು ತಾವು ಹೇಳಬೇಡಿ. ಪರಿವರ್ತನೆಯಾಗುವುದಕ್ಕೆ ಸಾಧ್ಯತೆ ಇದೆ. ಮಾನ್ಯ ಧಾರಿಯಾ ಅವರೇ ಸ್ಪಷ್ಟವಾಗಿ ಹೇಳಿದ್ದಾರೆ, ಸ್ಮಗ್ಲಿಂಗ್ ಬಗ್ಗೆ ನೇರವಾದ ಕ್ರಮ ಕೈಗೊಳ್ಳುತ್ತೇವೆ ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಆ ಮಾತನ್ನು ಬೇರೆಯವರು ಆಡಿದ್ದರೆ ನಾನು ಸಂಕಟ ಪಡುತ್ತಾ ಇರಲಿಲ್ಲ. ಆದರೆ ಸೋಷಲಿಸ್ಟ್ ಪಾರ್ಟಿಯಲ್ಲಿದ್ದಂಥ ಜನರಿಗೆ ಹೃದಯ ಪರಿವರ್ತನೆ ಯಾವಾಗ ಆಯಿತೋ ನನಗೆ ಗೊತ್ತಿಲ್ಲ. ನೀವು ಓದಿರುವ ಸಿದ್ಧಾಂತ ನಾನು ಓದಿರುವ ಸಿದ್ಧಾಂತ ಎಲ್ಲಾ ಒಂದೆ. ನಮ್ಮ ದೇಶದಲ್ಲಿ ಆ ರೀತಿ ನಡೆಯುವುದಿಲ್ಲ. 'ಕರೆಂಟ್' ಮ್ಯಾಗಜೈನ್‌ನಲ್ಲಿ ರಿಪೋರ್ಟ್ ಬಂದಿದೆ. ಸೂರತ್ ಬಗ್ಗೆ, ಬೊಂಬಾಯಿ ನಗರದ ಬಗ್ಗೆ ರಿಪೋರ್ಟ್ ಬಂದಿದೆ. ಸ್ಮಗ್ಲರ್‌ಗಳನ್ನು ಬಿಟ್ಟಮೇಲೆ ಸ್ಮಗ್ಲಿಂಗ್ ಗೂಡ್ಸ್ ಜಾಸ್ತಿ ಬರುತ್ತಿದೆ ಎಂದು ಅದರಲ್ಲಿ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಅದನ್ನು ಅಲ್ಲಗಳೆಯುವುದಕ್ಕೆ ಹೋಗುವುದಿಲ್ಲ. ಆದರೆ ಸ್ಮಗ್ಲರ್‌ಗಳನ್ನು ಬಿಟ್ಟುಬಿಟ್ಟು ಅವರಿಗೆ ಎನ್‌ಕರೇಜ್‌ಮೆಂಟ್ ಕೊಡುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಅಭಿಪ್ರಾಯದಲ್ಲಿ ಹೃದಯ ಪರಿವರ್ತನೆಯಾಗುವುದಿಲ್ಲ. ಸ್ಮಗ್ಲರ್ಸ್ ಬಂದು ಸ್ಮಗ್ಲಿಂಗನ್ನು ಗಾರ್ಡ್ ಮಾಡುತ್ತಾರೆ ಎಂದು ಹೇಳಿದರೆ ತೋಳ ಕುರಿಮರಿಯನ್ನು ಗಾರ್ಡ್ ಮಾಡಿದಹಾಗಾಗುತ್ತದೆ, ಈ ಧೋರಣೆಯನ್ನು ದಯವಿಟ್ಟು ತಾವು ಒಪ್ಪಿಕೊಳ್ಳಬೇಡಿ. ಕಾರ್ಯಗತ ಮಾಡಬೇಡಿ. ಆ ರೀತಿ ಮಾಡುವುದರಿಂದ ಬೆಲೆಗಳು ಕಡಿಮೆಯಾಗುವುದಿಲ್ಲ ಎಂದು ನಾನು ಹೇಳುತ್ತಿದ್ದೇನೆ,

ಶ್ರೀ ಹೆಚ್. ಡಿ. ದೇವೇಗೌಡ.—ಪೊಲಿಟಿಕಲ್ ಸ್ಮಗ್ಲರ್ಸ್ ಬಗ್ಗೆ ತಾವೇನು ಹೇಳುತ್ತೀರಿ ?

ಶ್ರೀ ಎಂ. ಎಸ್. ಕೃಷ್ಣನ್.—ಅವರಲ್ಲಿ ಕೆಲವರನ್ನು ಹಿಡಿದಿದ್ದಾಗಿದೆ. ಎನ್‌ಕ್ವೈರಿ ಕಮಿಷನ್‌ಗಳನ್ನು ಮಾಡುತ್ತಿದ್ದಾರೆ. ಮಾಡಲಿ, ಬೇಡ ಎಂದು ಹೇಳುವುದಿಲ್ಲ. ಆಹಾರಧಾನ್ಯದ ಬಗ್ಗೆ ಮಾತನಾಡುವಾಗ ಹೋಟೆಲ್ ತಿಂಡಿಗಳ ಬೆಲೆ ಬಗ್ಗೆ ಮಾತನಾಡಬೇಕಾಗಿದೆ. ಹೋಟೆಲ್ ದರಗಳನ್ನು ಕಡಿಮೆ ಮಾಡುವುದಕ್ಕೆ ಸಾಕಷ್ಟು ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಎಂದು ತಾವು ಹೇಳಿದ್ದೀರಿ. ಆ ರೀತಿ ಹೇಳಿರುವುದು ಆಶ್ಚರ್ಯವಾದುದು ಮಾತ್ರವಲ್ಲ ಖೇದಕರವಾದುದು, ಖಂಡನೀಯವಾದುದು. ಇದೊಂದು ದುರಂತದ ಕಥೆ. ಹೋಟೇಲ್‌ಗಳ ಬೆಲೆಗಳನ್ನು ಇಳಿಸುವುದಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಒಂದು ಸಮಿತಿ ಮಾಡಿ ಶ್ರೀರಾಮುಲು ಅವರು ಕಾರ್ಮಿಕ ಮಂತ್ರಿಗಳಾಗಿದ್ದಾಗ ಬೆಲೆಗಳನ್ನು ಕಡಿಮೆ ಮಾಡಿದರು, ಆಮೇಲೆ ಇದರಿಂದ ಬಹಳ ತೊಂದರೆ ಬರುತ್ತದೆ ಎಂದು ಹೋಟೆಲ್ ಮಾಲೀಕರೆಲ್ಲಾ ಬಂದು ಅರ್ಜಿ ಅಹವಾಲು ಕೊಟ್ಟಮೇಲೆ ಸರ್ಕಾರದವರು ಪುನಃ ಒಂದು ಸಮಿತಿ ಮಾಡಿದರು. ಪ್ರೈಸ್‌ಸ್ಟ್ರಕ್ಚರ್ ಹೇಗಿರಬೇಕು ಎಂದು ಮಾಡಿದರು. ಮತ್ತೆ ಸರ್ಕಾರದವರು ಯಾರನ್ನೂ ಕೇಳದೇ ಮಾಡದೇ ಬೆಲೆಗಳನ್ನು ಬದಲಾವಣೆ ಮಾಡಿದರು. ಎ.ಬಿ.ಸಿ. ಎಂದು ಬೇರೆ ಬೇರೆ ದರ್ಜೆಗಳನ್ನು ಮಾಡಿದರು. ಇಷ್ಟೆಲ್ಲಾ ಮಾಡಿದರೂ ಕೂಡ ಬೆಲೆಗಳು ಕಡಿಮೆಯಾಗಿಲ್ಲ, ಜಾಸ್ತಿಯಾಗಿದೆ ಎಂಬುದನ್ನು ಮಾತ್ರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ಮಾತ್ರ ಆಹಾರಧಾನ್ಯಗಳ ಬಗ್ಗೆ ಹೇಳಿ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಸಿಸ್ಟಮನ್ನು ಇನ್ನೂ ಬಲಗೊಳಿಸಬೇಕು ಎಂದು ಹೇಳುತ್ತೇನೆ. ಅರಣ್ಯ ಇಲಾಖೆ ಬಗ್ಗೆ ಒಂದೆರಡು ಮಾತನ್ನು ಹೇಳಬೇಕಾಗಿದೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉತ್ತರ ಕರ್ನಾಟಕ

ಪ್ರದೇಶಗಳಲ್ಲಿ ಗೇರು ಬೀಜ ಬೆಳೆಯುವುದಕ್ಕೆ ಸಾವಿರಾರು ಎಕರೆ ಜಮೀನನ್ನು ತಾವು ಕೊಟ್ಟಿದ್ದೀರಿ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಅದನ್ನು ಯಾರಿಗೆ ಕೊಟ್ಟಿದ್ದೀರಿ ಎಂದರೆ ಭಾರಿ ಭಾರಿ ದೊಡ್ಡ ದೊಡ್ಡ ಜನಕ್ಕೆ ಕೊಟ್ಟಿದ್ದೀರಿ. ಅವರು ಗೇರು ಬೀಜವನ್ನು ಬೆಳೆಯುತ್ತಿದ್ದಾರೆಯೇ? ಅನೇಕರು ಬೆಳೆಯುತ್ತಿಲ್ಲ ಈ ಬಗ್ಗೆ ತಾವು ತಕ್ಷಣ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅವರಿಂದ ಜಮೀನನ್ನು ವಶಪಡಿಸಿಕೊಂಡು ಸರಿಯಾಗಿ ಪ್ಲಾಂಟೇಷನ್ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಇಲ್ಲದಿದ್ದರೆ ಅದರ ಬೆಲೆ ಸಿಕ್ಕಾಪಟ್ಟೆ ಜಾಸ್ತಿಯಾಗುತ್ತದೆ. ಕೇರಳದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಕ್ಯಾಷುನಟ್ಸ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ಅದರ ಜವಾಬ್ದಾರಿಯನ್ನು ಸರ್ಕಾರವೇ ತೆಗೆದುಕೊಂಡಿರುವುದರಿಂದ ಕೆ.ಜಿ.ಗೆ ೬ ರೂಪಾಯಿನಂತೆ ಗೇರುಬೀಜ ಸಿಗುತ್ತಿದೆ. ಆದರೆ ಇಲ್ಲಿ ೧೦ ರೂಪಾಯಿ ಇದೆ. ಅದೇರೀತಿ ನಮ್ಮ ರಾಜ್ಯದಲ್ಲೂ ಕೂಡ ಗೋಡಂಬಿ (ಗೇರುಬೀಜ) ಹೆಚ್ಚು ಮಾಡುವುದಕ್ಕೆ ಒಂದು ಕಾರ್ಪೊರೇಷನ್ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಿ. ಈಗ ಟ್ರೀ ಪ್ರೊಟೆಕ್ಷನ್ ಆಕ್ಟ್ ಇದೆ. ಇದರಲ್ಲಿ ಏನಾಗಿದೆ ಎಂದರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಲಿಂಗಪ್ಪನವರು ಮಾತನಾಡಿದಂತೆ ತೀರಾ ದಬ್ಬಾಳಿಕೆ ಮತ್ತು ದೌರ್ಜನ್ಯ ನಡೆಯುತ್ತಿದೆ. ಮರ ನಡುವುದಕ್ಕೆ ಬದಲು ಕಡಿಯುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆ ಇದರಿಂದ ಸಾಮಾನ್ಯ ಜನರಿಗೆ ಬವಣೆಯಾಗಿದೆ. ಈ ರೀತಿ ನೆಗೆಟೀವ್ ಅಪ್ರೋಚ್ ಮಾಡುವುದು ಸರಿಯಾದುದಲ್ಲ. ಇನ್ನೊಂದು ವಿಷಯ ಮೈಸೂರು ಜೂನಲ್ಲಿ ಪ್ರಾಣಿಗಳು......

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಕಾಗೋಡು ತಿಮ್ಮಪ್ಪನವರು ಈ ವಿಷಯವನ್ನು ಎತ್ತಿದರು. ನಾನು ಆಗಲೇ ಹೇಳಿದ್ದೇನೆ, ಯಾವ ಪ್ರಾಣಿಯಾಗಲೀ, ಪಶುಪಕ್ಷಿಯಾಗಲೀ ಅಲ್ಲಿ ಸತ್ತಿಲ್ಲ. ಟೆಕ್ನಿಕಲ್ ಡಿಫಿಕಲ್ಟೀಸ್ ಏನಿದೆ ಅದನ್ನು ಸಾಲ್ವ್ ಮಾಡಿದ್ದಾರೆ. ನಿನ್ನೆ ದಿವಸ ಅವರಿಗೆ ಪ್ರೆಸ್ ಸ್ಟೇಟ್‌ಮೆಂಟ್ ಕೊಡಿ ಎಂದು ಹೇಳಿದ್ದೆ. ಅದು ಬರಬೇಕಾಗಿತ್ತು. ಬಹುಶಃ ನಾಳೆ ಬರಬಹುದು

ಶ್ರೀ ಎಂ. ಎಸ್. ಕೃಷ್ಣನ್.—ಕ್ರಮ ತೆಗೆದುಕೊಂಡಿರುವುದು ಬಹಳ ಸಂತೋಷ. ಇಬ್ಬರು ಜಗಳದಲ್ಲಿ ಮೂರನೆಯವರಿಗೆ ತೊಂದರೆಯಾಗಬಾರದು. ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾಯಿತು ಎಂಬಂತಾಗುವುದು. ಮೈಸೂರು ಜೂ ಕ್ಯೂರೇಟರ್ ಅವರಿಗೂ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳಿಗೂ ಅಷ್ಟರಲ್ಲೇ ಎಂದು ಹೇಳುತ್ತಾರೆ. ಕ್ಯೂರೇಟರ್‌ರವರು ಸಿಕ್ಕಾಪಟ್ಟೆ ವರ್ತಿಸುತ್ತಾರೆ ಎಂದು ನಮಗೆ ಬಂದಿರುವ ವರದಿ. ನಮ್ಮಂಥವರು ಹೋದರೆ ಕಾಫಿ ತಿಂಡಿ ತರಿಸಿಕೊಟ್ಟು ಫೋಟೋ ತೆಗೆಸಿ ಅಲ್ಬಂನಲ್ಲಿ ಹಾಕಿಸುತ್ತಾರೆ. ಅದು ಬೇರೆ ವಿಚಾರ ಆದರೆ ಸಾಮಾನ್ಯ ಜನರು ಹೋದರೆ ಸರಿಯಾಗಿ ನಡೆದುಕೊಳ್ಳುವುದಿಲ್ಲ, ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಹೋದರೂ ಸರಿಯಾಗಿ ನಡೆದುಕೊಳ್ಳುವುದಿಲ್ಲ ಎಂದು ತಿಳಿದುಬಂದಿದೆ. ಕ್ಯೂರೇಟರ್ ಯಾರೇ ಆಗಿರಲಿ ಅವರ ಮೇಲೆ ಹತೋಟಿ ಇಟ್ಟುಕೊಳ್ಳಬೇಕು. ಅವರೇನೂ ಆಕಾಶದಿಂದ ಇಳಿದುಬಂದವರಲ್ಲ. ಅವರ ಮೇಲೆ ಸರಿಯಾದ ಹತೋಟಿ ಇಟ್ಟುಕೊಂಡು ಜಗಳ ಆಗದಂತೆ ನೋಡಿಕೊಳ್ಳಬೇಕು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಎಚ್. ಪಾಟೀಲ್. (ಆಹಾರ ಮತ್ತು ಅರಣ್ಯ ಶಾಖೆಗಳ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಿಣಿಯವರೇ, ಸುಮಾರು ೩ ತಾಸುಗಳವರೆಗೆ ಈ ಸದನದ ೨ ಭಾಗದ ಮಾನ್ಯ ಸದಸ್ಯರು ಆಹಾರ ಮತ್ತು ಅರಣ್ಯ ಇಲಾಖೆಗಳ ಬಗ್ಗೆ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಹಿಂದಿನ ಹಾಗೂ ಹಿಂದಿನ ಅವರ ವಾಖ್ಯಾನವನ್ನು ಗಮನಿಸಿದರೆ ಟೀಕೆಗಿಂತಲೂ ಹೆಚ್ಚು ಸಕ್ರಿಯಂದಾದ ಸಲಹೆಗಳನ್ನು ಅವರು ಮಾಡಿದ್ದಾರೆ. ಅದಕ್ಕಾಗಿ ನಾನು ಉಭಯ ಪಕ್ಷದ ಸದಸ್ಯರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ, ಅರಣ್ಯ ಮತ್ತು ಆಹಾರ, ಇವೆರಡು ಖಾತೆಗಳಲ್ಲಿ ಆ ಪಕ್ಷ ಈ ಪಕ್ಷ ಅನ್ನುವಂತಹ ಸಮಸ್ಯೆ ಬರಲಾರದು. ಇವೆರಡೂ ಜನತೆಗೆ ಉಪಯುಕ್ತವಾದ ಖಾತೆಗಳಾಗಿರುವುದರಿಂದ ಯಾರೇ ಸಲಹೆ ಮಾಡಿದರೂ ಆ ಸಲಹೆಯನ್ನು ಕ್ರಿಯಾತ್ಮಕವಾದ ದೃಷ್ಟಿಯಿಂದ ಪರಿಶೀಲಿಸುವುದು ನಮ್ಮ ಪ್ರಮುಖವಾದ ಕರ್ತವ್ಯ. ನಾನು ಮೊದಲನೆಯದಾಗಿ ಆಹಾರ ಶಾಖೆಯ ಬಗ್ಗೆ ಉತ್ತರವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ ಆಹಾರ ಮತ್ತು ಅರಣ್ಯ ಶಾಖೆಯ ಬಗ್ಗೆ ಕಟ್ ಮೋಷನ್ ಕಳುಹಿಸಿದಂತಹ ಮಾನ್ಯ ಸದಸ್ಯರಾದ ಶಾಮಣ್ಣನವರು ಇಲ್ಲ. ಮತ್ತು ಉಗ್ರವಾದ ಟೀಕೆಗಳನ್ನು ಮಾಡಿದಂತಹ ಅನೇಕ ಸದಸ್ಯರು ಕೂಡ ಈಗ ಈ ಸದನದಲ್ಲಿ ಇಲ್ಲ. ಅವರಲ್ಲಿ ಹೆಚ್ಚು ಆಸ್ಥೆ ಇರುವುದರಿಂದ ಅವರು ಈ ಉತ್ತರವನ್ನು ಕೇಳಿ ಆ ಉತ್ತರದಿಂದ ಸಮಾಧಾನ ಹೊಂದಿದ ನಂತರ ತಮ್ಮ ಅಭಿಪ್ರಾಯವನ್ನು ಹೊರಗಿನ ಜನತೆಗೂ ಸಹ ಮುಟ್ಟಿಸುವ ಹವ್ಯಾಸ ಮಾಡುವುದು ಇಂಥ ಖಾತೆಗಳಲ್ಲಿ ಉಚಿತ ಎಂದು ನನ್ನ ಅಭಿಪ್ರಾಯ. ಅದು ಏನೇ ಇರಲಿ, ಅದು ಅವರಿಗೆ

ಸಲ್ಲುವ ವಿಚಾರ. ಮೊಟ್ಟಮೊದಲನೆಯದಾಗಿ, ಮಾನ್ಯ ಎಂ.ಎಸ್. ಕೃಷ್ಣನ್‌ರವರು ಮಾತನಾಡುತ್ತಾ ಆಹಾರ ಪದಾರ್ಥಗಳ ಬೆಲೆಯಲ್ಲಿ ವ್ಯತ್ಯಾಸ ಹೆಚ್ಚಾಗಿದೆಯೇ ಹೊರತು ಕಡಿಮೆಯಾಗಿಲ್ಲವೆಂದೂ, ತತ್ಪರಿಣಾಮವಾಗಿ ಪರಿಸ್ಥಿತಿ ಕ್ಷೋಭೆಗೆ ಒಳಗಾಗಿ ಸಮಾಧಾನ ಇಲ್ಲದಂತಾಗಿದೆಯೊಂದೂ ಮತ್ತು ಇದಕ್ಕೆ ರಾಜ್ಯ ಸರ್ಕಾರ ಕಾರಣವೋ ಅಥವಾ ಕೇಂದ್ರ ಸರ್ಕಾರ ಕಾರಣವೋ ಗೊತ್ತಿಲ್ಲವೆಂದು ಹೇಳಿದರು. ಪಕ್ಷಗಳು ಬೇರೆ ಬೇರೆಯಾಗಿದ್ದರೂ ಸಹ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನತೆಯ ಕಲ್ಯಾಣದ ದೃಷ್ಟಿಯಿಂದ ಮತ್ತು ಆಹಾರ ಸರಬರಾಜು ಮಾಡುವ ದೃಷ್ಟಿಯಿಂದ ಒಂದಕ್ಕೊಂದು ಹೊಂದಿಕೊಂಡು ನಡೆಯಬೇಕಾಗುತ್ತದೆ. ಅದಕ್ಕೆ ಮಾನ್ಯ ಸದಸ್ಯರು ಸಹ ಸಹಕಾರ ನೀಡಬೇಕೆಂದು ಹೇಳಬಯಸುತ್ತೇನೆ. ನಾನು ಆಹಾರ ಸಚಿವನಾದ ಮೇಲೆ ಕೇಂದ್ರ ಸರ್ಕಾರದವರು ಯಾವುದಕ್ಕೂ ಇಲ್ಲ ಎಂದು ಹೇಳಿಲ್ಲ ಎಂದು ಹೇಳುತ್ತಾ, ಅದಕ್ಕೆ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಎಂ ಎಸ್. ಕೃಷ್ಣನ್‌ರವರು ಬಹಳ ಬುದ್ಧಿವಂತ ಸದಸ್ಯರು. ಅವರ ಅರ್ಥ ಪೂರ್ಣವಾದ ಮಾತುಗಳನ್ನು ಯಾರು ಅಲ್ಲಗಳೆಯಬೇಕಾಗಿಲ್ಲ. ಅವರು ಅಖಂಡ ರಾಷ್ಟ್ರೀಯ ಚಿತ್ರವನ್ನೇ ಚಿತ್ರಿಸಿದ್ದಾರೆ. ನಾನು ಆ ಬಗ್ಗೆ ಹೆಚ್ಚು ಆಳವಾಗಿ ಅಭ್ಯಾಸ ಮಾಡಿಲ್ಲದೆ ಇರುವುದರಿಂದ ಅವರಿಗೆ ವಿವರಣೆ ಕೊಡುವ ಸಾಹಸಕ್ಕೆ ಹೋಗುವುದಿಲ್ಲ. ಆದರೆ ನಾನು ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ, ಮೀಡಿಯಂ ರೈಸ್ ೧ನೇ ಸೆಪ್ಟೆಂಬರ್ ೧೯೭೬ರಲ್ಲಿ ಕೇಜಿಗೆ ೨.೦೬ ಪೈಸೆ ಇದ್ದರೆ ೧ನೇ ಮಾರ್ಚ್ ೧೯೭೭ರ ವೇಳೆಗೆ ೨-೦೮ ಪೈಸೆ ಆಗಿದೆ. ಜೋಳದ ಬೆಲೆ ಆಗ ೧-೪೮ ಇದ್ದರೆ ಇವತ್ತು ೧-೪೫ಕ್ಕೆ ಇಳಿದಿದೆ. ರಾಗಿ ೧-೨೪ ಇದ್ದರೆ ಈಗ ೧-೪೬ ಆಗಿದೆ. ಗೋಧಿಯ ಬೆಲೆ ಅಷ್ಟಾಗಿ ಏರಿಲ್ಲ. ಇನ್ನು ಹೆಚ್ಚಾಗಿರುವುದೆಂದರೆ ಕಡಲೆಕಾಯಿ ಎಣ್ಣೆಯ ಬೆಲೆ. ಅದರ ಬೆಲೆ ಮೊದಲು ೮-೩೮ ಇದ್ದರೆ ಮಾರ್ಚ್‌ನಲ್ಲಿ ೧೧-೩೬ ಆಯಿತು. ಅದು ಏತಕ್ಕೆ ಹಾಗಾಯಿತೆಂಬುದು ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ. ಕಡಲೆಕಾಯಿಯನ್ನು ಕರ್ನಾಟಕ, ಆಂಧ್ರ, ತಮಿಳುನಾಡು ಮತ್ತು ಗುಜರಾತ್ ಪ್ರದೇಶಗಳಲ್ಲಿ ಬೆಳೆಯುತ್ತಾರೆ. ಆದರೆ ಗುಜರಾತನ್ನು ಬಿಟ್ಟು ಉಳಿದ ಎಲ್ಲ ಕಡೆಗಳಲ್ಲೂ ಕಡಲೆಕಾಯಿ ಬೆಳೆ ಕಡಿಮೆಯಾದ್ದರಿಂದ ಎಣ್ಣೆಯ ಅಭಾವ ಉಂಟಾಗಿದೆ. ಈ ಎಣ್ಣೆಯ ಅಭಾವವನ್ನು ನಿವಾರಣೆ ಮಾಡುವ ಸಲುವಾಗಿ ಹೊರಗಿನಿಂದ ಎಣ್ಣೆಯನ್ನು ತರಿಸುವ ಅನೇಕ ಯೋಜನೆಗಳನ್ನು ನಾವು ಹಾಕಿಕೊಂಡೆವು. ವ್ಯಾಪಾರಸ್ಥರಿಂದಲೂ ತರಿಸಿದೆವು. ಹೀಗೆ, ಜನರಿಗೆ ಸವಿಸ್ತಾರವಾದ ರೀತಿಯಲ್ಲಿ ಎಣ್ಣೆ ಸಿಗಬೇಕೆಂದು ಮಾಡಿದ್ದರಿಂದ ಗಗನಕ್ಕೆ ಹೋಗುವ ಬೆಲೆಯನ್ನು ಹಿಡಿತದಲ್ಲಿಡಲು ಸಾಧ್ಯವಾಯಿತು. ಒಟ್ಟಿನಲ್ಲಿ ಎಣ್ಣೆಯ ಬೆಲೆ ಕೆ ಜಿ.ಗೆ. ರೂ. ೮-೨೬ಕ್ಕಿಂತಲೂ ಕಡಿಮೆಯಾಗಬೇಕೆಂದು ನನ್ನ ಅಭಿಪ್ರಾಯ. ಅದು ಸೆಪ್ಟೆಂಬರ್‌ವರೆಗೆ ಆಗುವುದಕ್ಕೆ ಸಾಧ್ಯವಿಲ್ಲ. ಆದರೂ ಸಹ ಎಲ್ಲೆಲ್ಲಿ ಎಣ್ಣೆ ಕಾಳುಗಳು ಸಿಗುತ್ತವೆ ಅವುಗಳನ್ನು ಅಲ್ಲಲ್ಲೆ ಫುಡ್ ಕಾರ್ಪೊರೇಷನ್ನಿನವರ ಮೂಲಕ ಸಂಗ್ರಹ ಮಾಡಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹೀಗೆ ಸಂಗ್ರಹಿಸಿದ ಕಡಲೆಕಾಳನ್ನು ಖರ್ಚು ಮಾಡುವಾಗ ವ್ಯಕ್ತಿಗತವಾಗಿ ಖರ್ಚು ಮಾಡುವುದಿಲ್ಲ. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಪ್ರೊಸೆಸಿಂಗ್ ಸೊಸೈಟಿಗಳನ್ನು ಆಯ್ಕೆ ಮಾಡಿ ಅವುಗಳ ಮೂಲಕ ಕಡಲೆಕಾಯಿಯನ್ನು ಖರೀದಿ ಮಾಡಿಸಿ ಆದರಿಂದ ಎಣ್ಣೆಯನ್ನು ತೆಗೆದು ಆ ಎಣ್ಣೆಯನ್ನು ಕೊ ಆಪರೇಟಿವ್ಸ್ ಮುಖಾಂತರ ವಿತರಣೆ ಮಾಡಬೇಕೆಂಬ ಯೋಚನೆ ಮಾಡಿದ್ದೇವೆ. ಖಾಸಗೀ ವ್ಯಾಪಾರಸ್ಥರ ಮೇಲೆ ಎಣ್ಣೆ ಲೆವಿ ಏನು ಹಾಕಿ ಅವರಿಂದ ಎಣ್ಣೆಯನ್ನು ತೆಗೆದುಕೊಂಡು ಹಂಚಿದ್ದು ಆಯಿತು; ಅದು ತಮಗೆ ಗೊತ್ತಿದೆ. ಹೀಗೆಲ್ಲ ಅನೇಕ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಇದರ ಜೊತೆಗೆ ನಾವು ರೈತರಿಂದ ಲೆವಿಯನ್ನು ಸಂಗ್ರಹಿಸುವಾಗ ಅವರಿಗೆ ಹೆಚ್ಚು ಬೆಲೆಯನ್ನು ಕೊಡಬೇಕೆಂಬ ಅಭಿಲಾಷೆ ಕರ್ನಾಟಕ ಸರ್ಕಾರಕ್ಕೆ ಇರುವಷ್ಟು ಬೇರೆ ಯಾರಿಗೂ ಇಲ್ಲ ಎಂದರೆ ತಪ್ಪಾಗಲಾರದು. ಕೇಂದ್ರ ಸರ್ಕಾರದ ಬಾದಲರು ಸಹ ಚುನಾವಣಾ ಪ್ರಣಾಳಿಕೆಯಲ್ಲಿ ನಮೂದಿಸಿದ್ದ ದರವನ್ನು ಜಾರಿಗೆ ತರಬೇಕೆಂದು ಪ್ರಯತ್ನಿಸಿದರು. ಆದರೆ ಆಗಲಿಲ್ಲ ಏಕೆ ಆಗಲಿಲ್ಲ? ಏಕೆಂದರೆ ರೈತರಿಗೆ ಹೆಚ್ಚು ಬೆಲೆಯನ್ನು ಕೊಟ್ಟರೆ ಕನ್‌ಸ್ಯೂಮರ್‌ಗಳಿಗೆ ತೊಂದರೆಯಾಗುತ್ತದೆಂಬ ಪ್ರಶ್ನೆಯನ್ನು ಮಾನ್ಯ ಕೃಷ್ಣನ್‌ರವರಂಥ ಬುದ್ಧಿವಂತರು ತಂದೊಡ್ಡಿದ್ದಾರೆ. ಹಾಗೆಂದರೆ ಅವರು ಪ್ರಯತ್ನ ಮಾಡಿದ್ದಾರೆಂದು ಅಲ್ಲ. ರೈತರಿಗೆ ಹೆಚ್ಚು ಬೆಲೆ ಕೊಟ್ಟರೆ ಕನ್‌ಸ್ಯೂಮರ್‌ಗಳಿಗೆ ಮಾರುಕಟ್ಟೆಯಲ್ಲಿ ಹೆಚ್ಚು ಪರಿಣಾಮವಾಗುತ್ತದೆ. ನಮ್ಮ ಅಧಿಕಾರಿಗಳು ಲೆವಿ ಸ್ಟೇಟ್‌ಮೆಂಟನ್ನು ತಯಾರಿಸುವಾಗ ನಾನು ಹೆಚ್ಚು ಬದಲಾವಣೆ ಮಾಡಲೇ ಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದರೂ ಕೂಡ ನನ್ನ ಪ್ರಯತ್ನ ಸಫಲವಾಗಲಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ ಮತ್ತು ಅದಕ್ಕೆ ಏನು ಶಾಸನ ಮಾಡಿದರೂ ನಾನು ಬದ್ಧನಿದ್ದೇನೆ. ಈ ಸಂದರ್ಭದಲ್ಲಿ ಇಲ್ಲದ ಸಲ್ಲದ ಖರ್ಚನ್ನು ಆಹಾರ ಇಲಾಖೆಯ ಮೇಲೆ ಹಾಕುವ ಸಂಪ್ರದಾಯ ಬಂದಿದೆ. ಈ ಬಗ್ಗೆ ಸದನದ ಸದಸ್ಯರು ಆಲೋಚನೆ ಮಾಡಬೇಕಾಗಿದೆ. ಆಹಾರದ ಬಗ್ಗೆ

ಮಾತನಾಡುವಾಗ ಯಾವ ಮಂತ್ರಿಗಳಾಗಲೀ ಸೂಕ್ತ ಸಲಹೆ ಮಾಡುವ ಅವಶ್ಯಕತೆ ಇದೆ. ಇವತ್ತು ಕಾರ್ಪೊರೇಷನ್ನಿಗೆ ಆಹಾರ ಸರಬರಾಜು ಮಾಡುವ ಜವಾಬ್ದಾರಿಯನ್ನು ಹೊರಿಸಿದ ಮೇಲೆ ಅವರಿಗೆ ಹಣ ವಿಲ್ಲದಿದ್ದರೆ ಅವರು ಎಲ್ಲಿಯಾದರು ಸಾಲವನ್ನು ಪಡೆದು ವ್ಯವಹಾರ ಮಾಡಬೇಕೇ ಹೊರತು ಸರ್ಕಾರವನ್ನು ಅವಲಂಬಿಸಬಾರದೆಂದು ಹೇಳುತ್ತೇನೆ. ಆದರೂ ಸಹ ಕರ್ನಾಟಕ ರಾಜ್ಯ, ಜನತೆಯ ಕಲ್ಯಾಣದ ದೃಷ್ಟಿ ಯಿಂದ ಹೊರಗಿನಿಂದ ಹಣವನ್ನು ಸಾಲವಾಗಿ ಪಡೆದು ಅದು ತನ್ನ ಕಾಲ ಮೇಲೆ ನಿಂತಿದೆ. ಈ ಬಗ್ಗೆ ಅನೇಕ ರೀತಿಯಿಂದ ಸಹಾಯಕರಾದ ಅಧಿಕಾರಗಳನ್ನು ಈ ದಿಸೆಯಲ್ಲಿ ಹೆಚ್ಚು ವ್ಯಾಖ್ಯಾನ ಮಾಡುವ ಹವ್ಯಾಸ ಇಲ್ಲದಿದ್ದರೂ ಸಹ ಅವರು ಮಾಡಿದ ಕಾರ್ಯಕ್ಕೆ ಶ್ಲಾಘನೆ ಮಾಡಬೇಕಾಗಿದೆ. ತಾವು ಹೇಳಲಾರದ ಅನೇಕ ಸಾಮಗ್ರಿಗಳನ್ನು ಸಹ ಇಂದು ನಾಗರೀಕರಿಗೆ ಸರಬರಾಜು ಮಾಡುವ ಅವಶ್ಯಕತೆ ಇದೆ. ಇವತ್ತಿನ ದಿವಸ ಬೇಳೆ ಕಾಳುಗಳ ಬೆಲೆ ಗಗನಕ್ಕೆ ಹೋಗಿದೆ. ಗುಲ್ಬರ್ಗದಲ್ಲಿ ತೊಗರಿ ಬೆಳೆಯುತ್ತಿಲ್ಲ. ಇಂದು ಬೇಳೆ ಕಾಳುಗಳನ್ನು ಬೇರೆ ಕಡೆಗಳಿಂದ ತರಬೇಕಾಗಿದೆ. ಈ ಸಂದರ್ಭದಲ್ಲಿ, ಒಂದು ಕೋಟಿ ರೂಪಾಯಿ ಯನ್ನು ರಿಸರ್ವ್ ಬ್ಯಾಂಕಿನಿಂದ ಪಡೆದು ಕಡಲೆಕಾಯಿಯನ್ನು ಕೊಂಡು ಜನತೆಗೆ ಎಣ್ಣೆಯನ್ನು ಹಂಚ ಬೇಕೆಂದು ಮಾಡಿದ್ದೇವೆ. ಇನ್ನು ಆಹಾರವನ್ನು ಹಂಚುವಿಕೆಯ ವಿಷಯದಲ್ಲಿ ಅನೇಕ ಸದಸ್ಯರು ಸೂಕ್ತ ವಾದ ಸಲಹೆಗಳನ್ನು ಮಾಡಿದ್ದಾರೆ. ಆಹಾರ ಪದಾರ್ಥಗಳನ್ನು ಎಲ್ಲ ಕಡೆಗೂ ಹಂಚಬೇಕು. ಕೇವಲ ಸಕ್ಕರೆಯನ್ನು ಹಂಚಿದರೆ ಸಾಕೇ, ಉಳಿದ ಪದಾರ್ಥಗಳು ಬೇಡವೇ ಎಂಬ ಪ್ರಶ್ನೆ ನಿಜ. ರೇಷನ್ ಡಿಪೋ ಗಳಲ್ಲಿ ಅಕ್ಕಿಯನ್ನು ಕೊಂಡುಕೊಳ್ಳುವಾಗ ಗೋಧಿಯನ್ನು ಪಡೆದರೆ ಮಾತ್ರ ಅಕ್ಕಿಯನ್ನುಕೊಡುತ್ತೇವೆಂದು ಹೇಳುತ್ತಾರೆಂದು ಮಾನ್ಯ ಸದಸ್ಯರು ಹೇಳಿದರು.

ಜನರು ನಿಯಂತ್ರಣದಿಂದ ದೂರ ಇರಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ಮಾನ್ಯ ಕೃಷ್ಣನ್ ಅವರು ಸಲಹೆ ಮಾಡಿದ್ದನ್ನು ಒಪ್ಪಿಕೊಂಡಿದೆ. ನಾವು ಲೆವಿಯನ್ನೂ ಬಿಡುವುದಿಲ್ಲ, ಡಿಸ್ಟ್ರಿಬ್ಯೂಷನ್ ಸಿಸ್ಟಂನ್ನೂ ಬಿಡುವುದಿಲ್ಲ. ಎಲ್ಲಿಯವರೆಗೆ ಸಮಾಜವಾದಿ ಸ್ವರೂಪವನ್ನು ನಾವು ತಳೆಯುತ್ತೇವೆಯೋ ಅಲ್ಲಿಯವರೆಗೆ ಡಿಸ್ಟ್ರಿಬ್ಯೂಷನ್ ಸಿಸ್ಟಂ ಯೋಗ್ಯವಾಗಿ ಆಗಬೇಕಾಗಿದೆ. ಇದಕ್ಕೆ ಪ್ರಕ್ಯೂರ್‌ಮೆಂಟ್ ಆಫ್ ಫುಡ್‌ಗ್ರೇನ್ಸ್ ಅವಶ್ಯಕ, ಕೆಲವು ಭಾಗದ ರೈತರಿಗೆ ಇದರಿಂದ ತೊಂದರೆ ಆಗಬಹುದು. ಆದರೆ ರಾಜ್ಯದ ಹಿತದೃಷ್ಟಿಯಿಂದ ಅವರೂ ಇದನ್ನು ಸಹಿಸಬೇಕು ಎಂದು ನಾನು ಮನವಿ ಮಾಡುತ್ತೇನೆ. ಈ ದಿಸೆಯಲ್ಲಿ ಮಾನ್ಯ ಸದಸ್ಯರುಗಳು ಕೊಟ್ಟ ಸಲಹೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಕಡ್ಡಾಯವಾಗಿ ನಾವು ಯಾವ ಒಂದು ವಸ್ತುವನ್ನು ಹಂಚುವುದರಿಂದ ಜನರು ತಮ್ಮ ಸ್ವಾತಂತ್ರ್ಯತೆಯನ್ನು ಕಳೆದುಕೊಳ್ಳುತ್ತಾರೆ. ಆದರೆ ನಾವು ಇಂಥ ಯಾವ ಒಂದು ಹವ್ಯಾಸಕ್ಕೆ ಹೋಗಿಲ್ಲ ರಾಜ್ಯ ಸರ್ಕಾರ ದಲ್ಲಿ ಹೇರಳವಾಗಿ ಆಹಾರ ಸಾಮಗ್ರಿ ಇದೆ. ಜೋಳ ಇಲ್ಲದಿರಬಹುದು, ರಾಗಿ ಇಲ್ಲದಿರಬಹುದು, ಆದರೆ ಯಾವುದು ಒಂದು ವಸ್ತು ಬೇಕಾಗಿತ್ತೋ ಅದು ಎಲ್ಲಾ ಕಾಲದಲ್ಲಿಯೂ ಸಿಕ್ಕದೇ ಇರಬಹುದು, ಆದರೆ ಸಿಕ್ಕುವಂಥ ವಸ್ತುಗಳನ್ನು ಉಪಯೋಗಮಾಡಿಕೊಳ್ಳುವಂಥ ಕ್ರಮವನ್ನು ನಾವುಗಳು ಅನುಸರಿಸುವುದು ಅನಿವಾರ್ಯವಾಗಿದೆ. ಅಕ್ಕಿ ಸಂಗ್ರಹಣೆ ನಮ್ಮಲ್ಲಿ ಸಾಕಷ್ಟು ಇದೆ. ಗೋಧಿ ಕೇಂದ್ರ ಸರ್ಕಾರದವರ ಸಹಾಯದಿಂದ ಸಾಕಷ್ಟು ಇದೆ. ಕೆಂಪು ಜೋಳವೂ ನಮ್ಮಲ್ಲಿ ಸಾಕಷ್ಟು ಇದೆ. ಕೆಂಪು ಜೋಳ ನಮ್ಮ ಕಡೆ ಹೇರಳವಾಗಿ ಉಪಯೋಗವಾಗುತ್ತದೆ. ಕೆಲವರು ರಾಗಿ ಅಕ್ಕಿಯನ್ನು ತಿನ್ನುತ್ತಾರೆ. ಹೆಚ್ಚಾಗಿ ರಾಗಿ ಬೇಕು ಎಂದರೆ ಪುರವಟಿ ಮಾಡುವುದು ಸಾಧ್ಯವಾಗುವುದಿಲ್ಲ. ಕೋಲಾರ ಜಿಲ್ಲೆಗೆ ಕೆಂಪು ಜೋಳ ಕಳುಹಿಸಿದರೂ ಉಪಯೋಗ ಮಾಡುತ್ತಿರಲಿಲ್ಲ ; ಈಗ ತುಮಕೂರು ಜಿಲ್ಲೆಯಲ್ಲಿ ಅದನ್ನು ಹೆಚ್ಚಾಗಿ ಉಪ ಯೋಗ ಮಾಡುವ ಅಭಿಲಾಷೆಯನ್ನು ಅವರು ವ್ಯಕ್ತ ಮಾಡುತ್ತಿದ್ದಾರೆ. ಅವರು ಸಮಯ ಸಂದರ್ಭ ಗಳಿಗನುಸಾರವಾಗಿ ಇನ್ನಷ್ಟು ಕೆಂಪು ಜೋಳ ಕೊಡಿ ಎಂದು ಕೇಳುತ್ತಿದ್ದಾರೆ. ಇಂಥ ಆಲೋಚನೆ ಎಲ್ಲಾ ಕಡೆಗೂ ಬರಬೇಕು. ಆಹಾರ ಸಮಸ್ಯೆಯನ್ನು ನಾವು ಎದುರಿಸಬೇಕಾದರೆ, ಒಂದು ಭಾಗದ ಜನರು ಒಂದೇ ರೀತಿಯ ಆಹಾರಕ್ಕೆ ಅಂಟಿಕೊಳ್ಳದೆ ರಾಜ್ಯದಲ್ಲಿ ಸಿಕ್ಕುವ ಎಲ್ಲಾ ಆಹಾರವನ್ನೂ ತಮಗೆ ಬೇಕಾದ ಹಾಗೆ ರುಚಿಕರವಾಗಿ ಉಪಯೋಗಮಾಡಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು.

ಶ್ರೀ ಎಂ ಎಸ್. ಕೃಷ್ಣನ್.—ಹಿಂದೆ ಫೇಂಡಾ ಸಿಂಗ್ ಎಂಬ ಮಂತ್ರಿಗಳು ಇದ್ದರು. ಆಹಾರ ಧಾನ್ಯ ಸಿಕ್ಕದಿದ್ದರೆ ಬೇರೆ ಏನನ್ನೋ ತಿನ್ನುವುದನ್ನು ಕಲಿಯಿರಿ ಎಂದು ಹೇಳುತ್ತಿದ್ದರು.

ಶ್ರೀ ಕೆ.ಎಚ್. ಪಾಟೀಲ್:—ನಮ್ಮ ಕರ್ನಾಟಕದಲ್ಲಿ ಅಂಥ ಪರಿಸ್ಥಿತಿ ಇಲ್ಲ ಕರ್ನಾಟಕದಲ್ಲಿ ವಿಶೇಷ ನೈಸರ್ಗಿಕ ಸಂಪತ್ತು ಇದೆ. ಒಂದು ಕಡೆ ಬರ ಬಂದರೆ ಇನ್ನೊಂದು ಕಡೆ ಹೆಚ್ಚಾಗಿ ಧಾನ್ಯಗಳನ್ನು ಬೆಳೆ ಯುತ್ತಿದ್ದಾರೆ ; ಮತ್ತು ಬೆಳೆದು ಕೊಡುತ್ತೇವೆ ಎಂದು ಎದೆ ತಟ್ಟಿ ಹೇಳುವಂಥ ರೈತರು ನಮ್ಮಲ್ಲಿದ್ದಾರೆ.

ಆದಕ್ಕಾಗಿ ನಾವು ಇದ್ದ ಆಹಾರವನ್ನು ಬಹಳ ಮಟ್ಟಿಗೆ ಬಳಸೋಣ. ಇವತ್ತಿನ ದಿವಸ ಆಹಾರ ಸಂಗ್ರಹಣೆ ವಿಷಯದಲ್ಲಿ ಹೆಚ್ಚು ಸೂಕ್ತವಾದ ಸಲಹೆಗಳನ್ನು ಅನೇಕ ಸದಸ್ಯರು ಹೇಳಿದಾರೆ. ನಮ್ಮ ಸಂಗ್ರಹಣೆ ಕಾಗದದಲ್ಲಿ ಹೆಚ್ಚು ಕಾಣುತ್ತದೆ, ನಿಜವಾಗಿ ಅಷ್ಟು ಇದೆಯೋ ಇಲ್ಲವೋ ಎನ್ನುವ ಶಂಕೆಯನ್ನು ಮಾನ್ಯ ಸದಸ್ಯರು ವ್ಯಕ್ತ ಮಾಡುವುದಕ್ಕೆ ಮೊದಲೇ ನಾನು ಇರುವುದನ್ನು ಅನೇಕ ರೀತಿಯಿಂದ ಎನ್‌ಕ್ವಯರಿ ಮಾಡಿಸಿದ್ದೇನೆ. ಅದರಿಂದ ಸ್ಟಾಕ್ ಸರಿಯಾಗಿದೆ ಎನ್ನುವುದು ಗೊತ್ತಾಗಿದೆ. ಆದರೆ ಇದು ನೂರಕ್ಕೆ ನೂರರಷ್ಟು ಸತ್ಯ ಎಂದು ಹೇಳುವುದಕ್ಕೆ ನಾನು ಹೋಗುವುದಿಲ್ಲ. ಮಾನ್ಯ ಸದಸ್ಯರಿಗೆ ನಮ್ಮ ಆಹಾರ ಸಂಗ್ರಹಣೆ ವಿಷಯದಲ್ಲಿ ಅಪನಂಬಿಕೆ ಕಂಡುಬಂದರೆ, ಎಲ್ಲಾ ದಾಖಲೆಗಳನ್ನು ಸರಿಯಾಗಿ ಉಪಯೋಗ ಮಾಡಿ ವರದಿಯನ್ನು ಸದನದ ಮುಂದೆ ಇಡುವುದಕ್ಕೆ ಇಷ್ಟಪಡುತ್ತೇನೆ. ಆದರೆ ಮಾನ್ಯ ಸದಸ್ಯರುಗಳೂ ನಮ್ಮ ಸಂಕಷ್ಟವನ್ನು ಅರಿಯಬೇಕು. ಆಹಾರ ಇಲಾಖೆಯ ಕೆಲಸಗಳೂ ಹೆಚ್ಚಿವೆ. ನಮಗೆ ಅಭಾವವಾಗಿರುವುದು ಗೋಡೌನುಗಳು. ಶಿವಮೊಗ್ಗದಲ್ಲಿ ತಯಾರಾದಂಥ ಎರಡು ಗೋಡೌನುಗಳು ನಮ್ಮಲ್ಲಿವೆ. ಆದರೆ ಇದಕ್ಕಾಗಿ ನಾವು ಎರಡನೆಯವರನ್ನು ಹೆಚ್ಚು ನಂಬಬೇಕಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಸರ್ಕಾರೀ ಗೋಡೌನುಗಳನ್ನು ಬೇರೆಯವರಿಗೆ ಬಾಡಿಗೆ ಕೊಟ್ಟಿದ್ದಾರೆ.

ಶ್ರೀ ಕೆ ಎಚ್. ಪಾಟೀಲ್.—ನಾನು ಅದನ್ನು ಸರಿ ಎಂದು ಹೇಳುವುದಿಲ್ಲ. ಕೋ-ಅಪರೇಟಿವ್ ಸೊಸೈಟಿಯವರಿಗೆ ಸ್ಟಾಕನ್ನು ಇಡಲು ಸ್ಥಳ ಇಲ್ಲ ಎಂದು ತಿಳಿದು ಕೆಲವು ಸಂದರ್ಭಗಳಲ್ಲಿ ಗೋಡೌನುಗಳನ್ನು ಟೆಂಪರರಿ ಉಪಯೋಗ ಮಾಡಿದ್ದಾರೆ. ಇದನ್ನೂ ಕೂಡ ನಾನು ಒಪ್ಪುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಲ್ಲಿರತಕ್ಕ ಗೋಡೌನುಗಳು ಸರ್ಕಾರದಿಂದಲೇ ಉಪಯೋಗವಾಗಬೇಕು. ಈ ದೃಷ್ಟಿಯಿಂದ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳ ನಮ್ಮ ಏಜೆನ್ಸಿಯವರು ಎಲ್ಲೆಲ್ಲಿ ಮುಂದೆ ಬರುತ್ತಾರೋ ಅಲ್ಲಿ ಗೌಡನುಗಳನ್ನು ಕೊಟ್ಟಿದ್ದೇವೆ.

ಆಹಾರ ವಿತರಣೆಯ ವಿಷಯದಲ್ಲಿ ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ವ್ಯಕ್ತಿಗತವಾಗಿ ಆಹಾರ ಧಾನ್ಯವನ್ನು ಹಂಚುವುದಕ್ಕೆ ಅವಕಾಶವಿಲ್ಲ. ವ್ಯಕ್ತಿಗತವಾಗಿ ಆಹಾರ ಧಾನ್ಯವನ್ನು ಕೊಡುವ ಉದ್ದೇಶ ಸರ್ಕಾರಕ್ಕಿಲ್ಲ. ಈಗಾಗಲೇ ಸರ್ಕಾರದವರು ಹೊರಡಿಸಿರುವಂಥ ಆಜ್ಞೆಯನ್ನು ತಾವುಗಳು ನೋಡಿರಬಹುದು. ಮೊದಲನೆಯದಾಗಿ, ನಾವು ಕೋ-ಅಪರೇಟೀವ್ ಸೊಸೈಟಿಗಳವರಿಗೆ ಪ್ರಾಶಸ್ತ್ಯ ಕೊಡುತ್ತೇವೆ ಕೋ-ಅಪರೇಟಿವ್ ಸೊಸೈಟಿಗಳವರು ಮುಂದೆ ಬರಲು ಸಾಧ್ಯವಿಲ್ಲದಾಗ ಅನಿವಾರ್ಯವಾಗಿ ನಮ್ಮ ರಿಜಿಸ್ಟ್ರಾರ್ ಅವರು ವಿಲೇಜ್ ಪಂಚಾಯತಿಯವರಿಗೆ ಕೊಡುವಂತೆ ತಿಳಿಸಿದ್ದಾರೆ. ಅವರು ಮುಂದೆ ಬರುವುದಿಲ್ಲ ಎಂದರೆ, ಯಾವುದಾದರೂ ಗ್ರೂಪ್ ಆಫ್ ಪರ್ಸನ್ಸ್‌ಗೆ ಮತ್ತು ರಿಜಿಸ್ಟರ್ಡ್ ಅಸೋಸಿಯೇಷನ್ಸ್‌ಗೆ ಕೊಡಬೇಕು ಎಂದು ಹೇಳಿದ್ದಾರೆ ಅವರೂ ಇವಕ್ಕೆ ಮುಂದೆ ಬರದಿದ್ದರೆ ಅಂಥ ಪ್ರಸಂಗದಲ್ಲಿ ಇಂಡಿವಿಜುಯಲ್ಸ್‌ಗೆ ಕೊಡಬೇಕು ಎನ್ನುವುದು ಇದೆ ನಾವು ಯಾವ ಕಾನೂನನ್ನಾಗಲೀ ಬದಲಾವಣೆ ಮಾಡುವಂಥ ಅಧಿಕಾರವನ್ನು ಈಗ ಹಾಕಿಕೊಂಡಿರತಕ್ಕ ಪಾಲಿಸಿಯಲ್ಲಿ ಇಟ್ಟುಕೊಂಡಿಲ್ಲ. ಮೊದಲಿನಿಂದಲೂ ಬಂದಂಥ ಇಂಡಿವಿಜುಯಲ್ಸ್ ಕೆಲವರು ಇದ್ದಾರೆ ಇವರು ೧೯೬೭ರಿಂದಲೂ ಬಂದಿದ್ದಾರೆ ಇವರಲ್ಲಿ ಕೆಲವರನ್ನು ನಾವು ತೆಗೆದು ಬಿಟ್ಟಿದ್ದೆವು. ಅವರು ಹೈಕೋರ್ಟಿಗೆ ಅಪೀಲು ಹೋದರು. ಪುನ: ಅವರಿಗೆ ವಿತರಣೆಯನ್ನು ಕೊಡಬೇಕು ಎಂದು ಹೈಕೋರ್ಟಿನವರ ವಾದವಾಗಿದೆ ಹೀಗಾದರೆ ನಾವು ಏನು ಮಾಡಬೇಕು ಎಂದು ನಾನು ಸೌಜನ್ಯದಿಂದ ಮಾನ್ಯ ಸದಸ್ಯರನ್ನು ಕೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ನಮ್ಮ ಸ್ನೇಹಿತರು ಎಲ್ಲರೂ ಸಂಗ್ರಹಣೆ ವಿಷಯದಲ್ಲಿ ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಪ್ರಕ್ಯೂರ್‌ಮೆಂಟ್‌ನ್ನು ಬಂದ್ ಮಾಡುವಂಥ ಉದ್ದೇಶ ಸರ್ಕಾರಕ್ಕೆ ಇಲ್ಲ. ಮಾನ್ಯ ತಿಮ್ಮಪ್ಪನವರು ಮಾತನಾಡುತ್ತಾ ಬಹಳ ಉಗ್ರವಾಗಿ ಇವತ್ತಿನ ದಿವಸ ಲೆವಿ ಪ್ರೆಕ್ಯೂರ್‌ಮೆಂಟ್ ಮಾಡಲಿಕ್ಕೆ ಹತ್ತಿದ್ದಾರೆ ಎಂದು ಹೇಳಿದರು. ಎಲ್ಲಿ ಕಾಳುಕಡಿಗಳು ಇಲ್ಲ ಎಲ್ಲಿ ಬರಗಾಲ ಇದೆ ಅಂಥಾಕಡೆ ತೊಂದರೆ ಕೊಟ್ಟು ಕಾಳು ತೆಗೆದುಕೊಳ್ಳುವುದರ ಸಲುವಾಗಿ ಖಟ್ಲೆ ಹಾಕಲಿಕ್ಕೆ ಹೋಗಬೇಡ್ರಿ ಎಂದು ನಾವು ಹೇಳಿದ್ದೇವೆ ನೀರಾವರಿ ಯೋಜನೆಯಿಂದ ಆಹಾರಧಾನ್ಯ ಬೆಳೆಯತಕ್ಕ ಕಡೆ ಲೆವಿಯನ್ನು ಬಂದ್ ಮಾಡಬೇಕು ಎಂದಲ್ಲ. ವಿತರಣೆ ಮಾಡುವಾಗ ಕೆಳಗಿನ ಅಧಿಕಾರಿಗಳು, ಜನತೆಯ ಹತ್ತಿರ ಇರತಕ್ಕ ಅಧಿಕಾರಿಗಳು ಅವರ ಅಭಿಪ್ರಾಯವನ್ನು ಬದಲಾವಣೆ ಮಾಡಿಕೊಂಡ ಕೆಲಸ ಮಾಡುವುದರಿಂದ ಕೆಲವು ಕಡೆ ವಿಪರ್ಯಾಸವಾಗುತ್ತದೆ ಶ್ರೀಮಾನ್ ತಿಮ್ಮಪ್ಪನವರು ಗಮನ ಕೊಡಲೆಂದು ೧೫ನೇ ಮೇ ೧೯೭೭ರಲ್ಲಿ ಕೊಟ್ಟ ಆಜ್ಞೆಯ ಒಂದೇ ಒಂದು ವಾಕ್ಯವನ್ನು ನಾನು ಇಲ್ಲಿ ಓದುತ್ತೇನೆ.

Necessary Steps may Kindly be taken for procurement of paddy without causing any harrasment during the procurement period ಇದು ಒಂದು ಸರ್ಕ್ಯುಲರ್, ಇದಕ್ಕಿಂತ ಹೆಚ್ಚನ್ನು ನಾವು ಏನನ್ನೂ ಹೇಳಿಲ್ಲ. ಇವತ್ತು ಜನರು ಲೆವಿ ಕೊಡಲಿಲ್ಲ ಎಂದರೆ ನಮ್ಮಲ್ಲಿ ಕಾಳು ಇರುವುದಿಲ್ಲ. ಲೆವಿಯನ್ನು ಬಂದ್ ಮಾಡಿ ಎಂದು ಒಂದು ಹೊಸ ಪರಂಪರೆಯನ್ನು ಹಾಕಿದರೆ ನಮ್ಮದೇನೂ ಇಲ್ಲ. ಆದರೆ ಮುಂದೆ ಆಹಾರ ಸಾಮಗ್ರಿಗಳನ್ನು ಒದಗಿಸುವುದು ತೊಂದರೆಯಾಗುತ್ತದೆ. ಆಹಾರ ಧಾನ್ಯವನ್ನು ಹೆಚ್ಚು ಹೆಚ್ಚಾಗಿ ರೈತರು ಬೆಳೆಯಬೇಕು ಎಂದು ನಾನು ಆಶೆ ಮಾಡುತ್ತೇನೆ. ಆದರೆ ನಮಗೆ ಏನಾಗುತ್ತದೆಂದರೆ, ರೈಸ್ ಮಿಲ್ ಆಕ್ಟ್ ಪ್ರಕಾರ ಅಕ್ಕಿಯನ್ನು ೫೦ ಪರ್ಸೆಂಟ್‌ಗಿಂತ ಹೆಚ್ಚು ಪಾಲಿಷ್ ಮಾಡಲಿಕ್ಕೆ ಬರುವುದಿಲ್ಲ ಎನ್ನುವ ನಿಯಮ ಇರುತ್ತದೆ. ಇದರಿಂದ ನಮ್ಮ ಅಕ್ಕಿ ಕೆಂಪಾಗಿಯೆ ಉಳಿಯುತ್ತದೆ. ಕಾನೂನು ಮೀರಿ ನಡೆಯುವವರ ಅಕ್ಕಿ ಬಿಳಿ ಆಗುತ್ತದೆ. ಈ ನಿಯಮ ಬದಲಾವಣೆಗೆ ಕೇಂದ್ರ ಸರ್ಕಾರಕ್ಕೆ ನಾವು ಬರೆಯಬೇಕಾಗಿದೆ, ಮಾನ್ಯ ಸ್ನೇಹಿತರು ಎಲ್ಲರೂ ಸೇರಿ ಇದಕ್ಕೆ ಒತ್ತಾಯ ಮಾಡಬೇಕು ಮತ್ತು ಎಲ್ಲರಿಗೂ ಒಂದೇ ತರಹದ ಅಕ್ಕಿಯನ್ನು ಪಡೆಯಲಿಕ್ಕೆ ಅನುಕೂಲ ಮಾಡಲಿ ಎಂದು ನಾನು ಆಶೆ ಮಾಡುತ್ತೇನೆ.

೬–೩೦ ಪಿ. ಎಂ.

ಅಧ್ಯಕ್ಷರೇ, ಇನ್ನು ಮುಂದೆ ಅರಣ್ಯ ಇಲಾಖೆ ವಿಷಯವಾಗಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಷ್ಟ ಪಡುತ್ತೇನೆ ಈ ಅರಣ್ಯದ ಬಗ್ಗೆ ನನಗಿಂತಲೂ ಹೆಚ್ಚು ಆಸಕ್ತಿ ಇರತಕ್ಕ ಬಹಳ ಜನ ಸದಸ್ಯರು ಈ ಮನೆಯಲ್ಲಿ ಇದ್ದಾರೆ. ಇವೊತ್ತಿನ ದಿವಸ ನಾವು ನಮ್ಮ ಪುಸ್ತಕದಲ್ಲಿರತಕ್ಕ ಅಂಕಿಅಂಶಗಳನ್ನು ನೋಡುವುದಾದರೆ, ಸುಮಾರು ೨೮ ಲಕ್ಷದ ೯೪ ಸಾವಿರದ ೭೯೮ ಹೆಕ್ಟೇರ್ಸ್ ಫಾರೆಸ್ಟ್ ಇದೆ. ಇದೆಲ್ಲಾ ರಿಸರ್ವ್ ಫಾರೆಸ್ಟ್ ಅಲ್ಲ, ಇದರಲ್ಲಿ ಗುಡ್ಡ, ಹಳ್ಳ, ಹೊಳೆಗಳು ಎಲ್ಲಾ ಬರುತ್ತದೆ ಇದೆಲ್ಲಾ ಕೂಡ ೧೫.೨ ಪರ್ಸೆಂಟ್ ಇದೆ. ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರಾಗಲಿ, ಮಾನ್ಯ ಸದಸ್ಯರಾದ ಕೋಣಂದೂರು ಲಿಂಗಪ್ಪನವರಾಗಲಿ, ಮಾನ್ಯ ಸದಸ್ಯರಾದ ಶೀರನಾಳಿ ಚಂದ್ರಶೇಖರ್‌ರವರಾಗಲಿ, ಇಲ್ಲಿ ಇಲ್ಲದೇ ಇರತಕ್ಕಂತಹ ಮಾನ್ಯಸದಸ್ಯರಾದ ಬಂಗಾರಪ್ಪನವರಾಗಲಿ, ಇದರ ಬಗ್ಗೆ ಸ್ವಲ್ಪ ಅಭ್ಯಾಸ ಮಾಡಿ ನೋಡಿದರೆ ಹಿಂದಿಗೂ ಮತ್ತು ಇಂದಿಗೂ ನಮ್ಮ ಕರ್ನಾಟಕದಲ್ಲಿ ಫಾರೆಸ್ಟ್ ಯಾವ ರೀತಿ ಇದೆ ಎಂದು ಗೊತ್ತಾಗುತ್ತದೆ ಈ ಫಾರೆಸ್ಟ್ ಯಾರಿಗೂ ಕೊಟ್ಟರೂ ನನಗೆ ಏನೂ ಆಗುವುದಿಲ್ಲ, ನಮ್ಮ ಮತದಾರರ ಕ್ಷೇತ್ರಕ್ಕೆ ಹಾನಿಯಾಗುವುದಿಲ್ಲ. ಬೆಲ್ಲದ ನೈವೇದ್ಯ ಮಾಡಿ ಬೆಲ್ಲದ ಗಣಪನಿಗೆ ಸೇರಿಸಿ ಫಲ ಪಡೆಯಬಹುದು. ಆದರೆ ಮಾನ್ಯಸದಸ್ಯರು ಏನು ಬೈದರು ಪರವಾಯಿಲ್ಲ. ದೇಶದ ಕಲ್ಯಾಣವಾಗಬೇಕು ಎನ್ನುವುದೇ ನನ್ನ ಉದ್ದೇಶ. ಇವೊತ್ತು ಮಾನ್ಯ ಸದಸ್ಯರನೇಕರು ಜಮೀನಿನ ವಿತರಣೆ ಬಗ್ಗೆ ಹೇಳಿದ್ದಾರೆ. ಈ ವಿಷಯದ ಬಗ್ಗೆ ಎರಡು ಸಾರಿ ಜಮೀನುಗಳ ವಿತರಣೆಯಾಗಿ ರೆಗ್ಯುಲರೈಸ್ ಮಾಡಿದ್ದಾರೆ. ೧೯೬೮ ನಂತರ ೧೯೭೨ ಅಥವಾ ೧೯೭೪ರಲ್ಲಿ ರೆಗ್ಯುಲರೈಸ್ ಆಗಿದೆ. ಈ ರೀತಿ ರೆಗ್ಯುಲರೈಸ್ ಆದಮೇಲೆ ಶ್ರೀಮಾನ್ ಬಂಗಾರಪ್ಪನವರು ಹೇಳಿದಂತೆ ಮಿಸ್ಯೂಸ್ ಆಗಿದ್ದು ಮತ್ತೆ ಅದನ್ನು ಫರಪೀಟ್ ಮಾಡಿದ್ದಾಯಿತು ಹಿಂದಿನವರು ಮಾಡಿದ್ದನ್ನು ಮತ್ತೆ ಕ್ಯಾನ್ಸಲ್ ಮಾಡುವುದು ಈ ರೀತಿಯಾದ ಒಂದು ದುರಭ್ಯಾಸ ಬೆಳೆದುಬಂದಿದೆ. ಇದರ ಬಗ್ಗೆ ನಾವು ಮತ್ತು ಮಾನ್ಯಸದಸ್ಯರಾದ ನೀವು ಕೂಡಿ ಮಾತನಾಡೋಣ. ಇವೊತ್ತು ಒಬ್ಬ ಮನುಷ್ಯನಿಗೆ ಯಾವುದಾದರೂ ಉದ್ಯೋಗ ಕೊಟ್ಟು ಬೆಳೆಸಬಹುದು ಆದರೆ ಅರಣ್ಯ ಸಂಪತ್ತನ್ನು ಬೆಳೆಸುವುದು ಬಹಳ ಕಷ್ಟ ಒಂದೊಂದು ಸಾರಿ ಅರಣ್ಯ ಸಂಪತ್ತಿನ ಬಗ್ಗೆ ನೆನೆಸಿಕೊಂಡರೆ ಮನಸ್ಸಿನಲ್ಲಿ ಬಹಳ ವ್ಯಥೆಯಾಗುತ್ತದೆ.

ಇವೊತ್ತು ಮರಗಳನ್ನು ಕಡಿಯುವುದರಿಂದ ಫಾರೆಸ್ಟ್ ಹಾಳಾಗುತ್ತದೆ ಎಂದು ಹೇಳತಕ್ಕದ್ದು ಸರಿಯಲ್ಲ. ಇವು ಒಟ್ಟು ಟೋಟಲ್ ಏರಿಯಾ ಎಷ್ಟು ಕಟ್ ಆಗುತ್ತದೆ, ಎಷ್ಟು ಪ್ಲಾನ್‌ಟೆಡ್ ಆಗುತ್ತದೆ ಎನ್ನುವುದನ್ನು ನೋಡಬೇಕು. ಪ್ರತಿವರ್ಷ ಆ್ಯನ್ಯುಯಲ್ ಪ್ಲಾನ್ ಪ್ರಕಾರ ೧೦ ಸಾವಿರದ ೧೦೦ ಹೆಕ್ಟೇರ್ಸ್ ಟೋಟಲ್ ಏರಿಯಾ ಕಟ್ ಆಗುತ್ತದೆ. ಇನ್ನು ಪ್ಲಾನ್‌ಟೆಡ್ ಎಷ್ಟಾಗುತ್ತದೆ ಎಂದರೆ ೪,೦೫೨ ಹೆಕ್ಟೇರ್ಸ್ ಟೀಕ್ ವುಡ್ ಬೆಳೆಯುತ್ತದೆ, ೩,೩೦೦ ಹೆಕ್ಟೇರ್ಸ್ ಸಾಫ್ಟ್ ವುಡ್ ಬೆಳೆಯುತ್ತದೆ, ಇನ್ನು ಉಳಿದ ಪ್ಲಾನ್‌ಟೆಡ್ ೨,೭೫೦ ಹೆಕ್ಟೇರ್ಸ್, ಅನಂತರ ಇದು ಅಲ್ಲದೇ ಬೇರೆ ಫಾರೆಸ್ಟ್ ವರ್ಷೇ ವರ್ಷೇ ಹೆಚ್ಚು ಮಾಡುತ್ತಾ ಪ್ರತಿ ವರ್ಷ ೨೨,೯೦೦ ಹೆಕ್ಟೇರ್ಸ್ ಅಷ್ಟು ಬೆಳೆಸುತ್ತಿದ್ದೇವೆ. ಇದರಿಂದ ನಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟಿನಲ್ಲಿ ಇರತಕ್ಕ ಒಂದು ಸತ್ಯ ಗೊತ್ತಾಗುತ್ತದೆ. ಕೆಲವು ಕಡೆ ಲೋಪದೋಷಗಳು ಇರಬಹುದು, ನಮ್ಮ

ಅಧಿಕಾರಿಗಳು ಮಾಡತಕ್ಕ ತಪ್ಪುಗಳನ್ನು ತೋರಿಸಿಕೊಟ್ಟರೆ, ಆ ತಪ್ಪುಗಳನು ತಿದ್ದಿ, ಅರಣ್ಯ ಸಂಪತ್ತನ್ನು ಹೆಚ್ಚು ಬೆಳೆಸಲಿಕ್ಕೆ ಅನುಕೂಲವಾಗುತ್ತದೆ. ನಮ್ಮ ಕರ್ನಾಟಕ ರಾಜ್ಯದ ಫಾರೆಸ್ಟ್ ಇಲಾಖೆಯಲ್ಲಿ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ ಎಂದರೆ ತಾವು ಒಪ್ಪಲಿಕ್ಕಿಲ್ಲ. ಆದರೆ ಇದರ ಬಗ್ಗೆ ಅಖಿಲ ಭಾರತ ಮಟ್ಟದಲ್ಲಿ ಎಲ್ಲರೂ ಒಪ್ಪುತ್ತಾರೆ ನಮ್ಮ ಫಾರೆಸ್ಟ್ ಇಲಾಖೆಯಲ್ಲಿರತಕ್ಕ ಅಧಿಕಾರಿಗಳನ್ನು ಬಿಟ್ಟುಕೊಡಿ ಎಂದು ಮೇಲಿಂದ ಮೇಲೆ ಸೆಂಟ್ರಲ್ ಗೌರ್ನ್‌ಮೆಂಟ್‌ನವರು ಕೇಳುತ್ತಿದ್ದರು. ಅಂತಹ ಅಧಿಕಾರಿಗಳು ನಮ್ಮ ಫಾರೆಸ್ಟ್ ಇಲಾಖೆಯಲ್ಲಿ ಇದ್ದಾರೆ ಇವೊತ್ತು ನಮ್ಮಲ್ಲಿ ಚಲೋ ಅಧಿಕಾರಿಗಳು ಇದ್ದಾರೆ. ಇನ್ನು ಕೆಲವರು ಕಡಿಮೆ ಅಧಿಕಾರಿಗಳು ಇದ್ದಾರೆ. ಆದರೆ ಇಬ್ಬರನ್ನು ತಾವು ಒಂದೇ ರೀತಿಯಲ್ಲಿ ನೋಡಿದರೆ ನ್ಯಾಯವನ್ನು ಕಾಪಾಡಿದಂತೆ ಆಗುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ಈ ಸಂದರ್ಭದಲ್ಲಿ ತರುವುದಕ್ಕೆ ಇಷ್ಟ ಪಡುತ್ತೇನೆ. ತಪ್ಪು ಮಾಡುವಂತ ಅಧಿಕಾರಿಗಳಿಗೆ ಶಿಕ್ಷೆ ಕೊಡೋಣ, ಹಾಗೆ ಸರಿಯಾದಂತ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡೋಣ. ಈ ಬಗ್ಗೆ ನಾವು, ನೀವು ಕೂಡಿ ಅರಣ್ಯ ಸಂಪತ್ತನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡಬೇಕು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಒಬ್ಬ ಸದಸ್ಯರು.—ಸ್ವಾಮಿ, ತಾವು ರೆಕಾರ್ಡ್ ನೋಡಿಕೊಂಡು ನಮ್ಮಲ್ಲಿ ಇಷ್ಟು ಅಡವಿ ಇದೆ ಎಂದು ಹೇಳುವುದು ಸರಿಯಲ್ಲ, ಇದರ ಬಗ್ಗೆ ಒಂದು ಸಮಿತಿ ಮಾಡಿ, ನಮ್ಮಲ್ಲಿ ಅಷ್ಟು ಅಡವಿ ಇದೆಯೋ ಇಲ್ಲವೋ ಎನ್ನುವುದನ್ನು ಪರಿಶೀಲನೆ ಮಾಡಿನೋಡಿದರೆ ಆಗ ಎಷ್ಟು ಅಡವಿ ನಮ್ಮಲ್ಲಿ ಇದೆ ಎಂದು ಗೊತ್ತಾಗುತ್ತದೆ. ತಾವು ಆಫೀಸರ್ಸ್ ಕೊಟ್ಟಂತಹ ಅಂಕಿಸಂಖ್ಯೆಗಳನ್ನು ಹೇಳುವುದಾದರೆ, ನನಗೆ ತಿಳಿದ ಪ್ರಕಾರ ನಮ್ಮಲ್ಲಿ ಅಷ್ಟು ಅಡವಿ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಕೆ ಹೆಚ್. ಪಾಟೀಲ್.— ಮಾನ್ಯ ಸದಸ್ಯರು ಹೇಳಿದಂತೆ ಒಂದು ನಾನ್ ಅಫೀಷಿಯಲ್ ಸಮಿತಿ ಮಾಡೋಣ. ಮತ್ತೆ ಈ ಅರಣ್ಯವನ್ನು ಹೇಗೆ ಬೆಳೆಸಬೇಕು ಎನ್ನುವ ಬಗ್ಗೆ ಎರಡೂ ಸದಸ್ಯರನ್ನೊಳಗೊಂಡಂತೆ ಒಂದು ಸಮಿತಿಯನ್ನು ಮಾಡೋಣ. ಇವೊತ್ತು ಅರಣ್ಯವನ್ನು ಹೇಗೆ ಬೆಳೆಸಬೇಕು ಎನ್ನುವ ವಿಷಯವಾಗಿ ಮಾತುಕತೆಗಳು ಬರಲಿಲ್ಲ, ಅರಣ್ಯವನ್ನು ಯಾವರೀತಿಯಾಗಿ ಉಳಿಸಬೇಕು ಎನ್ನುವ ಬಗ್ಗೆ ಟೀಕಾತ್ಮಕವಾಗಿ ಒಂದೆರಡು ಮಾತುಗಳು ಬಂದವೇ ಹೊರತು ಬೇರೆ ಮಾತುಗಳು ಬರಲಿಲ್ಲ. ಈ ಬಗ್ಗೆ ನಾನು ಯಾರನ್ನು ಆರೋಪಿಸುವುದಿಲ್ಲ. ಇವೊತ್ತು ಎನ್‌ಕ್ರೋಚ್‌ಮೆಂಟ್ ಬಗ್ಗೆ ಬಡವರು ಇದ್ದಾರೆ, ಅವರಿಗೆ ಕೊಡೋಣ ಇಡೀ ಅರಣ್ಯವನ್ನೇ ಎಲ್ಲರಿಗೂ ಹಂಚಬೇಕು ಎಂದರೆ ನಾನು ಬೇಡ ಎಂದು ಹೇಳುವುದಿಲ್ಲ. ಫಾರೆಸ್ಟ್ ಆ್ಯಕ್ಟ್ ಪ್ರಕಾರ ಹೊಲಗಳನ್ನು ವಿತರಣೆ ಮಾಡುವುದು ಎರಡು ಸದನಗಳಿಗೆ ಸೇರಿದ್ದು. ಇವೊತ್ತು ಶಿವಮೊಗ್ಗದಲ್ಲಿ ಬೆಳೆಯಂತಕ್ಕ ಅರಣ್ಯದಿಂದ ನಿಮ್ಮ ಕಡೆಗೆ ಮಳೆ ಕೊಡುತ್ತದೆಯೋ ಹೊರತು ನಮ್ಮ ಹುಬ್ಬಳಿ ಕಡೆಗೆ ಮಳೆ ಕೊಡುವುದಿಲ್ಲ. ಇನ್ನು ನಿರ್ಗತಿಕರಿಗೆ, ಸಣ್ಣವರಿಗೆ, ಇರತಕ್ಕ ಎನ್‌ಕ್ರೋಚಮೆಂಟ್ ಯಾವರೀತಿಯಿಂದಲೂ ಕೊಡುವುದಿಲ್ಲ ಎಂದು ನಾನು ಹೇಳುವುದಿಲ್ಲ. ನಿಮಗೆ ನಾನು ದುರ್ಯೋಧನನಾಗಿ ಕಾಣಬಹುದು, ಆದರೆ ನನಗೆ ಮಾತ್ರ ನೀವು ಧರ್ಮರಾಯರಾಗಿ ಕಾಣುತ್ತೀರಾ. ಇವೊತ್ತು ಯಾವುದನ್ನು ಮಾಡುವುದರಿಂದ ದೇಶದ ಕಲ್ಯಾಣವಾಗುತ್ತದೆ, ಅದರ ಬಗ್ಗೆ ಮಾನ್ಯ ಸದಸ್ಯರಾದ ಶೀರ್ನಾಳಿ ಚಂದ್ರಶೇಖರ್ ಅವರು, ಮಾನ್ಯ ಸದಸ್ಯರಾದ ಲಿಂಗಪ್ಪನವರು, ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಯೋಗ್ಯವಾದ ಸಲಹೆ ಕೊಟ್ಟರೆ ನನ್ನದು ಯಾವ ಅಭ್ಯಾಂತರ ವಿಲ್ಲ. ಇನ್ನು ಕೊಡಗು ಜಿಲ್ಲೆಯ ಖಾನ ಮತ್ತು ಮಲ್ಲೆ ಜಮೀನುಗಳಲ್ಲಿ ಏಲಕ್ಕಿ ಬೆಳೆ ಬೆಳೆಯುತ್ತದೇ ಆ ಭಾಗ ಬೇರೆ ಬೇರೆ ಪ್ರದೇಶಗಳಿಂದ ಕೂಡಿದಂತಹ ಪ್ರದೇಶ, ಒಂದೊಂದು ಭಾಗದಲ್ಲಿ ಒಂದೊಂದು ತರಹ ವಿಶಿಷ್ಟ ಸಮಸ್ಯೆ ಇದೆ. ಆಯಾಯಾ ಭಾಗಗಳ ಕೆಲವು ಜನರ ಸಮಿತಿ ಮಾಡಿ ಒಂದು ಯೋಜನೆ ಮಾಡುವುದಾದರೆ ಅದು ಸ್ವಾಗತಾರ್ಹ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜಮೀನು ಕೊಡುವ ವಿಷಯದಲ್ಲಿ ಇದೇ ಧೋರಣೆ ತಾಳಿದರೆ ಚುನಾವಣೆಯಲ್ಲಿ ಬರುವುದಿಲ್ಲ ಎಂದು ಹೇಳಿದರೆ ನಾನು ಚುನಾವಣೆಯಲ್ಲಿ ಬರದೇ ಇದ್ದರೂ ಪರವಾಯಿಲ್ಲ, ತಾನು ಸರಿಯಾಗಿ ಮಾಡಿದಂತಹ ಕೆಲಸದಿಂದ ಸಂತೋಷಪಡುತ್ತೇನೆ. ಜನರು ಚುನಾವಣೆಯಲ್ಲಿ ಸೋಲಿಸುತ್ತಾರೆ ಎಂದು ರಾಜ್ಯದ ಬೊಕ್ಕಸ ಖಾಲಿ ಮಾಡಲಿಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇವೊತ್ತು ನಮ್ಮ ರಾಜ್ಯದ ಬೊಕ್ಕಸದ ಹಣ ಸೋರಿ ಹೋಗುವುದನ್ನು ನೋಡಿಕೊಂಡು ಸುಮ್ಮನೆ ಕುಳಿತಿದ್ದೀರಿ.

ಶ್ರೀ ಕಾಗೋಡು ತಿಮ್ಮಪ್ಪ.—ಅರಣ್ಯ ಬೆಳೆಸುವ ಬಗ್ಗೆ ನಮ್ಮ ಅಧಿಕಾರಿಗಳು ಪಾಪ ಬಹಳ ಕಷ್ಟ ಪಟ್ಟಿದ್ದಾರೆ. ಹಳ್ಳಿಯಲ್ಲಿರತಕ್ಕ ಪರದೇಶಿ ಎರಡು ಎಕರೆ ಇಟ್ಟುಕೊಂಡು ಜೀವನ ಮಾಡುವ ಪರಿಸ್ಥಿತಿ ಇಲ್ಲದಂತೆ ಮಾಡಿದ್ದಾರೆ. ಲೆಕ್ಕದಲ್ಲಿ ಕಾಡು ಬೆಳೆಸಿದ್ದನ್ನು ಮಾತ್ರ ಹೇಳುತ್ತಿದ್ದೀರಿ, ಕಳೆದ ಹತ್ತು ವರ್ಷದಲ್ಲಿ ಕಾಡು ಬೆಳೆಸಲಿಕ್ಕೆ ಎಷ್ಟು ಹಣ ಖರ್ಚು ಮಾಡಿದ್ದಾರೆ, ಎಷ್ಟು ಕಾಡು ಬೆಳೆಸಿದ್ದಾರೆ, ಎಷ್ಟು ಕಾಡು ಕಡಿದಿದ್ದಾರೆ ಎನ್ನುವುದನ್ನು ನಮಗೆ ಕಣ್ಣಾರೆ ತೋರಿಸುತ್ತೇನೆ ಬನ್ನಿ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಆಗಲೇ ಹೇಳಿದೆ, ನನಗೆ ಬರತಕ್ಕ ಅಂಕಿಗಳೆಲ್ಲಾ ಹರಿಶ್ಚಂದ್ರರಿಂದ ಬರುವುದಿಲ್ಲ ಎಂದು. ಬುಟ್ಟಿಯಲ್ಲಿ ಒಂದು ಕಣ್ಣು ಕೆಟ್ಟಿದ್ದರೆ, ಬುಟ್ಟಿನೇ ಒಗೆಯುವುದೇ ನಾವು ನೀವು ಒಂದಾಗಿ ಈ ವಿಚಾರದಲ್ಲಿ ವಿಚಾರ ಮಾಡೋಣ. ಎಲ್ಲಾ ಅಧಿಕಾರಿಗಳು ಅಂಥವರಿಲ್ಲ, ಚಲೋ ಅಧಿಕಾರಿಗಳಿಗೆ ಗೌರವ ಸೂಚಿಸುವುದು ಅವಶ್ಯಕ.

ಶ್ರೀ ಕೋಣಂದೂರು ಲಿಂಗಪ್ಪ.—ಅಧಿಕಾರಿಗಳಿಗೆ ಮಾತ್ರ ಮಾಡುತ್ತೀರೋ ಮಂತ್ರಿಗಳಿಗೂ ಮಾಡುತ್ತೀರೋ?

ಶ್ರೀ ಕೆ. ಹೆಚ್. ಪಾಟೀಲ್.—ಎಲ್ಲರಿಗೂ ಹೇಳುತ್ತೇನೆ. ಅಧ್ಯಕ್ಷರೇ, ನನ್ನ ನಜರಿಗೆ ಒಂದು ಊರಿಗೆ ಅರಣ್ಯದ ಬಗ್ಗೆ ಸ್ಥಾನೀಕ ಜನರಿಂದ ಅರಣ್ಯ ಹೋಗುವ ವಿಚಾರದಲ್ಲಿ ಕೋರ್ಟಿನಲ್ಲಿ ಸ್ಟೇ ಕೊಟ್ಟಿದೆ. ಸ್ಟೇ ಕ್ಯಾನ್ಸಲ್ ಮಾಡಬೇಕು ಎನ್ನುವ ವಿಚಾರದಲ್ಲಿ ಫೋನಿನ ಮೇಲೆ ಫೋನ್ ಬಂತು; ನಾನು ಹೋಗಿ ಜಮೀನು ನೋಡುವುದರಲ್ಲಿ ಅರ್ಧ ಜಮೀನು ಹೋಗಿದೆ, ಇನ್ನು ಅರ್ಧ ಜಮೀನು ಇದೆ. ಸ್ಟೇ ರದ್ದು ಮಾಡುವುದಕ್ಕೆ ಯೋಗ್ಯ ಅಂತ ಅನ್ನಿಸಿತು, ಮುಂದೆ ಬರುವವರೆಗೆ ನಿರ್ದಾಕ್ಷಿಣ್ಯವಾಗಿ ಹೊರಗೆಹಾಕಿ ಎಂದು ಹೇಳಿ ಬಂದಿದ್ದೇನೆ. ನಾನು ನನ್ನ ನಿಲುವಿನ ವಿಚಾರದಲ್ಲಿ ದೊಡ್ಡವರು, ಹೊಲವುಳ್ಳವರು ಯಾವುದೂ ನೋಡುವುದಿಲ್ಲ. ಹಾಸನ ಜಿಲ್ಲೆಯಲ್ಲಿ ಕಾಫಿ ಪ್ಲಾಂಟೇಷನ್‌ಗೆ ಸಂಬಂಧಪಟ್ಟಂತೆ ೪೦–೫೦ ಎಕರೆ ಜಮೀನು ಸೇರಿಸಿದ್ದಾರೆ. ಅದು ನನ್ನ ನಜರಿಗೆ ಬಂದಾಗ, ಅದು ನನ್ನ ಗೆಳೆಯರಿಗೆ ಸಂಬಂಧಿಸಿದ್ದು ಎಂದು ತಿಳಿಯಿತು. ನನ್ನ ಗೆಳೆಯರು ನನ್ನನ್ನು ನೋಡುವುದಕ್ಕೆ ಬರುವ ಮುನ್ನವೇ ಫೈಲು ತರಿಸಿಕೊಂಡು ಕ್ಯಾನ್ಸಲ್ ಮಾಡಿದ್ದೇನೆ, ಅಂಥ ಸದ್ಗುಣ ನನ್ನದು. ಆ ಮೇಲೆ ನನ್ನ ಗೆಳೆಯರು ಬಂದು ಅದು ಬಹಳ ಬೆಲೆಯುಳ್ಳದ್ದು ೧೦ ಲಕ್ಷ ರೂಪಾಯಿ ಆಗುತ್ತದೆ ಎಂದು ಹೇಳಿದರು. ನನಗೆ ನಿಮ್ಮ ಬೆಂಬಲ ಇದ್ದರೆ ಯಾವ ದುಡ್ಡಿನವನಾಗಲೀ ದೊಡ್ಡವನಾಗಲೀ, ಹೊಲವುಳ್ಳವನಾಗಲೀ ಕಾನೂನಿಗೆ ವಿರುದ್ಧವಾಗಿ ಯಾವತ್ತು ಮಾಡುವುದಕ್ಕೆ ಹೋಗುವುದಿಲ್ಲವೆಂಬುದನ್ನು ತಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಅವ್ಯವಹಾರಗಳ ವಿಚಾರದಲ್ಲಾಗಲೀ, ಮಂತ್ರಿನನ್ನಾವುದೇ ವಿಚಾರದಲ್ಲಾಗಲೀ ತೀವ್ರ ಕ್ರಮ ಕೈಕೊಳ್ಳುವ ಬಗ್ಗೆ ನಾನು ಮೊದಲಿಗನಾಗುತ್ತೇನೆ. ಯಾವ ಅಧಿಕಾರಿಯಾಗಲೀ ನಿಷ್ಠೆಯಿಂದ ಕೆಲಸ ಮಾಡದೇ ಇದ್ದರೆ, ಸರ್ಕಾರ ಸರಿಯಾದ ಮಾರ್ಗದಲ್ಲಿ ನಡೆಯದಿದ್ದರೆ ಮಂತ್ರಿ ತೀರ್ಮಾನ ಮಾಡಬೇಕಾಗಿಲ್ಲ, ನೀವು ತೀರ್ಮಾನ ಮಾಡಬೇಕು. ಶ್ರೀಮಾನ್ ಸಯಾನಕ್‌ರವರು ಒಂದು ಮಾತನ್ನು ಹೇಳಿದರು, ದ್ವೇಷದಿಂದ ಮಾಡಿದ್ದಾರೆಂದು. ನನ್ನ ನಜರಿಗೆ ತಂದಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಿದ್ದೆ, ಈ ವಿಚಾರದಲ್ಲಿ ತನಿಖೆ ಮಾಡೋಣ. ಮೋಟಾರ್ ಬಗ್ಗೆ ಹೇಳಿದ್ದಾರೆ, ಕೂಡಲೇ ಅದನ್ನು ತನಿಖೆಗೆ ಕಳುಹಿಸಿದ್ದೇನೆ. ಯಾವುದೇ ರೀತಿಯಿಂದ ಒಳಸಂಚು ನಡೆದಿದ್ದರೂ ಅವರ ಬಗ್ಗೆ ಕ್ರಮ ತಗೆದುಕೊಳ್ಳುವುದಕ್ಕೆ ಹಿಂದುಮುಂದು ನೋಡುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ.

ಸಿಮೆಂಟ್ ಬಗ್ಗೆ ಬಹಳಷ್ಟು ತಕರಾರು ಬರುತ್ತಿವೆ. ಸದನದ ಎದುರಿಗೂ ಹೇಳಿದ್ದೇನೆ, ಹೊರಗೂ ಹೇಳಿ ಹೇಳಿ ಸಾಕಾಗಿದೆ. ಸಿಮೆಂಟ್ ನಿಯಂತ್ರಣ ಕೇಂದ್ರಸರ್ಕಾರಕ್ಕೆ ಒಳಪಟ್ಟಿರುವಂತಾದ್ದು, ೩೫ ರೂಪಾಯಿ ಕೊಟ್ಟರೆ, ಸಿಗುತ್ತೆ, ೧೯ ರೂಪಾಯಿ ಕೊಟ್ಟರೆ ಇಲ್ಲ. ಇದಕ್ಕೆ ಉತ್ತರವೇ ಇಲ್ಲ. ನಿಜ, ಈ ಕದೀಮರ ನಾಟಕಕ್ಕೆ ಕೊನೆಯೇ ಇಲ್ಲ. ಸಿಮೆಂಟ್ ನಿಯಂತ್ರಣ ಮಾಡಬೇಕಾದರೆ ಸಂಪೂರ್ಣ ಅಧಿಕಾರ ನಮಗೆ ಇಲ್ಲ. ಯಾರು ಹೆಚ್ಚಿಗೆ ಬೆಲೆಗೆ ಮಾರುತ್ತಾರೆ, ಕಾನೂನು ಪ್ರಕಾರ ಕಾಗ್‌ನಿಸಿಬಲ್ ಅಫೆನ್ಸ್‌ಗೆ ಗುರಿಯಾಗುತ್ತಾನೆ. ಈಗ ಬಾಗಲಕೋಟೆ ಸಿಮೆಂಟ್ ಕಂಪನಿ ವಿಚಾರದಲ್ಲಿ ಸಿ. ಬಿ. ಐ. ಇನ್‌ವೆಸ್ಟಿಗೇಷನ್ ನಡೆಯುತ್ತಿದೆ, ಸಿಮೆಂಟ್ ಹೆಚ್ಚಿನ ಧಾರಣೆಗೆ ಮಾರುತ್ತಿದ್ದು ಅದರ ಮೇಲೆ ಚಾರ್ಜ್‌ಷೀಟ್ ಹಾಕಿ ಕೋರ್ಟಿಗೆ ಹಾಕಿದ್ದಾರೆ. ಕೋಲಾರ ಡೆಪ್ಯೂಟಿ ಕಮೀಷನರ್‌ರವರು ಸಿಮೆಂಟ್ ಹೆಚ್ಚಿಗೆ ಧಾರಣೆಗೆ ಮಾರುವವರ ಮೇಲೆ ರುಜುವಾತು ಮಾಡಿ ದಾಖಲೆ ಆಗಿದೆ, ಬೆಂಗಳೂರಿನಲ್ಲಿ ಮಾತ್ರ ಸದ್ದಿಲ್ಲದಂತೆ ಈ ವ್ಯವಹಾರ ನಡೆಯುತ್ತಿದೆ. ಈ ಕದೀಮರನ್ನು ನಿಮ್ಮ ಸಹಕಾರ ಕೋರುತ್ತೇನೆ. ಈ ಕದೀಮರನ್ನು ಹಿಡಿಯುವುದಕ್ಕೆ ಮಂತ್ರಿಮಂಡಲದಿಂದ ಸಾಧ್ಯವಿಲ್ಲ, ನಿಮ್ಮೆಲ್ಲರ ಸಂಪೂರ್ಣ ಸಹಕಾರ

ಬೇಕೆಂದು ಈ ಸದನದ ಮುಖಾಂತರ ಹೇಳುತ್ತೇನೆ. ಸಿಮೆಂಟ್ ವಿತರಣೆಯಲ್ಲಿ ಹೆಚ್ಚು ಬೆಲೆಗೆ ಮಾರುವವರಿಗೆ, ಕಾಳಸಂತೆಯಲ್ಲಿ ಮಾರುವವರಿಗೆ ಉಗ್ರವಾದ ದಂಡನೆ ಜೊತೆಗೆ ಅವರ ಲೈಸೆನ್ಸುಗಳನ್ನು ಕಿತ್ತುಹಾಕಿ ಬ್ಲ್ಯಾಕ್ ಲಿಸ್ಟಿಗೆ ಸಿಗುವಹಾಗೆ ಮಾಡಬೇಕು. ಅಲ್ಲದೆ ಸಿಮೆಂಟ್ ಪಾಲಸಿ ಬಗ್ಗೆ ಸರಿಯಾದ ಪಾಲಿಸಿ ಸ್ಟೇಟ್‌ಮೆಂಟನ್ನು ನಮ್ಮ ಅಧಿಕಾರಿಗಳು ತಯಾರು ಮಾಡಿಲ್ಲ. ಇವತ್ತು ಇದ್ದ ಪರಿಸ್ಥಿತಿಯಲ್ಲಿ ೪೫ರಷ್ಟು ಸರ್ಕಾರದ ಬಾಬಿನ ಅಭಿವೃದ್ಧಿಗಾಗಿ ಹೋಗುತ್ತಿದೆ. ಇಂಡಿಸ್ಟ್ರೀಸ್‌ಗೆ ವಿತರಣೆ ಮಾಡಬೇಕಾಗುತ್ತದೆ. ೫೫ ಭಾಗ ಪಬ್ಲಿಕ್ ಕನ್‌ಸಮ್‌ಷನ್ ಇದೆ, ಅನೇಕ ಸದಸ್ಯರ ಅಭಿಪ್ರಾಯದಲ್ಲಿ ಏಜನ್ಸಿ ವ್ಯವಸ್ಥೆ ಸರಿಯಿಲ್ಲ ಎಂದು ಹೇಳುತ್ತಾರೆ. ಆದರೆ, ಕೇಂದ್ರಸರ್ಕಾರ ಹಾಗೂ ರಾಜ್ಯಸರ್ಕಾರ ಕೂಡಿ ಸಿಮೆಂಟ್ ನಿಯಂತ್ರಣ ಜಾರಿಗೆ ತಂದರೆ, ಜನರಿಗೆ ಸಮರ್ಪಕವಾದ ರೀತಿಯಲ್ಲಿ ವಿತರಣೆ ಮಾಡುವುದಕ್ಕೆ ಆಗುತ್ತದೆ, ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಹೆಚ್ಚು ಹೆಚ್ಚಿಗೆ ಸಿಮೆಂಟ್‌ನ್ನು ಕುದುರೆಮುಖ ಯೋಜನೆ, ಕಾಳಿ ಯೋಜನೆ, ಚಕ್ರಾ ಯೋಜನೆಗಳಿಗೆ ಹೇರಳವಾಗಿ ಸಿಮೆಂಟ್ ಕೊಡುತ್ತಿದ್ದೀರಿ. ನೀವು ಕೊಟ್ಟಿರ ತಕ್ಕಂಥ ಸಿಮೆಂಟಿನಲ್ಲಿ ಹೆಚ್ಚು ಕಡಿಮೆ ಅರ್ಧ ಬಾಗದಷ್ಟು ಸಿಮೆಂಟ್ ಕಳ್ಳ ವ್ಯಾಪಾರ ಆಗುತ್ತಿದೆ. ಇವತ್ತು ಚಕ್ರ ಯೋಜನೆ ಕಂಟ್ರಾಕ್ಟದಾರರ ಹತ್ತಿರ ೧೦ ಲೋಡ್ ಸಿಮೆಂಟ್ ಸಿಗುತ್ತದೆ, ಕುದುರೆ ಮುಖ ಯೋಜನೆ ಕಂಟ್ರಾಕ್ಟ್‌ದಾರರ ಹತ್ತಿರ ೧೦,೦೦೦ ಮೂಟೆ ಸಿಮೆಂಟ್ ಸಿಗುತ್ತದೆ, ಕಾಳಿ ಯೋಜನೆ ಕಂಟ್ರಾಕ್ಟ್‌ದಾರರ ಹತ್ತಿರವೂ ಸಿಗುತ್ತದೆ. ಇದೆಲ್ಲಾ ಸ್ಮಗಲಿಂಗ್ ಆಗುತ್ತಿದೆ. ದೊಡ್ಡ ದೊಡ್ಡ ಯೋಜನಗಳಿಗೆ ಸಿಮೆಂಟ್ ಕೊಡುವಾಗ ಅವಶ್ಯಕತೆಯನ್ನು ನೋಡಿಕೊಂಡು ಅದರ ಪ್ರಕಾರ ವಿತರಣೆ ಮಾಡಬೇಕು. ಲೋಕೋಪಯೋಗಿ ಇಲಾಖೆಯಲ್ಲಿಯೂ ಸಿಮೆಂಟ್ ಕಳ್ಳವ್ಯಾಪಾರ ನಡೆಯುತ್ತಿದೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯವನ್ನು ಗಮನದಲ್ಲಿರಿಸಿ ಕೊಳ್ಳುತ್ತೇನೆ. ಹೊಸದಾಗಿ ಪಾಲಿಸಿ ಸ್ಟೇಟ್‌ಮೆಂಟ್ ಮಾಡುವಾಗ ಆ ನಿಯಮಗಳನ್ನು ಪರ್ಯಾಲೋಚನೆ ಮಾಡಿ ಯಾವ ರೀತಿ ನಿಯಂತ್ರಣ ಮಾಡುವುದಕ್ಕೆ ಸಾಧ್ಯ ಇದೆ ಅದನ್ನು ಯೋಚನೆ ಮಾಡಿ ಆ ನಿಯಂತ್ರಣಗಳನ್ನು ಹಾಕಲಿಕ್ಕೆ ಪ್ರಯತ್ನ ಮಾಡುತ್ತೇನೆ ಎಂದು ನಾನು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಇನ್ನು ಮಾನ್ಯ ಸದಸ್ಯರುಗಳು ಅನೇಕ ಕಡೆಗಳಲ್ಲಿ ರೇಷನ್ ಅಂಗಡಿಗಳಲ್ಲಿ ಸರಿಯಾಗಿ ಸಕ್ಕರೆ ವಿತರಣೆಯಾಗುವುದಿಲ್ಲ ಅನ್ನುವ ಮಾತನ್ನು ಹೇಳಿದ್ದಾರೆ. ಅದು ನಿಜ. ಕೆಲವು ರೇಷನ್ ಅಂಗಡಿಗಳಲ್ಲಿ ಸರಿಯಾಗಿ ಸಕ್ಕರೆ ವಿತರಣೆಯಾಗುತ್ತಾ ಇಲ್ಲ ಅನ್ನುವ ದೂರು ಬರುತ್ತಾ ಇದೆ. ಆದುದರಿಂದ ನಾನು ಈ ವಿಚಾರದಲ್ಲಿ ಈಗಾಗಲೇ ಡೆಪ್ಯೂಟಿ ಕಮೀಷನರಿಗೆ ತಿಳಿಸಿದ್ದೇನೆ. ಏನೆಂದರೆ ನೀವು ಜಿಲ್ಲೆಲ್ಲಿ ಟೂರ್ ಹೋಗುತ್ತೀರೋ ಅಲ್ಲಲ್ಲಿ ಪ್ರತಿ ಹಳ್ಳಿಗೂ ಹೋಗಿ ಅವರು ಸಕ್ಕರೆಯನ್ನು ವಿತರಣೆ ಮಾಡುತ್ತಿದ್ದಾರೆಯೋ ಇಲ್ಲವೇ ಅಂತ ಕೇಳಿರಿ. ಎಲ್ಲಿಯಾದರೂ ಅವರು ತಪ್ಪು ನಡೆದಿದ್ದರೆ, ಎಲ್ಲಿಯಾದರೂ ವಿತರಣೆ ಬಗ್ಗೆ ಲೋಪದೋಷಗಳು ಇದ್ದರೆ ಅಂಥಾವರ ಲೈಸನ್ಸ್ ಅನ್ನು ರದ್ದು ಮಾಡುವುದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೇನೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ ಫೇರ್‌ಪ್ರೈಸ್ ಡಿಪೋವಿನಲ್ಲಿ ಅದರಲ್ಲೂ ಕೂಡ ರೂರಲ್ ಏರಿಯಾಸ್‌ನಲ್ಲಿ ಕಂಟ್ರೋಲ್ ಕ್ಲಾತ್ ಬಟ್ಟೆ ಮತ್ತು ಲೋಕವಸ್ತ್ರಗಳನ್ನು ವಿತರಣೆ ಮಾಡುತ್ತಾ ಇಲ್ಲ. ಈ ಬಗ್ಗೆ ತಾವು ಯಾವುದಾದರೂ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್ ಪಾಟೀಲ್.—ಈಗ ಕಂಟ್ರೋಲ್ ಕ್ಲಾತ್ ಏನು ಇದೆ ಅದನ್ನು ಎಲ್ಲರಿಗೂ ವಿತರಣೆ ಮಾಡುವುದಕ್ಕೆ ಕೊಟ್ಟಿಲ್ಲ ಅಂತ ಮಾನ್ಯ ಸದಸ್ಯರು ಹೇಳುವುದು ನಿಜ, ಏತಕ್ಕೆಂದರೆ ಅದು ಜನತಾ ಬಜಾರ್ ಮುಖಾಂತರ ವಿತರಣೆಯಾಗುತ್ತದೆ. ನಾನು ಈ ಬಗ್ಗೆ ಹೇಳುವುದು ಇಷ್ಟೆ. ಹಳ್ಳಿಯವರು ಯಾರಾದರೂ ಇದನ್ನು ವಯ್ಯಲು ಮುಂದೆ ಬಂದರೆ ಅವರಿಗೂ ಕೊಡಲು ನನ್ನ ಅಭ್ಯಂತರವೇನೂ ಇಲ್ಲ. ಆದರೆ ಅವರುಗಳು ಇದನ್ನು ವಯ್ಯಲು ಮುಂದೆ ಬಂದಿಲ್ಲ ಎಂದು ಹೇಳುತ್ತಾರೆ. ಆದುದರಿಂದ ನಾನು ಹೇಳುವುದು ಇದನ್ನು ವಯ್ಯಲು ಮಾರಾಟ ಮಾಡುವ ಅಂಗಡಿಗಳು ಮುಂದೆ ಬರಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಬೆಂಗಳೂರು ಸುತ್ತಮುತ್ತಲೂ ಗ್ರೀನ್ ಬೆಲ್ಟ್ ಮಾಡಬೇಕು ಅನ್ನುವ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಗ್ರೀನ್ ಬೆಲ್ಟ್ ಮಾಡಬೇಕು, ಅದು ಅವಶ್ಯ ಇದೆ ಅನ್ನುವುದನ್ನು ನಾನೂ ಸಹ ಒಪ್ಪುತ್ತೇನೆ. ಈ ಬಗ್ಗೆ ಸ್ಪೆಷಲ್ ಪ್ರಾವಿಷನ್ ಕೂಡ ಮಾಡಿದ್ದೇವೆ. ಅದರ ಬಗ್ಗೆ ತೀವ್ರವಾಗಿ ಕಾರ್ಯಕ್ರಮ ಕೈಗೊಳ್ಳಬೇಕು ಎನ್ನು ಆಸೆ ನನಗೆ ಇದೆ ಎಂದು ಅಷ್ಟು ಮಾತ್ರ ಹೇಳುತ್ತೇನೆ.

ಇನ್ನು ಕ್ಯಾಷೂನಟ್ ವಿಚಾರದಲ್ಲಿ ಹೇಳುವುದಾದರೆ ಎಕ್ಸ್‌ಪೋರ್ಟ್ ಮಾರ್ಕೆಟ್‌ನಲ್ಲಿ ಇದಕ್ಕೆ ಬಹಳಷ್ಟು ಡಿಮ್ಯಾಂಡ್ ಇದೆ ಎಂದು ಹೇಳುತ್ತೇನೆ. ಇದರ ಧಾರಣೆ ಹೇಳುವುದಾದರೆ ಒಂದೊಂದು ಕೆ. ಜಿ ಗೆ 50-60 ರೂಪಾಯಿನಷ್ಟು ಮಾರಾಟ ಮಾಡುವುದಕ್ಕೆ ಹತ್ತಿದೆ. ಆದ್ದರಿಂದ ನಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಇದನ್ನು ಹೆಚ್ಚು ಬೆಳೆಯಲಿಕ್ಕೆ ಪ್ರಯತ್ನ ಮಾಡಿದರು. ಅಲ್ಲದೆ ರಬ್ಬರ್ ಪ್ಲಾಂಟ್ ಕೂಡ ಪ್ರತಿ ದಿವಸವೂ 3 ಟನ್ ಅಷ್ಟು ಉತ್ಪಾದನೆ ಆಗುತ್ತಾ ಇದೆ. ಅಲ್ಲದೆ ಅಷ್ಟೇ ಕೋಕೋ ಪ್ಲಾಂಟ್ ನಮ್ಮಲ್ಲಿ ಏನು ಇದೆ ಅದು ಯಾವ ರಾಜ್ಯದಲ್ಲೂ ಇಲ್ಲದೆ ನಮ್ಮಲ್ಲೇ ಅದು ವ್ಯವಸ್ಥಿತವಾಗಿ ಬೆಳೆಯುವುದರಿಂದ ಇಲ್ಲಿಂದಲೇ ಅದು ಕಾಶ್ಮೀರಕ್ಕೆ ಹೋಗಬೇಕಾಗಿರುವುದರಿಂದ ನಮ್ಮ ಕರ್ನಾಟಕವನ್ನೇ ಅವಲಂಬಿಸಬೇಕು. ಇದರಿಂದ ಕ್ಯಾಡಬರಿ ಚಾಕ್ಲೇಟಿಗೆ ಬಹಳ ಉಪಯೋಗವಾಗುತ್ತದೆ. ಆದುದರಿಂದ ಏತಕ್ಕಾಗಿ ನಮ್ಮ ಕರ್ನಾಟಕ ರಾಜ್ಯದಲ್ಲೇ ಈ ಚಾಕ್ಲೇಟ್‌ನ ಒಂದು ಫ್ಯಾಕ್ಟರಿಯನ್ನು ತೆರೆಯಬಾರದು ಅಂತ ಆಲೋಚನೆ ಮಾಡುತ್ತಿದ್ದೇನೆ.

ಇನ್ನು ಮಾನ್ಯ ಸದಸ್ಯರು ಕಾರ್ಪೊರೇಷನ್ ವಿಷಯವಾಗಿ ಹೇಳಿದರು. ನನಗೆ ಸಂತೋಷ. ಪ್ಲಾಂಟೇಷನ್ ಕಾರ್ಪೊರೇಷನ್ ವಿಷಯವಾಗಿ ಯಾರೂ ಟೀಕೆ ಮಾಡಲಿಲ್ಲ. ಪ್ರಾಯಶ ಅರಣ್ಯ ಇಲಾಖೆಯಲ್ಲಿ ತಜ್ಞರಾಗಿದ್ದವರು ಅಂದರೆ ಶ್ರೀಮಾನ್ ಕೆ. ಎಫ್. ಪಾಟೀಲರು ಅದರಲ್ಲಿ ಛೇರ್ಮನ್ ಆಗಿ ಇರುವುದರಿಂದ ಅದರಿಂದ ಜನರಿಗೆ ಸಮಾಧಾನವಾಗಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇಂಡಸ್ಟ್ರಿಯಲ್ ಕಾರ್ಪೊರೇಷನ್ ಬಗ್ಗೆ ಕೆಲವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು, ಇನ್ನು ಕೆಲವರು ಉಗ್ರವಾಗಿ ಟೀಕೆ ಮಾಡಿದರು ನಿಜ. ಆದರೆ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಏನು ಇದೆ ಅದನ್ನು ಅವರು ಸರಿಯಾಗಿ ಅರ್ಥಮಾಡಿಕೊಂಡರೆ ಅವರು ಈ ಬಗ್ಗೆ ಮಾಡಿದ ಟೀಕೆಯನ್ನು ವಾಪಸ್ಸು ತೆಗೆದುಕೊಳ್ಳಬಹುದು ಎಂದು ನಾನು ಭಾವಿಸುತ್ತೇನೆ. ಈ ವಿಚಾರವಾಗಿ ನಾನು ತಮಗೆ ಕೆಲವು ವಿಷಯಗಳನ್ನು ತಿಳಿಯಬಯಸುತ್ತೇನೆ. ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಸರ್ಕಾರದಿಂದ ಸ್ಥಾಪಿಸಿದಂಥಾ ಸಂಸ್ಥೆ ಅಲ್ಲ. 1973ರಲ್ಲಿ ನಾನು ಫಾರೆಸ್ಟ್ ಮಿನಿಸ್ಟರ್ ಆಗಿದ್ದಾಗ ಅತ್ಯಲ್ಪ ಹಣದಿಂದ ಫಾರೆಸ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಶುರು ಮಾಡಿದ್ದು. ವ್ಯಕ್ತಿಗತವಾಗಿ ಹೋಗತಕ್ಕಂಥಾ ಕಮೀಷನ್ ಏನು ಇತ್ತೋ ಅದನ್ನು ನಮ್ಮ ಎಕ್ಸ್‌ಪೋರ್ಟ್‌ನಿಂದ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಏಜೆನ್ಸಿಗೆ ಏನು ಕಮೀಷನ್ ಹೋಗುತ್ತಿತ್ತೋ ಅದರಿಂದ ಉಳಿಸಿದಂಥಾ ದುಡ್ಡು ಇದ್ದು. ಜಪಾನ್‌ಗೆ ಕಳುಹಿಸಿ ಅದರಿಂದ ಬಂದಂಥಾ 4-47ಲಕ್ಷ ರೂಪಾಯಿ ಏನು ಇತ್ತೋ ಆ ಬಂಡವಾಳದಿಂದ ಇದನ್ನು ಶುರುಮಾಡಿದ್ದು. ಈ ವಿಚಾರ ಕಾಗೋಡು ತಿಮ್ಮಪ್ಪನವರಿಗೂ ಗೊತ್ತಿದೆ, ಈ ಬಗ್ಗೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಮಾಡಿದೆವು ಅದೇನೆಂದರೆ ಮಲೆನಾಡಿನಲ್ಲಿ ಹಾಗೂ ನಾರ್ತ್ ಕೆನರಾದಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಸಹ ಒಂದೊಂದು ಇಂಡಸ್ಟ್ರೀಸ್ ಮಾಡಬೇಕೆಂದು ನನ್ನ ಬಯಕೆ ಆಗಿತ್ತು. ಮತ್ತು ಖಾಸಗಿಯವರು ಯಾರು ಈ ಕೃಷಿಯನ್ನು ಈ ಅರಣ್ಯ ಭೂಮಿಯನ್ನಾಗಿ ಮಾಡುವುದಕ್ಕೆ ಕೊಡುವುದಿಲ್ಲವೋ ಅವರಿಗೆ ಇನ್ನೂ ಹೆಚ್ಚಿನ ಕೂಲಿಯನ್ನು ತಮ್ಮ ಹೊಲದಿಂದ ಏನು ಸಂಪಾದನೆ ಮಾಡುತ್ತಿದ್ದರೋ ಅದಕ್ಕಿಂತಲೂ ಹೆಚ್ಚಿನ ಕೂಲಿಯನ್ನು ಇದರಲ್ಲಿ ಮಾಡಿಸಿ ಮಾಡಿಸಿ ತೋರಿಸಿಕೊಡಬೇಕು ಎಂದು ನನ್ನ ಬಯಕೆಯಾಗಿತ್ತು. ಅವರಿಗೆ ಇನ್ನೂ ಹೆಚ್ಚಿನ ಹಣ ಇದರಲ್ಲಿ ಸಂಪಾದನೆ ಮಾಡಿಗಳಿಸಿಕೊಡಬೇಕು ಅನ್ನುವ ಒಂದು ಉದ್ದೇಶದಿಂದ ಈ ಪ್ರಾಜೆಕ್ಟ್ ರಿಪೋರ್ಟ್ ಅನ್ನು ತಯಾರು ಮಾಡಿದೆವು. ಆದರೆ ಮಾನವ ಬಯಸಿದ್ದು ಒಂದು ಆದರೆ ದೇವರು ಬಯಸಿದ್ದು ಇನ್ನೊಂದು ಆದಂತೆ ಆಯಿತು. ನಾನು ಯಾವ ಆಡಳಿತ ನಿಯಂತ್ರಣವನ್ನು ನಂಬಿಕೊಂಡು ಕೆಲಸ ಮಾಡಿದ್ದೇನೋ ಆ ಅಧಿಕಾರಿ ನಮ್ಮ ನಿರೀಕ್ಷಣೆಯಂತೆ ಬಂದು ಕೆಲಸ ಮಾಡಲಿಲ್ಲ. ನನಗೆ ಗೊತ್ತು. ಆದರೆ ಇದನ್ನು ಪ್ರಾರಂಭ ಮಾಡಿದವನೇ ನಾನು, ಆ ತಪ್ಪನ್ನು ನಾನು ಹೇಗೆ ಹಿಡಿಯಲಿ ? ಆದರೆ ಅದನ್ನು ಹಟ ಮಾಡದೆ ಬಿಡಲಿಲ್ಲಾ, ತಮ್ಮ ಕಣ್ಣಿದುರಿಗೆ ನಡೆದಿರತಕ್ಕಂಥಾದ್ದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಸ್ಪೆಂಡ್ ಒಬ್ಬ ಅಧಿಕಾರಿಯನ್ನು

ಸಸ್ಪೆಂಡ್ ಮಾಡಿದೆ. ಆದರೆ ಒಬ್ಬ ಅಧಿಕಾರಿಯನ್ನು ಸಸ್ಪೆಂಡ್ ಮಾಡಿದ ಮೇಲೆ ಬೇರೆ ಅಧಿಕಾರಿಗಳು ಲಕ್ಷ್ಯ ಕೊಟ್ಟರು ಆದುದರಿಂದ ನಾನು ಈ ಬಗ್ಗೆ ಸಾಕಷ್ಟು ಲಕ್ಷ್ಯ ಕೊಟ್ಟಿದ್ದೇನೆ ಎಂದು ಹೇಳುತ್ತೇನೆ. ಮತ್ತು ನಾನು ಅವರನ್ನು ಕೇಳಿದೆ. ಈ ರಿಪೋರ್ಟಿನಲ್ಲಿ ಇರತಕ್ಕಂಥಾ ಕಾರ್ಯಕ್ರಮ ಏತಕ್ಕೆ ನಡೆಯಲಿಲ್ಲಾ, ಇದು ಲಾಭವಾಗಬೇಕಾದಂಥಾದ್ದು, ಅಂಥದ್ದರಲ್ಲಿ ಇದು ಏತಕ್ಕೆ ಹಾನಿಯಾಯಿತು ಅಂತ ಕೇಳಿದೆ ಕೊನೆಗೆ ಇದರ ಬಗ್ಗೆ ಒಂದು ಎನ್‌ಕ್ವೈರಿ ಮಾಡಲಿಕ್ಕೆ ಒಬ್ಬರು ಎನ್‌ಕ್ವೈರಿ ಆಫೀಸರನ್ನು ಇಟ್ಟೆವು. ಅವರ ಹೆಸರು ಶಂಕರನಾರಾಯಣ ಅಂತ. ಅವರು ಅತ್ಯಂತ ಕಠೋರಿಯಾದ ಮನುಷ್ಯರು ಅವರನ್ನು ನೇಮಿಸಿ ಆ ಬಗ್ಗೆ ಅವರಿಂದ ಎನ್‌ಕ್ವೈರಿ ರಿಪೋರ್ಟ್ ಪಡೆದೆವು. ನೀವು ಹೇಳಿದ ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕಾದರೆ ಆ ಎನ್‌ಕ್ವೈರಿ ರಿಪೋರ್ಟನ್ನು ನೋಡಿದ ಮೇಲೆ ಇನ್ನು ಯಾರು ಯಾರು ಸಸ್ಪೆಂಡ್ ಆಗುತ್ತಾರೋ ನೋಡೋಣ ನಾನು ಯಾವುದನ್ನೂ ಕೂಡ ಮರೆ ಮಾಡುವುದಿಲ್ಲ

ಶ್ರೀ ಹೆಚ್. ಡಿ. ದೇವೇಗೌಡ.—ಈಗ ನಮ್ಮ ಮೇಲೆ ವಿಚಾರಣೆ ಇದೆಯಲ್ಲಾ ಅದರಿಂದ ನಿಮ್ಮನ್ನು ಸಸ್ಪೆಂಡ್ ಮಾಡಬೇಕಾಗಿಲ್ಲ ? ಮಾಡುವವರು ಯಾರು?

ಶ್ರೀ ಕೆ. ಹೆಚ್. ಪಾಟೀಲ್.—ತಮಗೆ ಗೊತ್ತಿದೆ, ನನ್ನ ಮೇಲೆ ಆರೋಪಗಳು ಇದ್ದರೆ, ನನ್ನನ್ನು ಸಸ್ಪೆಂಡ್ ಮಾಡಬೇಕಾದರೆ ಆ ಅಧಿಕಾರ ಈ ಸದನಕ್ಕೆ ಇದ್ದೇ ಇದೆಯಲ್ಲಾ.

ಶ್ರೀ ಹೆಚ್. ಡಿ. ದೇವೇಗೌಡ – ಈಗ ಆ ಅಧಿಕಾರಿಯನ್ನು ಸಸ್ಪೆಂಡ್ ಮಾಡಿ ವಿಚಾರಣೆ ಮಾಡುತ್ತಿದ್ದೀರಿ ಇದೇ ತಾತ್ವಿಕ ಹಿನ್ನೆಲೆಯಿಂದ ಆಧಾರದ ಮೇಲೆ ನೀವು ಸೊಗಸಾದ ಭಾಷಣ ಮಾಡುತ್ತಿದ್ದೀರಿ, ಈಗ ನಿಮ್ಮ ಮೇಲೆ ವಿಚಾರಣಾ ಆರೋಪ ಇರುವುದರಿಂದ ನೀವು ಸಸ್ಪೆಂಡ್ ಆಗಬೇಕೋ ಇಲ್ಲವೋ ಹೇಳಿ.

ಶ್ರೀ ಕೆ. ಹೆಚ್. ಪಾಟೀಲ್.—ಅಧಿಕಾರಿಗಳ ಮೇಲೆ ಏನಾದರೂ ಆರೋಪಣೆ ಇದ್ದರೆ ಅವರ ಮೇಲೆ ನಿಯಂತ್ರಣ ಮಾಡಲಿಕ್ಕೆ ನನ್ನನ್ನು ನೇಮಿಸಿದ್ದೀರಿ ನನ್ನ ಮೇಲೆ ಆರೋಪಣೆ ಇದ್ದರೆ, ಅದನ್ನು ಎದುರಿಸಲಿಕ್ಕೆ ನನ್ನನ್ನು ಸಸ್ಪೆಂಡ್ ಮಾಡಲಿಕ್ಕೆ ನೀವು ಇದ್ದೀರಲ್ಲಾ ?

ಶ್ರೀ ಹೆಚ್. ಡಿ. ದೇವೇಗೌಡ.—ನೀವೇ ನಿರ್ಗಮನ ಆಗಬೇಕು. ಅದಕ್ಕೆ ನೀವು ಪ್ರಯತ್ನ ಮಾಡಿದಿರಿ, ಅದನ್ನು ಏತಕ್ಕೆ ನೀವು ನೀವು ಹೇಳುತ್ತಾ ಇಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಒಲ್ಲದೇ ಇದ್ದುದನ್ನು ನಮ್ಮ ಬಾಯಿಂದ ತೆಗೆಸಬೇಕು ಅಂತ ಮಾಡಿದ್ದಾರೆ. ವಿರೋಧ ಪಕ್ಷದವರೇ ಇರಲಿ, ಕಾಂಗ್ರೆಸ್ ಪಕ್ಷದವರೇ ಇರಲಿ ಇಬ್ಬರೂ ಕೂಡ ಸೇರಿ ರಾಜ್ಯಭಾರ ಮಾಡಬೇಕು ಅನ್ನುವುದು ಅವರಿಗೆ ಗೊತ್ತಿದೆ. ಆದರೆ ನಮ್ಮ ಮೇಲಿನ ಆಪಾದನೆಗಳನ್ನು ನೀವು ಹಾಕಬೇಕಾದರೆ ಅದಕ್ಕೆ ಸ್ವಲ್ಪ ರೂಲ್ಸ್‌ಗಳು ಇವೆ, ಅವೆಲ್ಲಾ ನೋಡಬೇಕು. ನಾವು ಕಾನೂನಿನ ಚೌಕಟ್ಟಿನೊಳಗೆ ಹೋಗಬೇಕು.

ಇನ್ನು ಕಾಡುಮೃಗಗಳ ಬಗೆ ಮಾತನಾಡಿದ್ದಾರೆ. ಸಂತೋಷ ಕೋಣಂದೂರು ಲಿಂಗಪ್ಪನವರು ಕಾಡಾನೆಗಳ ಬಗ್ಗೆ ಮತ್ತು ಕಾಡು ಮೃಗಗಳ ಬಗ್ಗೆ ಮಾತನಾಡಿದರು. ಕಾಡುಮೃಗಗಳನ್ನು ಸಂರಕ್ಷಣೆ ಮಾಡುವ ರೀತಿಯಲ್ಲಿ ಅವರು ಹೇಳಬಹುದಾಗಿತ್ತು. ಇನ್ನೂ ಜೂ ಬಗ್ಗೆಯೂ ಸಹ ಹೇಳಿದ್ದಾರೆ. ನಾನು ಈ ಬಗೆ ಹೇಳುವುದು ಇಷ್ಟೆ. ಈ ಜೂ ಬಗೆ ಎಲ್ಲರೂ ಕೂಡ ಆಸ್ಥೆ ವಹಿಸಿ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಆ ಕಾಡು ಮೃಗಗಳನ್ನು ಕಾಪಾಡುವ ದೃಷ್ಟಿಯಿಂದ ಇದನ್ನು ಸಂರಕ್ಷಣೆ ಮಾಡುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಈ ದೃಷ್ಟಿಯಿಂದ ನನ್ನ ಗಮನವನ್ನು ಸೆಳೆದ ಎಲ್ಲ ಮಾನ್ಯ ಸದಸ್ಯರಿಗೂ ವಂದಿಸುತ್ತೇನೆ. ಕಾಡಾನೆಗಳಿಗಿಂತಲೂ ಕಾಡನ್ನು ಕಡಿಯುವ ಮನುಷ್ಯರು ಹೆಚ್ಚು ತೊಂದರೆ ಕೊಡುತ್ತಿದ್ದಾರೆ. ಒಮ್ಮೊಮ್ಮೆ ವಿಚಾರ ಮಾಡಿದಾಗ, ಆನೆಗಳಿಗೆ ಆಸರೆಯಾದ ಕಾಡನ್ನು ಮನುಷ್ಯರು ಕಡಿದುದರಿಂದಲೋ ಏನೋ ಅವು ಸಿಟ್ಟಾಗಿ ಮನುಷ್ಯರ ಮೇಲೆ ದಾಳಿ ಮಾಡುತ್ತವೆ ಎಂದು ನನಗನ್ನಿಸುತ್ತದೆ. ಆನೆಗಳೇನಾದರೂ ಅತಿಕ್ರಮಣ ಮಾಡಿದರೆ ಅವುಗಳನ್ನು ಯೋಗ್ಯ ರೀತಿಯಲ್ಲಿ ಹಿಡಿದು ಅವುಗಳನ್ನು ಇಲ್ಲೇ ಕಾಪಾಡುವುದೋ ಅಥವಾ ಬೇರೆಲ್ಲಿಗಾದರೂ ಕಳುಹಿಸುವ ವ್ಯವಸ್ಥೆ ಮಾಡೋಣ.

7-00 ಪಿ. ಎಂ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದ ಅಧಿಕಾರಿಗಳು ಹೊಡೆದುದರ ಪರಿಣಾಮವಾಗಿ ಆನೆಗಳು ಸತ್ತಿವೆ.

ಶ್ರೀ ಕೆ. ಹೆಚ್. ಪಾಟೀಲ್.—ಫುಡ್‌ಗ್ರೇನ್ಸ್ ವಿಚಾರದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು 1972ರಿಂದ ಇಲ್ಲಿಯವರೆಗೆ ಎಷ್ಟೆಷ್ಟು ಸಪ್ಲೈ ಮಾಡಲಾಗಿದೆ ಎನ್ನುವ ವಿವರ ಕೇಳಿದ್ದಾರೆ. ಅವರು ಈ ಬಗ್ಗೆ ನನಗೆ ನನಗೆ ಮೊದಲೇ ಸೂಚನೆ ಕೊಟ್ಟಿದ್ದರೆ, ನಾನು ಅವರಿಗೆ ವಿವರಗಳನ್ನು ಕೊಡಬಹುದಾಗಿತ್ತು ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಈ ಬಗೆ ವಿಚಾರಿಸಿದೆ ಈ ವರ್ಷದ ಮಾಹಿತಿಯಾಗಿದ್ದರೆ ನಾನು ಕೊಡುತ್ತಿದ್ದೆ, ಇದು 1972ನೇ ಇಸವಿಯಿಂದ ಇರುವುದರಿಂದ, ಈ ಬಗೆ ನಾನು ವಿಚಾರ ಮಾಡಿ ಇನ್ನು ನಾಲ್ಕೈದು ದಿವಸಗಳಲ್ಲಿ ಈ ಸದನದಲ್ಲಿ ಅದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸೊಂಡೂರು ಮ್ಯಾಂಗನೀಸ್ ವಿಚಾರವಾಗಿ ಅವರು ಬಹಳವಾಗಿ ಮಾತನಾಡಿದ್ದಾರೆ. ಯಾರು ಅಧಿಕಾರದಲ್ಲಿರುತ್ತಾರೆ ಅವರ ಮೇಲೆ ದೂರುಗಳು ಬಹಳ. ದೂರುಗಳು ಬರಬೇಕು ಇಲ್ಲದಿದ್ದರೆ, ಅದು ಪ್ರಜಾಪ್ರಭುತ್ವವೆನಿಸುವುದಿಲ್ಲ. ಆದರೆ, ಅಧಿಕಾರದಲ್ಲಿ ಯಾರು ಇರುತ್ತಾರೆ ಅವರ ಮೇಲೆ ಸಣ್ಣದಿದ್ದರೆ, ಅದನ್ನು ರಾಹುಗನ್ನಡಿ ಮಾಡಿ ತೋರಿಸಬಾರದೆಂಬುದು ನನ್ನ ಅಭಿಪ್ರಾಯ. ಆರೋಪಗಳನ್ನು ಮಾಡುವಾಗ ಸ್ವಲ್ಪ ಆಲೋಚನೆ ಮಾಡಿ ಮಾಡಬೇಕೆನ್ನುವುದು ನನ್ನ ಪ್ರಾರ್ಥನೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಸೊಂಡೂರು ಮ್ಯಾಂಗನೀಸ್ ಕಂಪನಿ ವಿಚಾರಮಾತನಾಡುತ್ತ ಮಾನ್ಯಘೋರ್ಪಡೆಯವರ ಹೆಸರನ್ನು ಪ್ರಸ್ತಾಪ ಮಾಡಿದರು. ವಾಸ್ತವವಾಗಿ ಅವರ ಹೆಸರು ಈ ಫೈಲಿನಲ್ಲಿ ಇಲ್ಲವೇ ಇಲ್ಲ ಇಲ್ಲಿ ಸೊಂಡೂರು ಮ್ಯಾಂಗನೀಸ್ ಅಂಡ್ ಐರನ್ ಓರ್ ಎಂದು ಮಾತ್ರ ಇದೆ. ಈ ಫೈಲನ್ನೂ ಘೋರ್ಪಡೆಯವರು ನೋಡಿಲ್ಲ. ಈ ಮಾತನ್ನು ನಾನು ಈ ಫೈಲನ್ನು ನೋಡಿ ಹೇಳುತ್ತಿದ್ದೇನೆ; ನನ್ನ ಮೇಲೆ ವಿಶ್ವಾಸವಿಡಿ. ಮುಖ್ಯಮಂತ್ರಿಗಳು ಮತ್ತು ಮುಖ್ಯ ಕಾರ್ಯದರ್ಶಿಯವರು ಕೂಡಿ ಈ ಫೈಲನ್ನು ಪರಿಶೀಲನೆ ಮಾಡಿದ್ದಾರೆ. ಪರಿಶೀಲನೆ ಮಾಡಿ, ಇದನ್ನು ಕೇವಲ ಸೊಂಡೂರು ಮ್ಯಾಂಗನೀಸ್ ಸಲುವಾಗಿಯೇ ಮಾಡಲಿಲ್ಲ ಎಲ್ಲ ಫೈರ್‌ವುಡ್ ಇಂಡಸ್ಟ್ರೀಸ್‌ಗೆ ಒಂದೇ ಬೆಲೆ ನಿಗದಿ ಮಾಡಬೇಕೆಂದು ಹೇಳಿ ಮೊದಲಿದ್ದ 25 ರೂಪಾಯಿಗಳನ್ನು 35ಕ್ಕೆ ಏರಿಸಿದ್ದಾರೆ. ಈ ಬೆಲೆ ಬೀಳುವುದು ಸ್ಥಳದಲ್ಲಿ. ಆದರೆ, ಅದು ಗೊತ್ತಾದ ಸ್ಥಳಕ್ಕೆ ಮುಟ್ಟಬೇಕಾದರೆ ಸುಮಾರು 100 ರೂಪಾಯಿಗಳಾದರೂ ಬೇಕಾಗುತ್ತದೆ. ಫಿಲ್ಲಿಂಗ್ ಚಾರ್ಜ್ ಹತ್ತು ಪರ್ಸೆಂಟ್ ಇದರ ಮೇಲೆ ಬೀಳುತ್ತದೆ. ಅಲ್ಲದೆ ಸಾಗಾಣಿಕೆ ವೆಚ್ಚವೂ ಇದರ ಮೇಲೆ ಬೀಳುತ್ತದೆ. ಈ ರೀತಿಯಾಗಿ ಭದ್ರಾವತಿ ಕಾರ್ಖಾನೆಗೆ, ಸೊಂಡೂರು ಕಾರ್ಖಾನೆಗೆ, ಪನ್ನಾಯಮ್ ಸಿಮೆಂಟ್ ಮತ್ತು ಮಿನರಲ್ ಕಾರ್ಖಾನೆಗೆ ಗೋವಾದ ಬಳಿ ಕಲ್ಲಿದ್ದಲು ತಯಾರಿಸುವ ಕಾರ್ಖಾನೆಗೆ ಮತ್ತಿತರ ಕಾರ್ಖಾನೆಗಳಿಗೆ ನಿಗದಿ ಮಾಡಿದ್ದಾರೆ, ಇದೇ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಅರ್ಜಿಗಳು ಬಂದಿದ್ದು, ಅವರೆಲ್ಲರೂ ಕಲ್ಲಿದ್ದಲನ್ನು ಕಡಿಮೆ ದರದಲ್ಲಿ ಮಾಡುತ್ತೇವೆ ನಮಗೂ ಕೊಡಿ ಎಂದು ಕೇಳಿದಾಗ ಅವರಿಗೆ ಏತಕ್ಕೆ ಕೊಡಲಿಲ್ಲ ಮತ್ತು ಏತಕ್ಕೆ ಕೊಡಬಾರದು ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ನಾನು ಅನುಮೋದಿಸುತ್ತೇನೆ. ಸಣ್ಣ ಸಣ್ಣ ಉದ್ದಿಮೆಗಳು ಬೆಳೆದು ಭದ್ರಾವತಿ ಕಾರ್ಖಾನೆಗೆ ಬೇಕಾಗುವ ಉರುವಲನ್ನು ತಯಾರು ಮಾಡಿ ಕೊಡಲಿ ಎನ್ನುವುದು ನಮ್ಮ ಆಶಯ ಇನ್ನು ಮಾನ್ಯ ಸದಸ್ಯರು ಅಗ್ರಿಮೆಂಟ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. ಅಗ್ರಿಮೆಂಟ್‌ನಲ್ಲಿ

> "Whereas the Company has before singing this agreement deposited with the Chief Conservator of Forests a sum of Rs.25,000-, the Government agreed to supply to the Company firewood to the extent of 80,000 tonnes subject to the availability from road side depots in Kanara Circle,"

ಎಂದು ಹೇಳಿದ್ದಾರೆ. ಆ ಮೇಲೆ ಕಂಪನಿಯವರು ಬೆಲೆಯನ್ನು ನಿಗದಿ ಮಾಡಿದ್ದಾರೆ.

> "The Company shall pay the value of the firewood fixed by the Forest Department based on the current signiorage rate plus cost of the extraction and delivery of the fire-

wood incurred by the Department plus 10... supervision charges on the cost of extraction and delivery Rs. 35 per tonne whichever is higher,''

ಈ ಅಗ್ರಿಮೆಂಟ್ ಆಗಿದ್ದು 17ನೇ ಮಾರ್ಚ್‌ನಲ್ಲಿ. ಸೊಂಡೂರು ಮ್ಯಾಂಗನೀಸ್ ಕಾರ್ಖಾನೆಗೆ ಈ ಕೆಲಸ ಮಾಡಲು ಕೊಟ್ಟಿದ್ದು ರಾಜ್ಯಪಾಲರ ಕಾಲದಲ್ಲಿ. ಅನಂತರ ಅದು ರಿವೈಜ್ ಆಗಿತ್ತು. 17ನೇ ಮಾರ್ಚ್‌ನಲ್ಲಿ ಆದದ್ದು ಕೇವಲ ರೇಟ್ ರಿವಿಜನ್ ಅಷ್ಟೆ.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗಿದ್ದರೆ ರಾಜ್ಯಪಾಲರ ಕಾಲದಲ್ಲಿ ಅಗ್ರಿಮೆಂಟನ್ನು ಎಗ್ಸಿಕ್ಯೂಟ್ ಮಾಡುವ ಸಂದರ್ಭ ಈಗ ಏತಕ್ಕೆ ಬಂತು?

ಶ್ರೀ ಕೆ. ಹೆಚ್. ಪಾಟೀಲ್.—ಅನೇಕ ಸಂದರ್ಭಗಳಲ್ಲಿ ಅಗ್ರಿಮೆಂಟ್ ಇಲ್ಲದೆ ಕೊಟ್ಟಿವು ಬಹಳವಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಮಾತನಾಡುತ್ತಾ, ಸಬ್ಸಿಡಿ ರೇಟನ್ನು ನಿಗದಿಮಾಡಿ ಎಲ್ಲರಿಗೂ ಅಲಾಟ್‌ಮೆಂಟ್ ಮಾಡಲಾಗಿದೆ ಎಂದು ಹೇಳಿದ್ದಾರೆ. ಅವರಿಗೆ ಕೊಡುವಾಗ ಆಗ ಇದ್ದ ರೇಟು ಎಷ್ಟು ಅವರಿಗೆ ಎಷ್ಟೆಷ್ಟು ಅಲಾಟ್‌ಮೆಂಟ್ ಕೊಟ್ಟಿದ್ದಾರೆ ಭದ್ರಾವತಿ ಉದ್ದಿಮೆಗೆ ಕೊಟ್ಟಿರುವುದು ಬಹಳ ಒಳ್ಳೆಯದು ಇನ್ನೂ ಕಡಿಮೆ ದರದಲ್ಲಿ ಅವಕ್ಕೆ ಕೊಟ್ಟರೂ ಬೇರೆ ರೂಪದಲ್ಲಿ ಅದು ಸರ್ಕಾರಕ್ಕೆ ಬರುತ್ತದೆ ಆದರೆ, ಖಾಸಗಿ ಉದ್ದಿಮೆದಾರರಿಗೆ ಕೊಟ್ಟಿರುವುದು ಯೋಗ್ಯವೆ ಎಂದು ನಾನು ಪ್ರಶ್ನೆ ಮಾಡುತ್ತಿರುವುದು ಮಾನ್ಯ ಘೋರ್ಪಡೆಯವರು ಕಂಪನಿಯ ಡೈರೆಕ್ಟರ್ ಸ್ಥಾನಕ್ಕೆ ರಾಜಿನಾಮೆ ಕೊಟ್ಟಿರಬಹುದು. ಆದರೆ, ಆ ಕಂಪನಿಯ ಬಗ್ಗೆ ಅವರಿಗೆ ಆಸಕ್ತಿ ಇದೆ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಆ ಕಂಪನಿ ಅವರದೇ. ಬೇರೆಯವರು ಕೇಳಿದಾಗ ನಮ್ಮ ಬಳಿ ಮರವಿಲ್ಲ ಎಂದು ಹೇಳಿ ಇವರಿಗೆ ಕೊಡುವುದರ ಔಚಿತ್ಯವೇನಿತ್ತು? ಇದರ ವಿವರಣೆ ಸ್ವಲ್ಪ ನನಗೆ ಕೊಡಿ.

ಶ್ರೀ ಕೆ. ಎಫ್. ಪಾಟೀಲ್.—ದೊಡ್ಡ ದೊಡ್ಡ ಕಾರ್ಖಾನೆಗಳವರಿಗೆ ಇದ್ದಿಲು ಮಾಡುವುದಕ್ಕೆ ಉರುವಲು ಕೊಡುವುದರಿಂದ ಪರಿಣಾಮವೇನಾಗುತ್ತದೆಂಬುದನ್ನು ಸರ್ಕಾರದವರು ಬಲ್ಲರೆ? ಜನಸಾಮಾನ್ಯರಿಗೆ ಉರುವಲು ಅತ್ಯಂತ ಅವಶ್ಯಕ ಸಾಧನವಾಗಿದೆ. ದೊಡ್ಡ ದೊಡ್ಡ ಕಾರ್ಖಾನೆಗಳಿಗೆ ಕೊಡುವುದರಿಂದ ಆತ ಉಪಯೋಗಿಸುವ ಉರುವಲು ಧಾರಣೆ ಹೆಚ್ಚಾಗುವ ಸಂಭವವುಂಟು. ಅಗತ್ಯವಾಗಿರುವ ಉರುವಲನ್ನು ಬಡವರಿಗೆ ಸರಬರಾಜುಮಾಡಿ, ಕಾರ್ಖಾನೆಗೆ ಬೇಕಾಗುವ ಶಾಖವನ್ನು ಪಡೆಯಲು ವೈಜ್ಞಾನಿಕ ವಿಧಾನವನ್ನು ಬಳಸಿಕೊಳ್ಳುವ ಪ್ರಯತ್ನ ಮಾಡಬೇಕು. ಬಡವನ ದಿನನಿತ್ಯದ ಉಪಜೀವನಕ್ಕೆ ಬೇಕಾದ ಉರುವಲನ್ನು ಈ ರೀತಿ ಕಾರ್ಖಾನೆಗಳವರಿಗೆ ಕೊಡಬಾರದೆನ್ನುವುದು ನನ್ನ ಅಭಿಪ್ರಾಯ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ದೇವೇಗೌಡರು ಹೇಳಿದ ಮಾತನ್ನು ನಾನು ಕೇಳಿದೆ. ಪೆಂಡಿಂಗ್ ಇದ್ದುದನ್ನು ಬಿಟ್ಟು ಬೇರೆ ಮಾಡಿದ್ದೀರಿ ಎಂದು ಕೇಳುತ್ತಿದ್ದಾರೆ. ಆದರೆ ಅವರು ಹೇಳಿದ ರೀತಿಯಲ್ಲಿ ಮಾಡಿರುವುದು ನನ್ನ ಎದುರಿನಲ್ಲಿದ್ದ ಫೈಲಿನಲ್ಲಿ ಯಾವುದೂ ಇಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಆ ಫೈಲು ಮಾನ್ಯ ಘೋರ್ಪಡೆಯವರದ್ದು

ಶ್ರೀ ಕೆ. ಹೆಚ್. ಪಾಟೀಲ್.—ನಾನು ಅದರ ಹಿಂದಿನ ಫೈಲನ್ನೂ ಕೂಡ ನೋಡಿದ್ದೇನೆ. ಅದರಲ್ಲಿ not only for Sandur, but for all such industries ಎಂದು ಬರೆದಿದ್ದಾರೆ. ನಾನು ಇದ್ದುದನ್ನು ಹೇಳಿದ್ದೇನೆ.

ಇನ್ನು ಮಾನ್ಯ ಪಾಟೀಲ್‌ರವರು ಸಣ್ಣವರಿಗೆ ಉರುವಲು ಬೇಕಾಗುತ್ತದೆ ಎಂದು ಹೇಳಿದರು. ಅವರ ಮಾತನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಬಡವರಿಗೆ ಉರುವಲು ಬೇಕಾಗುತ್ತದೆ, ಬಿದಿರು ಬೊಂಬುಗಳೂ ಬೇಕಾಗುತ್ತದೆ. ಅದನ್ನು ನಾವು ಗಮನದಲ್ಲಿಟ್ಟುಕೊಂಡಿದ್ದೇವೆ. ಬಿದಿರು ಬೊಂಬುಗಳು ಪೇಪರ್ ಮಿಲ್‌ಗಳಿಗೆ ಅವಶ್ಯಕವಾಗಿ ಬೇಕಾಗಿರುವುದರಿಂದ ಆ ಉದ್ಯಮಗಳಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಅವರಿಗೆ ಕಡಿಮೆ ಬೆಲೆಯಲ್ಲಿ ಸಪ್ಲೈ ಮಾಡುತ್ತಿದ್ದೇವೆ ಆದರೆ ಹೊರಗಡೆ ಇದರ ಬೆಲೆ ಜಾಸ್ತಿ ಇದೆ, ಇದರ ಬಗ್ಗೆ ತಮಗೆ ನಾನು ಏನೂ ಹೇಳಬೇಕಾಗಿಲ್ಲ. ಏತಕ್ಕೆಂದರೆ ಎಲ್ಲೆಲ್ಲಿ ಯಾವ ಯಾವ

ರೇಟ್ ಇದೆ ಎಂಬುದು ಮಾನ್ಯ ಕಾಗೋಡು ತಿಮ್ಮಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ಶಿವಮೊಗ್ಗಾದಲ್ಲಿ ೯೦-೯೫ ರೂಪಾಯಿ ಇದ್ದರೆ ಇಲ್ಲಿ ೧೦೦ ರೂಪಾಯಿ ಇರುತ್ತದೆ. ಆದರೆ ಸರ್ಕಾರಿ ಡಿಪೋಗಳಲ್ಲಿ ಅಷ್ಟೊಂದು ಹೆಚ್ಚು ರೇಟ್ ಇರುವುದಿಲ್ಲ. ಒಂದು ವೇಳೆ ಅದರಲ್ಲಿ ಏನಾದರೂ ತಪ್ಪಾಗಿದ್ದರೆ, ಅಂಥಾದ್ದನ್ನು ನನ್ನ ಗಮನಕ್ಕೆ ತಂದರೆ ಆಗ ನಾವೂ ನೀವೂ ಕೂಡಿ ಯೋಚನೆ ಮಾಡೋಣ. ಮಾನ್ಯ ಸದಸ್ಯರಾದ ಶ್ರೀಮಾನ್ ಪಾಟೀಲ್‌ರವರು ಹೇಳಿದಂತೆ ಇವತ್ತು ನಮ್ಮಲ್ಲಿ ಸಣ್ಣವರಿಗೆ ಉರುವಲು ಸಿಕ್ಕುವಂತೆ ನಾವು ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ನಾವು ಇವತ್ತು ರಾಜ್ಯದ ಹೆಚ್ಚು ಭಾಗದಲ್ಲಿ ಫಾರೆಸ್ಟನ್ನು ಬೆಳೆಸಬೇಕೆಂದು ಕಾರ್ಯಕ್ರಮ ಹಾಕಿಕೊಂಡಿದ್ದೇವೆ ಇದರಿಂದ ಸಣ್ಣವರಿಗೆ ಉರುವಲು ಸಿಕ್ಕುವುದಕ್ಕೆ ಬಹಳ ತೊಂದರೆಯಾಗಿದೆ. ಇದು ಸರ್ಕಾರದವರಿಗೂ ಗೊತ್ತಿದೆ. ಈ ತೊಂದರೆಯನ್ನು ನಿವಾರಿಸಲು ಫಾರೆಸ್ಟನಲ್ಲಿ ಕೆಲವು ಭಾಗವನ್ನು ಸಣ್ಣವರಿಗೆ ಉರುವಲಿಗೋಸ್ಕರ ಮೀಸಲಾಗಿಡಬೇಕಾದುದು ಅವಶ್ಯಕವಾಗಿದೆ. ಆದರೆ ಈ ಉರುವಲನ್ನು ಜನಗಳಿಗೆ ಯಾವಾಗಲೂ ಖಾಯಂ ಆಗಿ ಕೊಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ, ಚಾರ್‌ಕೋಲ್‌ನ್ನು ಉಪಯೋಗ ಮಾಡುವುದನ್ನು ಬಂದ್ ಮಾಡಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಸನ್ಮಾನ್ಯ ಅಧ್ಯಕ್ಷಿಣಿಯವರೆ ನಮ್ಮ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ವಾಸ್ತವವಾಗಿ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ ಎಂಬುದನ್ನು ಹೇಳಬಹುದಾಗಿತ್ತು. ಆದರೆ ಅದಕ್ಕೆ ಈಗ ಸಮಯ ಇಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಈ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಇವತ್ತು ಒಳ್ಳೆಯ ಕಾರ್ಯಕ್ರಮಗಳನ್ನು, ತಮ್ಮದೇ ಆದ ರೀತಿಯಲ್ಲಿ ಹಾಕಿಕೊಂಡು ಅರಣ್ಯವನ್ನು ಬೆಳೆಸಿ ಅದರಿಂದ ನಮ್ಮ ರಾಜ್ಯಕ್ಕೆ ಉತ್ಪನ್ನವನ್ನು ಒದಗಿಸಿಕೊಡುವುದರ ಜೊತೆಗೆ ಬೇರೆ ರಾಜ್ಯಗಳಿಗೂ ಕೂಡ ಆ ಉತ್ಪನ್ನವನ್ನು ದೊರಕಿಸಿಕೊಡುವ ಪ್ರಯತ್ನ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕ್ಯಾಷೂನಟ್, ಕೋಕೋ, ಮಸಾಲೆ ಪದಾರ್ಥಗಳನ್ನು ಬೆಳೆಸುವುದರಲ್ಲಿ ಫಾರೆಸ್ಟ್ ಡಿಪಾರ್ಟ್‌ಮೆಂಟ್ ನವರು ಬಹಳ ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಇದನ್ನೆಲ್ಲಾ ಹೇಳುವುದಕ್ಕೆ ಈಗ ಸಮಯ ಇಲ್ಲದಿರುವುದರಿಂದ ಮುಂದೆ ಯಾವಾಗಲಾದರೂ ಸಮಯ ಬಂದಾಗ ವಿವರವಾಗಿ ಹೇಳುತ್ತೇನೆ. ನಮ್ಮ ಇಂಡಸ್ಟ್ರೀಸ್ ಕಾರ್ಪೊರೇಷನ್ ಕೂಡ ಹಿಂದಿನಂತೆ ಸುಮ್ಮನೆ ಕೂಡದೆ ಈಗ ಚೆನ್ನಾಗಿ ಕೆಲಸ ಮಾಡುತ್ತಿದೆ ಈ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು ಹಿಂದೆ ಮಾಡಿದ್ದ ಕೆಲಸಗಳನ್ನು ಕಾರ್ಯರೂಪಕ್ಕೆ ತಂದಿದ್ದರೆ ಜನಗಳಿಗೆ ಎಷ್ಟೋ ಅನುಕೂಲವಾಗುತ್ತಿತ್ತು. ಉದಾಹರಣೆಗೆ ಹೇಳುವುದಾದರೆ ಡೀ ಹೈಡ್ರೇಷನ್ ಪ್ಲಾಂಟ್. ಇದರಿಂದ ಹಸೀ ಹುಲ್ಲಿನಲ್ಲಿರುವ ತೇವಾಂಶವನ್ನು ತೆಗೆದು ಇಟ್ಟುಕೊಂಡಿದ್ದು, ಬೇಕಾದಾಗ ಈ ಹುಲ್ಲನ್ನು ನೀರಿನಲ್ಲಿ ಹಾಕಿದರೆ ಮತ್ತೆ ಅದು ಹಸುರಾಗಿ ದನಗಳಿಗೆ ತಿನ್ನುವುದಕ್ಕೆ ಹುಲ್ಲು ಸಿಕ್ಕುತ್ತದೆ. ಇದನ್ನು ಕೆಲವು ತಾಂತ್ರಿಕ ತೊಂದರೆಯಿಂದ ಮಾಡಲಾಗಲಿಲ್ಲ. ಈ ಯಂತ್ರವನ್ನೂ ಕೂಡ ನೋಡಿಕೊಂಡು ಬಂದಿದ್ದೇವೆ ಮುಂದಿನ ವರ್ಷ ಅದನ್ನು ತರುತ್ತೇವೆ. ಅದಕ್ಕೆ ಹೆಚ್ಚಿನ ಹಣ ಬೇಕಾಗಿರುವುದರಿಂದ ನಾವು ಸ್ವಲ ಹಾಕಿ ಉಳಿದ ಹಣವನ್ನು ಇಂಡಿವಿಜುಯಲ್ಸ್‌ನಿಂದ, ಬ್ಯಾಂಕ್‌ಗಳಿಂದ ತೆಗೆದುಕೊಳ್ಳುತ್ತೇವೆ. ಈ ಪ್ಲಾಂಟನಿಂದ ಉತ್ತಮ ಕೆಲಸವಾಗುತ್ತದೆಂದು ನಾನು ನಂಬಿದ್ದೇನೆ ಇಷ್ಟೇ ಅಲ್ಲದೆ ಇನ್ನೂ ಹೆಚ್ಚಿಗೆ ಪ್ರಯತ್ನ ಮಾಡೋಣ. ಇದು ಆದಷ್ಟು ತೀವ್ರದಲ್ಲಿ ಬರಲಿ ಎಂದು ಹಾರೈಸುತ್ತೇನೆ.

ಇನ್ನು ಫುಡ್ ಕಾರ್ಪೊರೇಷನ್ ವಿಷಯದಲ್ಲಿ ಹೇಳುವುದಾದರೆ ಈ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲೂ ಆಹಾರ ಸಾಮಗ್ರಿಗಳನ್ನು ಸ್ಟಾಕ್ ಮಾಡಲು ಗೋಡೌನ್‌ಗಳನ್ನು ಕಟ್ಟಬೇಕು. ಆದರೆ ಅವುಗಳನ್ನೆಲ್ಲಾ ಸರ್ಕಾರದಿಂದಲೇ ಕಟ್ಟಿಸುವುದಕ್ಕೆ ಈಗ ಸಾಧ್ಯವಿಲ್ಲ. ಆದುದರಿಂದ ಈ ಫುಡ್ ಕಾರ್ಪೊರೇಷನ್‌ನವರೇ ಒಂದು ಸ್ಕೀಂ ತಯಾರು ಮಾಡಿ ಆಯಾಯ ಜಿಲ್ಲೆಗಳಲ್ಲಿ ಗೌಡೌನ್‌ಗಳನ್ನು ಕಟ್ಟಿಸಿ ಅದರ ಮೂಲಕ ರಾಜ್ಯದ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಹಿಂದೆ ಇದ್ದ ಫಾರೆಸ್ಟ್ ಮಿನಿಸ್ಟರು ಮಾಡಿದ್ದ ಕೆಲವು ಹುಕುಂಗಳನ್ನು ತಾವು ಅಧಿಕಾರಕ್ಕೆ ಬಂದಮೇಲೆ ಅವುಗಳನ್ನು ರದ್ದು ಮಾಡಿದ್ದೀರಿ ಎಂದು ಕೇಳಿದ್ದೇವೆ, ಅದನ್ನು ತಾವು ಮತ್ತೊಮ್ಮೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಕೆ. ಹೆಚ್. ಪಾಟೀಲ್.—ನಾನು ಅಧಿಕಾರಕ್ಕೆ ಬಂದಮೇಲೆ ಹಿಂದಿನ ಫಾರೆಸ್ಟ್ ಮಿನಿಸ್ಟರು ಮಾಡಿದ್ದ ಹುಕುಂಗಳನ್ನು ರದ್ದು ಮಾಡಿದ್ದೇನೆಂದು ತಾವು ಹೇಳುತ್ತಿದ್ದೀರಿ. ಅದು ಯಾವುದು, ಏತಕ್ಕಾಗಿ ಮಾಡಿದೆ ಎಂಬುದನ್ನು ನೋಡೋಣ. ಒಂದು ವೇಳೆ ಅದು ತಪ್ಪಾಗಿದ್ದರೆ ಅಂಥಾದ್ದನ್ನು

ತಿದ್ದಿಕೊಳ್ಳೋಣ. ಹಾಗೆ ತಪ್ಪನ್ನು ತಿದ್ದಿಕೊಳ್ಳುವುದು ಒಳ್ಳೆಯವರ ಲಕ್ಷಣ. ಒಟ್ಟಿನಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ನಾನು ಕೇಳಿಕೊಳ್ಳುವುದು ಏನೆಂದರೆ ಈ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಮತ್ತು ಫುಡ್ ಕಾರ್ಪೊರೇಷನ್ ಬಗ್ಗೆ ಈ ಸದನದ ಎರಡೂ ಬಾಬಿನ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯದ ಜನತೆಯ ಕಲ್ಯಾಣಕ್ಕೋಸ್ಕರವಾಗಿ ಆ ಸಲಹೆಗಳನ್ನು ಕಾರ್ಯಗತ ಮಾಡುವಾಗ ಒಳ್ಳೆಯ ಸತ್ಸಂಪ್ರದಾಯಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲಾ ತಮ್ಮ ಸಹಕಾರ ನಮಗೆ ಅತಿ ಮುಖ್ಯವೆಂದು ಹೇಳಿ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೂ ಮತ್ತು ತಮಗೂ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

MADAM SPEAKER.—I will put the demands to the vote of the House. The question is .

> "That the respective sums not exceeding the amount mentioned in the list of demands be granted to the Government to defray the charges which will come in course of payment during the financial year ending 31st day of March 1978 in respect of Demand Nos. 44 and 47".

The Motion was adopted and the Demands ware voted.

DEMAND NO. 44—FOOD AND CIVIL SUPPLIES

Madam/Sir, on the recommendation of the Governor, I beg to move :

> "That a sum not exceeding Rs. 52, 46, 32,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 44 "Food and Civil Supplies".

DEMAND NO. 47—FOREST

Madam/Sir, on the recommendation of the Governor, I beg to move :

> "That a sum not exceeding Rs. 17 92,00,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1978 in respect of Demand No. 47 "Forest".

As directed by the chair the motion of Demands for grants adopted by the House are re produced below.

MADAM SPEAKER.—Now the House will stand adjourned and meet again tomorrow at 1-00 P. M.

The House adjourned at Twenty Minutes past Seven of the Clock to meet again at One of the Clock on Wednesday the 15th June 1977.